
ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 18, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ವಿಸ್ಮಯ ವೈರುಧ್ಯ




ಬಾಗಲಕೋಟೆಗೆ ಅಡರಿಕೊಂಡ ಡಿ.ಸಿ. ನಾಯಕ್



ನಾಗಾರ್ಜುನ: ಕುಮಾರಣ್ಣನ ಹಟ ಮೀನುಗಾರರಿಗೆ ಚಟ್ಟ



ಹಿಂದೂ ಸೊಸೆಗೆ ಇಬ್ರಾಹಿಂ ಕಾಟ



ಹೋಮ

ಈಗ ಯಡ್ಡಿ ಸರದಿ

ಫಣೀಂದ್ರರಿಗೊಂದು ಪತ್ರ!

ಫಣೀಂದ್ರರವರೇ,

ಅಂದು ನಮ್ಮ ಕಚೇರಿಗೆ ನೀವು ಭೇಟಿ ಕೊಟ್ಟು ಹೋದ ಮೇಲೆ ನೀವು ಕೇಳಿದ ಒಂದು ಪ್ರಶ್ನೆ ನನ್ನ ಕಿವಿಯಲ್ಲಿ ಗುಂಯ್‌ಗುಟ್ಟುತ್ತಲೇ ಇದೆ. ಚಿಕ್ಕಂದಿನಿಂದಲೂ ಆರೆಸ್ಸೆಸ್‌ನ ಸ್ವಯಂಸೇವಕರಾದ ನೀವು ಈಗ ಬೆಂಗಳೂರಿನಲ್ಲಿ ಅದರ ಪೂರ್ಣಾವಧಿ ಕಾರ್ಯಕರ್ತರಾಗಿ ಕೆಲಸ ಮಾಡಲು ಪ್ರಾರಂಭಿಸಿದ್ದೀರಿ. "ಈ ಸಂಘಟನೆಗೆ ನಾನು ಕೊಡುತ್ತಿರುವ ಸಮಯ ದೇಶಕ್ಕಾಗಿ ಸದುಪಯೋಗವಾಗಬೇಕೆಂಬುದು ನನ್ನ ಕಾಳಜಿ. ಹೀಗಾಗಿ ಅದರ ಬಗ್ಗೆ ವಿರುದ್ಧ ನಿಲುವನ್ನು ಹೊಂದಿರುವವರ ಹತ್ತಿರವೂ ಚರ್ಚೆ ಮಾಡಿ ತಪ್ಪಿದ್ದರೆ ತಿದ್ದಿಕೊಳ್ಳಬೇಕೆಂಬ ಆಶಯದಿಂದ ನಿಮ್ಮ ಕಚೇರಿಗೆ ಬಂದೆ" ಎಂದು ನೀವು ಹೇಳಿದಿರಿ.

ಅದು ನಿಮಗೆ ಮರೆತುಹೋಗಿದೆಯೋ ಏನೋ ತಿಳಿದಿಲ್ಲ. ಆದರೂ ನಿಮ್ಮ ಅಮೂಲ್ಯ ಸಮಯ — ನಮ್ಮ ಸಂಪಾದಕರಾದ ಗೌರಿ ಲಂಕೇಶ್ ಮತ್ತು ಬಳಿದಾಳೆ ಈಶರವರು ವಿವರಿಸಿದಂತೆ — ದೇಶಕ್ಕೆ ಹೆಚ್ಚೆಚ್ಚು ಅಪಾಯವನ್ನು ಉಂಟು ಮಾಡದಂತೆ ತಡೆಯಬೇಕೆಂಬ ಉದ್ದೇಶದಿಂದ ನಿಮಗೆ ಆರೆಸ್ಸೆಸ್ ಹೇಗೆ ಭಾರತದ ಸಮಾಜದ ಐಕ್ಯತೆ, ಪ್ರಗತಿಗೆ ಮಾರಕ ಹೊತ್ತವರು. ನಿಮ್ಮ ಆರೆಸ್ಸೆಸ್ಸು ಈ ದೇಶವನ್ನು ಒಂದು ಬ್ರಾಹ್ಮಣ ಜಾತಿಯ ಹಿಡಿತದಲ್ಲಿರುವ, ಹಿಂದೂ-ಮುಸ್ಲಿಂ ದ್ವೇಷವನ್ನೇ ಉಸಿರಾಡುವ, ಹಿಟ್ಲರ್‌ನ ಜನಾಂಗೀಯ ಶ್ರೇಷ್ಠತೆಯ ಮೃಗತ್ವದ ಸಿದ್ಧಾಂತದಡಿ ಹಿಂದೂತ್ವವಾದಿ ದೇಶವನ್ನಾಗಿ ಕಟ್ಟಲು ಬಯಸುತ್ತದೆ.

ಚಾರ್ವಾಕ


ಶಿವಸುಂದರ್

ಅಸ್ತಿತ್ವದಲ್ಲಿರುವ ಲಿಂಗ, ಜಾತಿ, ವರ್ಗ ಅಸಮಾನತೆಗಳೆಲ್ಲವನ್ನು ಕಿತ್ತೊಗೆದು ಸಮಾಜವಾದಿ ದೇಶವನ್ನು ಕಟ್ಟಬೇಕೆಂಬುದು ನಮ್ಮ ಬಯಕೆ. ಅದಕ್ಕಾಗಿ ಶತಮಾನಗಳ ಹೋರಾಟದಿಂದ ಎಚ್ಚೆತ್ತಿರುವ ಬ್ರಾಹ್ಮಣ್ಯ ವಿರೋಧಿ ದಲಿತ ಪ್ರಜ್ಞೆ, ಶುದ್ರ ಪ್ರಜ್ಞೆಯ ಜೊತೆ ಎಚ್ಚೆತ್ತ ವರ್ಗ ಪ್ರಜ್ಞೆಯ ಆಧಾರದಲ್ಲಿ ನವ ಸಮಾಜ ಕಟ್ಟ ಬೇಕೆಂಬುದು ನಮ್ಮ ಕನಸು. ಆದರೆ ನಿಮ್ಮ ಆರೆಸ್ಸೆಸ್ಸು ಮನುಸ್ಮೃತಿಯ ಆಧಾರದಲ್ಲಿ ವರ್ಣಾಶ್ರಮವಾದಿ, ತಾರತಮ್ಯವಾದಿ ಸಮಾಜವನ್ನು; ಹೆಣ್ಣನ್ನು, ದಲಿತ ಶೂದ್ರರನ್ನು, ದುಡಿಯುವ ಜನಗಳನ್ನು ಶಾಶ್ವತವಾಗಿ ಅಡಿಯಾಳಾನ್ನಾಗಿಟ್ಟುಕೊಂಡು ಶೋಷಿಸುವ ಭಾರತವನ್ನು ಕಟ್ಟಲು ಬಯಸುತ್ತೀರಿ. ಅಂಬೇಡ್ಕರ್, ಮಾರ್ಕ್ಸ್‌ಗಳ ಕ್ರಾಂತಿಕಾರಿ ರಾಜಕೀಯ ಸಾರಾಂಶವನ್ನು ನಾವು ಪ್ರಚಾರಕ್ಕೆ ತರಲು ಬಯಸಿದರೆ ನೀವು ಅಂಬೇಡ್ಕರ್‌ಗೇ ಜನಿವಾರ ತೊಡಿಸಲು ಹೊರಟದ್ದೀರಿ. ನಮಗೆ ರೈತರ ಆತ್ಮಹತ್ಯೆ ಜಾತಿ ಮತವೆನ್ನದೆ ಕಿತ್ತು ತಿನ್ನುವ ಬಡತನ ಮುಖ್ಯವಾದರೆ ನಿಮಗೆ "ಮತಾಂತರವೇ ಈ ದೇಶದ ಅತಿ ಮುಖ್ಯ ಸಮಸ್ಯೆ" ಎಂದಿರಿ. ಮತಾಂತರಗೊಳ್ಳುವುದು, ಅದರಲ್ಲೂ ಜಾತಿ ತಾರತಮ್ಯವನ್ನು ಉಸಿರಾಡುವ, ಇತರರನ್ನು ಮನುಷ್ಯರೆಂದೇ ಭಾವಿಸದ ಬ್ರಾಹ್ಮಣ್ಯವಾದಿ ಹಿಂದುತ್ವದಿಂದ ಮತಾಂತರಗೊಳ್ಳುವುದು ಎಲ್ಲ ದಮನಿತರ ಹಕ್ಕು ಎಂಬುದು ಪ್ರಗತಿಪರರ ನಿಲುವು.


ಇದು ನಮ್ಮ ವ್ಯತ್ಯಾಸಗಳ ಪರಿ. ನಿಮ್ಮ ಆರೆಸ್ಸೆಸ್ಸು ಈ ದೇಶಕ್ಕಿರುವ ದೊಡ್ಡ ಗಂಡಾಂತರವೆಂದು ನಾವು ಭಾವಿಸುವುದು ಅದಕ್ಕೆ. ಈಗ ತೀರ್ಮಾನ ನಿಮ್ಮದು. ದೇಶವೆಂದರೆ ಮಣ್ಣಲ್ಲ, ಈ ದೇಶದ ದುಡಿಯುವ ಜನ ಎಂದು ನೀವು ಅರ್ಥ ಮಾಡಿಕೊಂಡ ದಿನ ನಿಮ್ಮ ಅಮೂಲ್ಯ ಸಮಯವನ್ನು ನೀವು ಆರೆಸ್ಸೆಸ್ಸಿಗೆ ಕೊಡುವುದರಿಂದ ಜನರಿಗೆ ಮತ್ತು ದೇಶಕ್ಕೆ ಎಂಥ ದ್ರೋಹ ಬಗೆಯುತ್ತಿದ್ದೀರೆಂದು ನಿಮಗೆ ಅರ್ಥವಾಗಬಹುದು! ಆದರೆ ನಿಮ್ಮ ಪ್ರಾಮಾಣಿಕತೆ ಏನೇ ಇದ್ದರೂ ನಿಮ್ಮಲ್ಲಿ ಬಿತ್ತಲಾಗಿರುವ ದ್ವೇಷದ ಉನ್ಮಾದ ನಿಮಗೆ ಈ ಸತ್ಯಗಳನ್ನು ಅರ್ಥಮಾಡಿಕೊಳ್ಳಲು ಬಿಡುತ್ತದೆಯೇ?

ಅದೇನೇ ಇರಲಿ. ಈ ಏಪ್ರಿಲ್ 14ರಂದು ಅಂಬೇಡ್ಕರ್ ಜಯಂತಿಯನ್ನು ರಾಘವೇಂದ್ರ ಸ್ವಾಮಿ ಮಠದಲ್ಲಿ ಆಚರಿಸುತ್ತೇವೆಂದೂ, ಅಂಬೇಡ್ಕರ್‌ರವರ ಹೆಂಡತಿಗೆ ಯಾವ ದೇವಸ್ಥಾನದಲ್ಲಿ ಪ್ರವೇಶ ಕೊಟ್ಟಿರಲಿಲ್ಲವೋ ಅಲ್ಲಿ ಪ್ರವೇಶ ಕೊಡಿಸುವುದಾಗಿಯೂ ಹೇಳಿದಿರಿ. ಇದನ್ನೇ ಹಿಂದೂತ್ವ ಉದ್ದಕ್ಕೂ ಮಾಡಿಕೊಂಡು ಬಂದಿರುವುದು. ಜೀವಂತವಾಗಿರುವಾಗ ವಿರೋಧಿಗಳನ್ನು ಬಗ್ಗು ಬಡಿದು, ಸತ್ತ ನಂತರ ಅವರನ್ನು ವಿಷ್ಣುವಿನ ದಶಾವತಾರದ ಭಾಗವನ್ನಾಗಿ ಮಾಡಿಕೊಳ್ಳುವುದು. ಅಂಬೇಡ್ಕರ್‌ಗೆ ಜನಿವಾರ ತೊಡಿಸುವ ಈ ಹುನ್ನಾರವನ್ನು ಎಚ್ಚೆತ್ತ ದಲಿತರು, ಶೂದ್ರರು ಮತ್ತು ಪ್ರಗತಿಪರರೆಲ್ಲಾ ಒಟ್ಟಿಗೆ ಪ್ರತಿರೋಧಿಸುತ್ತಾರೆ ಎಂಬ ಬಗ್ಗೆ ನಿಮಗೆ ಸಂಶಯ ಬೇಡ, ಬೇಕಿಲ್ಲ!





ಕಂಬಾಲಪಲ್ಲಿಯ ದಲಿತರ ಕಗ್ಗೊಲೆ



ಆತ್ಮಹತ್ಯೆಯತ್ತ ರೈತ


ಎಂದು ವಿವರಿಸಲು ಪ್ರಯತ್ನಿಸಿದೆವು. ನಿಮ್ಮ ಪ್ರಕಾರ ನೀವು ಶಂಕರಾಚಾರ್ಯರಂತೆ ಎದುರಾಳಿಯ ಮನಸ್ಸಿಗೆ ನೋವಾಗದಂತೆ, ಮಾತು ಕಮ್ಮಿಮಾಡಿ ವಾದ ಪ್ರಖರತೆಯಿಂದ ಗೆಲ್ಲಬೇಕೆಂಬ ನಿಶ್ಚಯದೊಂದಿಗೆ ಬಂದಿದ್ದಿರಿ. ಆದರೆ ಆ ಪ್ರಯತ್ನದಲ್ಲಿ ನೀವು ಯಶಸ್ವಿಯಾಗಲಿಲ್ಲವೇಕೆ ಎಂದು ಒಮ್ಮೆ ಪುನರ್ ಮನನ ಮಾಡಿಕೊಳ್ಳಿ.

ಏಕೆಂದರೆ ನಮಗೆ ಆರೆಸ್ಸೆಸ್ ವಿರುದ್ಧ ಇರುವ ಆಕ್ರೋಶ ಮತ್ತು ಅಸಮ್ಮತಿಗಳು ಹುಚ್ಚು ಕೋಪದ ಆಧಾರದ್ದಲ್ಲ. ಹಾಗೆ ನೋಡಿದರೆ ನಿಮ್ಮಂಥ ಕೆಲವರನ್ನು ಬಿಟ್ಟರೆ ಬೇರೆ ಯಾವ ಆರೆಸ್ಸೆಸ್ ನಾಯಕರ ಖಾಸಗಿ ಪರಿಚಯವೂ ನಮಗಿಲ್ಲ. ಇನ್ನು ವ್ಯಕ್ತಿಗತ ಸಿಟ್ಟು ಎಲ್ಲಿಯದು? ನಾವು ಭಾರತವನ್ನು ನಮ್ಮ ಸಂವಿಧಾನದಲ್ಲಿ ಘೋಷಿಸಿರುವಂತೆ ಒಂದು ಜಾತ್ಯತೀತ, ಸಮಾಜವಾದಿ, ಸಾರ್ವಭೌಮಿ ಗಣರಾಜ್ಯವಾಗಿ ಕಟ್ಟಬೇಕೆಂಬ ಕನಸನ್ನು

ದಲಿತರಿಗೆ ನಿಮ್ಮ ಕರುಣೆಯೆಂಬ ಕ್ರೌರ್ಯ ಬೇಡ. ಸಾಧ್ಯವಿದ್ದರೆ ಅಂಬೇಡ್ಕರ್ ದಿನದಂದು ಕಂಬಾಲಪಲ್ಲಿಗೆ ಭೇಟಿ ಕೊಡಿ. ಅಲ್ಲಿ ದಲಿತರ ಗುಡಿಸಲಿಗೆ ಬೆಂಕಿ ಇಟ್ಟ, ಇಡಲಿರುವ ಎಷ್ಟು ಜನ ಮೇಲ್ಜಾತಿ ಭೂಒಡೆಯರು ನಿಮ್ಮ ಆರೆಸ್ಸೆಸಿನ ಕಟ್ಟಾ ಬೆಂಬಲಿಗರೆಂದು ಅರ್ಥ ಮಾಡಿಕೊಳ್ಳಿ. ಸಾಧ್ಯವಾದರೆ ಬಸವಣ್ಣ ಹುಟ್ಟಿದ ಸ್ಥಳದ ಸಮೀಪವಿರುವ ಕಡಕೋಳಕ್ಕೆ ಹೋಗಿ ಬನ್ನಿ. ದೇವಸ್ಥಾನದ ಮಾತಿರಲಿ. ಊರ ಕೆರೆಗೂ ಬಿಟ್ಟುಕೊಳ್ಳದ ಅಲ್ಲಿನ ಮೇಲ್ಜಾತಿ ಜನಗಳಲ್ಲಿ ಎಷ್ಟು ಜನ ನಿಮ್ಮ ಹಿಂದೂ ಸಮಾಜೋತ್ಸವದ ಮತ್ತು ನಿಮ್ಮ ಭಜರಂಗ ದಳದ ಕಾರ್ಯಕರ್ತರಾಗಿದ್ದಾರೆ ಎಂದು ಅರ್ಥ ಮಾಡಿಕೊಳ್ಳಿ..ನಿಮಗೆ ಪ್ರಾಮಾಣಿಕತೆ ಇದ್ದಲ್ಲಿ; ಆಗ ನಮ್ಮ ಕೆಲವು ಮಾತುಗಳಾದರೂ ನಿಮಗೆ ಅರ್ಥವಾಗಬಹುದು.

ವಾರದ ಅಪಾಯ

"2003ರ ಧಾರ್ಮಿಕ ದತ್ತಿ ಕಾಯ್ದೆಗೆ ತಿದ್ದುಪಡಿ ತರಲು ನಿವೃತ್ತ ನ್ಯಾಯಮೂರ್ತಿ ಹಾಗೂ ಬಿಹಾರದ ಮಾಜಿ ರಾಜ್ಯಪಾಲ ರಾಮಾಜೋಯಿಸ್ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ."



- ನಾಗರಾಜ್ ಶೆಟ್ಟಿ,
ಧಾರ್ಮಿಕ ದತ್ತಿ ಖಾತೆ ಮಂತ್ರಿ

ವಾರದ ಪ್ರಹಸನ

"ABVPಯ ಒತ್ತಡಕ್ಕೆ ಕೂಡಲೇ ಮಣಿದ ಉನ್ನತ ಶಿಕ್ಷಣ ಮಂತ್ರಿ ಡಿ. ಎಚ್. ಶಂಕರಮೂರ್ತಿ ಅಧಿವೇಶನದ ಬಳಿಕ ಸಿ.ಇ.ಟಿ. ಒಪ್ಪಂದದ ಬಗ್ಗೆ ಚರ್ಚಿಸಲು ABVPಯ ನಾಯಕರ ಸಭೆ ಕರೆಯುವುದಾಗಿ ತಿಳಿಸಿದರು."

- ಪತ್ರಿಕಾ ವರದಿ

ವಾರದ ಅವಿವೇಕ

"ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮುಖ್ಯ ಕಾರಣವಾಗಿದ್ದು ಆಗಿನ ಮತಾಂತರ, ಶೋಷಣೆ ಮೊದಲಾದ ಅನಿಷ್ಟಗಳು."

- ಚಿದಾನಂದಮೂರ್ತಿ



ವಾರದ ವಿವೇಕ

"ಅಂತರರಾಷ್ಟ್ರೀಯ ಕಾನೂನುಗಳನ್ನು ಮೀರಿ ಇರಾನ್ ಸಮುದ್ರ ಸೀಮೆಯನ್ನು ಉಲ್ಲಂಘಿಸಿದ ಎಲ್ಲಾ 15 ಮಂದಿ ನಾವಿಕರ ವಿರುದ್ಧ ಕ್ರಮ ಜರುಗಿಸುವ ಸಂಪೂರ್ಣ ಅಧಿಕಾರ ಇರಾನ್‌ಗಿದೆ. ಆದರೆ ಅಂತಿಮ ಪ್ರವಾದಿ(ಸ) ಮಾದರಿಯನ್ನು ಅನುಸರಿಸಿ ಅವರಿಗೆ ಕ್ಷಮಾದಾನ ನೀಡಲಾಗುತ್ತಿದೆ. ಅವರಿಗೆ ನೀಡಲಾಗುತ್ತಿರುವ ಸ್ವಾತಂತ್ರ್ಯ ಬ್ರಿಟಿಷ್ ಜನತೆಗೆ ಇರಾನ್ ನೀಡಿರುವ ಕೊಡುಗೆಯಾಗಿದೆ."

ಮಹ್ಮದ್ ಅಹ್ಮದಿನೆಜಾದ್,
ಇರಾನ್‌ನ ಅಧ್ಯಕ್ಷ

No Comments



"ತಂಡದ ಹಿರಿಯ ಆಟಗಾರರು ಯಾರ ಮಾತನ್ನು ಕೇಳಲು ಸಿದ್ಧರಿರಲಿಲ್ಲ. ತಂಡದ ಮ್ಯಾನೇಜರ್, ಕೋಚ್ ಎಲ್ಲರಿಗಿಂತಲೂ ತಮಗೇ ಹೆಚ್ಚು ಗೊತ್ತು ಎನ್ನುವುದು ಅವರ ತಿಳುವಳಿಕೆ"

-ಚಾಪೆಲ್ ರಿಪೋರ್ಟ್

"ಸಚಿನ್ ನಿವೃತ್ತಿಯಾಗಲಿ"

-CNN-IBN ನಡೆಸಿದ ಸರ್ವೆಯಲ್ಲಿ ಶೇ. 56ರಷ್ಟು ಮತದಾರರ ಅಭಿಪ್ರಾಯ.

"ರಾಜ್ಯದ ಬೊಕ್ಕಸ ಸುಸ್ಥಿತಿಯಲ್ಲಿದೆ. ವಿತ್ತ ಸ್ಥಿತಿ ಸರಿಯಾದ ದಾರಿಯಲ್ಲಿದೆ. ವಿಪಕ್ಷಗಳು ಟೀಕೆ ಮಾಡಲೇಬೇಕೆಂದು ದೂರುತ್ತಿವೆ ಅಷ್ಟೆ."

-ಯಡಿಯೂರಪ್ಪ



"ಸಂಘರ್ಷ ಮನೋಭಾವದಿಂದಲೇ ಸಾರ್ಕ್‌ನ ಉದ್ದೇಶ ಈಡೇರಿಲ್ಲ"

- ಶೌಕತ್ ಅಜೀಜ್, ಪಾಕಿಸ್ತಾನದ ಪ್ರಧಾನಿ

"ಬರದ ಸಂದರ್ಭದಲ್ಲಿ ಅಂತರ್ಜಲದ ಮೇಲೆ ತೀವ್ರ ಪ್ರಭಾವ ಬೀಳುತ್ತದೆ. ಆದ್ದರಿಂದ ಕೊಳವೆ ಭಾವಿ ತೋಡದಂತೆ ನಿಷೇಧ ಹೇರಬೇಕು."

- ಪ್ರಕಾಶ್ ಕಮ್ಮರಡಿ, ಕೃಷಿ ವಿಜ್ಞಾನಿ

"ಸಮಾಜಕ್ಕೆ ಹೆಣ್ಣು ಮನಸ್ಸಿನ ಗಂಡಸರ ಅಗತ್ಯವಿದೆ."

-ಶಾಂತಾ ನಾಗರಾಜ್, ಸಾಹಿತಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

"ನನಗೆ ಜಾಮೀನು ನೀಡಿ. ಸಾವಿರಾರು ಜನರಿಂದ ನಾನು ಪಡೆದುಕೊಂಡಿರುವ ಹಣವನ್ನೆಲ್ಲಾ ವಾಪಸ್ ಮಾಡುವೆ."




- ವಿನಿವಿಂಕ್ ಶಾಸ್ತ್ರಿ



"ಉತ್ತರ ಪ್ರದೇಶದಲ್ಲಿ ಮುಲಾಯಂ ಸಿಂಗ್ ಆಳ್ವಿಕೆ ಅಂತ್ಯಗೊಂಡು ಬಿಜೆಪಿ ಅಧಿಕಾರಕ್ಕೇರಲಿದೆ."

- ಹೇಮ ಮಾಲಿನಿ

"ಹೆಲ್ಮೆಟ್ ಹಾಕಿದರೆ ಕೂದಲು ಉದುರುತ್ತೆ, ಕಣ್ಣು ಕಾಣಲ್ಲ, ಕಿವಿ ಕೇಳಿಸಲ್ಲ, ಆದ್ದರಿಂದ ಕಡ್ಡಾಯ ಮಾಡಬೇಡಿ."



-ವಾಟಾಳ್ ನಾಗರಾಜ್

"ಸಿದ್ದರಾಮಯ್ಯನವರನ್ನು ಬಂಧಿಸಲಿಲ್ಲ, ಗಲಭೆಯ ಸ್ಥಳದಿಂದ ಅವರನ್ನು ಸುರಕ್ಷಿತವಾಗಿ ಸಾಗಿಸಲಾಯಿತು, ಅಷ್ಟೆ."

- ಎಂ. ಪಿ. ಪ್ರಕಾಶ್

"ಕೌಟುಂಬಿಕ ಹಾಗೂ ವೈಯಕ್ತಿಕ ಕಾರಣಗಳಿಂದಾಗಿ ನಾನು ರಾಜೀನಾಮೆ ನೀಡುತ್ತಿದ್ದೇನೆ."

-ಚಾಪೆಲ್

ವಾರದ ವಿಶ್ಲೇಷಣೆ

"..ಆದರೂ ನಾವೂ ಕೆಲವು ಕ್ರೀಡೆಗಳಲ್ಲಿ ಚಾಂಪಿಯನ್ನರಾಗುವ ಕಡೆ ಸಾಗಿದ್ದೇವೆ. ಉದಾಹರಣೆಗೆ ಬಿಲಿಯರ್ಡ್ಸ್, ಸ್ನೂಕರ್, ಬಿಲ್ಲುಗಾರಿಕೆ, ಶೂಟಿಂಗ್, ಗಾಲ್ಫ್... ಏಕೆಂದರೆ ಈ ಯಾವ ಆಟದಲ್ಲೂ ಎದುರಾಳಿ ತಂಡ ಎದುರಿಗಿರುವುದಿಲ್ಲ... ಆದರೆ, ಎದುರಾಳಿಯ ಜೊತೆ ಹೊಡೆದಾಡಿ ಗೆಲುವು ಪಡೆದುಕೊಳ್ಳುವ ಆಟಗಳ ಮಟ್ಟಿಗೆ ಬರುವುದಾದರೆ.... ಬಾಂಗ್ಲಾದೇಶದ ಮಟ್ಟಿಗೆ ಬರುವಷ್ಟರಲ್ಲಿ ನಾವು ಫನಾ..!"

-ಅನಿಲ್ ಧಾರ್ಕರ್,
ಪತ್ರಕರ್ತ

'ಮೂಡಿಗೆರೆ ಪ್ಲೋಸ್ಟ್' ಮತ್ತು ತೇಜಸ್ವಿಗೆ ಕಿರುಕುಳ




ಕಂಡಹಾಗೆ

ಹಲವಾರು ನೆನಪುಗಳು ಒಂದರ ಹಿಂದೊಂದು ನೂಕಿ, ನುಗ್ಗಿ ಬರುತ್ತಿವೆ. ಅವುಗಳಲ್ಲಿ ಯಾವುದನ್ನು ಹೇಳಲಿ; ಯಾವುದರಿಂದ ಪ್ರಾರಂಭಿಸಲಿ... ಅಪ್ಪನ ಜೊತೆ ಜಗಳವಾಡಿದ್ದರೂ ನನ್ನ ಮೇಲೆ ಪೂರ್ಣಚಂದ್ರ ತೇಜಸ್ವಿಯವರು ತೋರಿಸಿದ ಪ್ರೀತಿಯನ್ನೋ, "ನಿನ್ನ ಕಿರುಕುಳ ಜಾಸ್ತಿಯಾಯಿತು" ಎಂದು ಗೊಣಗುತ್ತಲೇ ವ್ಯಕ್ತಪಡಿಸಿದ ವಿಶ್ವಾಸವನ್ನೋ, "ನಿನಗೆ ಗೊತ್ತಾಗಲ್ಲ ಕಣೆ" ಎಂದು ಬೈದಿದ್ದನ್ನೋ, ಅಥವಾ "ನೀನು ಹೇಳೋದೂ ಸರಿ ಮಾರಾಗಿತ್ತಿ, ಎಲ್ಲಾ ದರಿದ್ರ ಕಣೆ" ಎಂದು ಸಮ್ಮತಿ ಸೂಚಿಸಿದ್ದನ್ನೋ... ಎಷ್ಟೊಂದು ನೆನಪುಗಳು, ಈಗ ಅವೆಲ್ಲ ಹುಟ್ಟಿಸುವ ನಿಟ್ಟುಸಿರುಗಳು...

ತನ್ನ ಬರಹ, ಪತ್ರಿಕೆ, ಸ್ನೇಹಿತರ ಬಳಗ, ಇತ್ಯಾದಿಗಳಲ್ಲಿ ಮುಳುಗಿಹೋಗಿದ್ದ ಅಪ್ಪನೊಂದಿಗೇ ಅವರ ಮಕ್ಕಳಾದ ನಮ್ಮ ನಂಟು ಮನೆಗೇ ಸೀಮಿತವಾಗಿದ್ದರಿಂದ ಅವರ ಆಪ್ತರೊಂದಿಗಿನ ನಮ್ಮ ಸಂಪರ್ಕ ಅಷ್ಟಕ್ಕಷ್ಟೇ. ಹಾಗೆ ನೋಡಿದರೆ ಅವರ ಮಿತ್ರರೊಂದಿಗೂ, ಮಾಜಿ ಸ್ನೇಹಿತರೊಂದಿಗೂ ನಾನು ಮಾತನಾಡಿದ್ದು, ಚರ್ಚಿಸಿದ್ದು, ಸಂಪರ್ಕವನ್ನು ಏರ್ಪಡಿಸಿಕೊಂಡಿದ್ದು ನಾನೂ ಪತ್ರಕರ್ತೆಯಾದ ನಂತರವೇ.

ಆದರೆ ತೇಜಸ್ವಿಯವರು ಮಾತ್ರ ಇತರರಿಗಿಂತ ಮುನ್ನವೇ ನಮಗೆ ಹತ್ತಿರವಾಗಿದ್ದರು. ಅದಕ್ಕೆ ಕಾರಣ ಅವರ ಮೂಡಿಗೆರೆಯ ತೋಟ. ಪತ್ರಿಕೆಯನ್ನು ಆರಂಭಿಸಿದ ನಂತರ ಅಲ್ಲಿಗೆ ಪ್ರತಿ ತಿಂಗಳು ಅಪ್ಪ ಭೇಟಿ ನೀಡಲಾರಂಭಿಸುವ ಹೊತ್ತಿಗೆ, ನಮ್ಮ ಜೊತೆಗೆ ಅಮ್ಮ ಇಲ್ಲದಿದ್ದರೂ ಅಪ್ಪನಿಗೆ ಯಾವ ತೊಂದರೆಯನ್ನೂ ನೀಡದಂತಹ ವಯಸ್ಸಿಗೆ ನಾವು ಬೆಳೆದಿದ್ದೆವು. ಆ ಕಾರಣ ನಮ್ಮನ್ನು ತನ್ನ ಜೊತೆ ಮೂಡಿಗೆರೆಗೆ ಕರೆದುಕೊಂಡು ಹೋಗುತ್ತಿದ್ದರು ಅಪ್ಪ.

ಹೀಗೆ ಒಮ್ಮೆ ಹೋಗುವಾಗ ತೇಜಸ್ವಿಯವರ ಮಕ್ಕಳಿಗೆ ಆಗ ತುಂಬಾ ಜನಪ್ರಿಯವಾಗಲಾರಂಭಿಸಿದ್ದ ರೂಬಿಕ್ಸ್ ಕ್ಯೂಬ್ ಅನ್ನು ತೆಗೆದುಕೊಂಡು ಹೋಗಿದ್ದೆ. ಅದನ್ನು ನೋಡಿದ್ದೇ ತಡ "ಅಯ್ಯೋ ಮಾರಾಗಿತ್ತಿ, ಅದನ್ಯಾಕೆ ತಂದೆ. ಅದನ್ನು **solve** ಮಾಡಕ್ಕೆ ಅಂತ ಒಂದು ಇಡೀ ರಾತ್ರಿ ವೇಸ್ಟ್ ಮಾಡಿದೆ" ಎಂದು ನಕ್ಕಿದ್ದರು ತೇಜಸ್ವಿ.



ತಮ್ಮ ಮೊಮ್ಮಗಳು ವಿವಾಳೊಂದಿಗೆ ತೇಜಸ್ವಿ

ಅವರ ವಿಶಾಲವಾದ ಮನೆ, ಅದರ ಸುತ್ತಲು ಸುಂದರವಾದ ಹೂಗಿಡಗಳು, ಮರಗಳು, ಕಾಫಿ ಗಿಡಗಳು; ಮನೆಯ ಹಿಂದೆಯೇ ಇದ್ದ ಪುಟ್ಟಕೆರೆ, ಅದರಲ್ಲಿ ಪ್ರತಿವರ್ಷ ಪ್ರತ್ಯಕ್ಷವಾಗುತ್ತಿದ್ದ ಆಮೆ, ಮನಸ್ಸಿಗೆ ಮುದ ನೀಡುತ್ತಿದ್ದ ಚಳಿ, ಉಲ್ಲಾಸ ಮೂಡಿಸುತ್ತಿದ್ದ ಮಳೆ... ಅವೆಲ್ಲವು ಎಷ್ಟು ಚೆನ್ನಾಗಿದ್ದವೆಂದರೆ ಯಾವತ್ತು ಮತ್ತೆ ಅಪ್ಪ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತಾರೆಂದು ಕಾತರದಿಂದ ನಾವು ಕಾಯುತ್ತಿದ್ದೆವು.

ಹೀಗೆ ಒಮ್ಮೆ ಹೋಗಿದ್ದಾಗ ಬೆಳಗ್ಗಿನ ಕಾಫಿ ಕುಡಿಯುತ್ತಾ ತೇಜಸ್ವಿಯರವ ಮನೆಯ ಅಂಗಳದ ಮೆಟ್ಟಿಲಿನ ಮೇಲೆ ಅಪ್ಪ ಕೂತಿದ್ದರು. ಮುಂದೆ ನಿಂತಿದ್ದ ತೇಜಸ್ವಿ ತಮ್ಮ ಕ್ಯಾಮರಾದಲ್ಲಿ ಅಪ್ಪನ ಫೋಟೋಗಳನ್ನು ತೆಗೆಯುತ್ತಿದ್ದರು. ಆಗ ತಾನೇ ಎದ್ದು ರೂಮಿನಿಂದ ಹೊರಬಂದ ನನಗೆ "ನೀನೂ ಅಲ್ಲೇ ಕೂತ್ಕೊ" ಎಂದು ತೇಜಸ್ವಿ ಹೇಳಿದರು. ನಾನು ಅಪ್ಪನ ಹಿಂದೆ ಮಂಡಿಯೂರಿ ಅವರ ಹೆಗಲ ಮೇಲೆ ನನ್ನ ಮುಖವನ್ನಿಟ್ಟೆ. ಅವತ್ತು ತೇಜಸ್ವಿಯವರು ತೆಗೆದ ನಮ್ಮಿಬ್ಬರ ಫೋಟೋ ನನಗೆ ತುಂಬಾ ಪ್ರಿಯವಾಗಿದ್ದು ಅದನ್ನು ಇವತ್ತು ನಮ್ಮ ಕಚೇರಿಯಲ್ಲಿ ಹಾಕಿಕೊಂಡಿದ್ದೇನೆ.

ಅವತ್ತು ನನ್ನ ಮತ್ತು ಬೇಬಿಯ ಹಲವಾರು ಚಿತ್ರಗಳನ್ನು ತೆಗೆದ ತೇಜಸ್ವಿಯವರು ಅವನ್ನೆಲ್ಲ ತಮ್ಮ ಡಾರ್ಕ್ ರೂಮಿನಲ್ಲಿ ವಿವಿಧ ರೀತಿಯಲ್ಲಿ ಡೆವಲಪ್ ಮಾಡಿ, ಅವುಗಳ ಹಿಂದೆ ತಮ್ಮ ಸಹಿ ಹಾಕಿ ನಾವು ಹೊರಟಾಗ ನಮ್ಮ ಕೈಗಿಟ್ಟಿದ್ದರು. ತೇಜಸ್ವಿಯವರ ಫೋಟೋಗ್ರಫಿ ಹುಚ್ಚು ಕ್ರಮೇಣ ಅಪ್ಪನಿಗೂ ಅಂಟಿಕೊಂಡು ಅವರೂ ನಮ್ಮೆಲ್ಲರ ಮತ್ತು ಆಫೀಸಿಗೆ ಬಂದವರೆಲ್ಲರ ಫೋಟೋಗಳನ್ನು ತೆಗೆಯಲಾರಂಭಿಸಿದ್ದರು. ಈ ಹವ್ಯಾಸಕ್ಕೆಂದು ಅವರಿಬ್ಬರೂ ಹರಿಸಿದ ಹಣ ಅಷ್ಟಿಷ್ಟಲ್ಲ.

* * * * * * * * * * * *

ವಾಸ್ತವವಾಗಿ ತನ್ನ ಮೊದಲನೆ ನಿರ್ದೇಶನದ ಸಿನಿಮಾಗಾಗಿ ಬೇಬಿ ಮೊದಲು ಆಯ್ಕೆ ಮಾಡಿಕೊಂಡಿದ್ದು ತೇಜಸ್ವಿಯವರ 'ಕಿರಿಗೂರಿನ ಗಯ್ಯಾಳಿಗಳು' ಕತೆಯನ್ನು. ಇದನ್ನು ಕುರಿತು ಅವರೊಂದಿಗೆ ಚರ್ಚಿಸಲು ಬೇಬಿ ಮತ್ತು ನಾನು ಕಾರ್ ಹತ್ತಿ ಮೂಡಿಗೆರೆಗೆ ಹೋದೆವು. ಅವತ್ತು ನಮಗಾಗಿ ರಾಜೇಶ್ವರಿಯವರು ರುಚಿರುಚಿಯಾದ ನಾನ್‌ವೆಜ್ ಅಡುಗೆಯನ್ನು ಮಾಡಿದ್ದರು. ನನಗೇನೋ ಸಂತೋಷ, ಆದರೆ ಊಟಕ್ಕೆ ಕೂತಾಗ ಸಸ್ಯಹಾರಿಯಾದ ಬೇಬಿ ಕಕ್ಕಾಬಿಕ್ಕಿ! ನಾನು ಮಟನ್, ಫಿಷ್ ಎಲ್ಲವನ್ನು ಆನಂದದಿಂದ ತಿಂದರೆ ಪಾಪ ಬೇಬಿ ಬರೀ ಪಲ್ಯ, ಮೊಸರನ್ನ ತಿಂದು ಸುಮ್ಮನಾಗಬೇಕಾಯಿತು.

ಊಟವಾದ ನಂತರ ಚರ್ಚೆಗೆ ಕೂತ ತೇಜಸ್ವಿಯವರು "ಸಿನಿಮಾ ಮಾಡೋದು ತಲೆನೋವು ಕಣೆ. ಆ ತಬರನ ಕಥೆ ಮಾಡುವಾಗ ಶೂಟಿಂಗ್‌ಗೆ ಹೋಗಿದ್ದೆ. ಅದಕ್ಕಿಂತ ಬೋರ್ ಇನ್ನೊಂದಿಲ್ಲ. ಅಲ್ಲಾ ಗಯ್ಯಾಳಿಗಳನ್ನು ಹೇಗೆ ಚಿತ್ರ ಮಾಡ್ತೀಯಾ? ಕಷ್ಟ ಆಗುತ್ತೆ ಅನ್ನುತ್ತೆ, ನೋಡು" ಎಂದು ಹೇಳಿದರು. ಸಂಜೆಯವರೆಗೂ ಅವರೊಂದಿಗೆ ಹರಟೆ ಹೊಡೆದು, ಅವರ ತೋಟದಲ್ಲಿ ಸುತ್ತಾಡಿ ವಾಪಸ್ಸು ಬಂದಿದ್ದೆವು. ಯಾಕೊ ಅವರಿಗೆ ಗಯ್ಯಾಳಿಗಳು ಸಿನಿಮಾ ಆಗುವುದು ಇಷ್ಟವಿಲ್ಲ ಅನ್ನಿಸಿತ್ತು ನಮ್ಮಿಬ್ಬರಿಗೂ. ಆನಂತರ ಬೇಬಿ ಅಪ್ಪನ 'ಅಕ್ಕ' ಕಾದಂಬರಿಯನ್ನೇ ಆಧರಿಸಿ 'ದೇವೀರಿ' ಎಂಬ ಸಿನಿಮಾ ಮಾಡಿ ಚೊಚ್ಚಲ ನಿರ್ದೇಶನದಲ್ಲೇ ಅಂತರರಾಷ್ಟ್ರೀಯ ಪ್ರಶಂಸೆ ಮತ್ತು ಪ್ರಶಸ್ತಿಗಳನ್ನು ಗೆದ್ದಳು.


(10ನೇ ಪುಟಕ್ಕೆ)

ಹೋಮ: ಈಗ ಯಡ್ಡಿ ಸರದಿ

'ನೀನು ಅಂದರೆ ನಿಮ್ಮಪ್ಪ' ಎನ್ನುವಂತೆ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಹೋಮ ಹವನಗಳಲ್ಲಿ ಮುಳುಗಿ ಹೋಗಿರುವುದೇ ಇವತ್ತಿನ ಕರ್ನಾಟಕ ರಾಜಕೀಯದ ವಿಶೇಷ.

ಕಳೆದ ತಿಂಗಳು ಯಡ್ಡಿ ತಮ್ಮ ಹುಟ್ಟುಹಬ್ಬದ ಆಚರಣೆ ನೆಪದಲ್ಲಿ ತಿರುಪತಿಗೆ ಹೋಗಿದ್ದರಲ್ಲವೆ. ಆದರೆ ಅಲ್ಲಿ ನೆಪಮಾತ್ರಕ್ಕೆ ಬರ್ತ್‌ಡೇ ನಡೆಯಿತಾದರೂ ಯಡ್ಡಿ ಅಲ್ಲಿಗೆ ಹೋಗಿದ್ದ ಉದ್ದೇಶವೇ ಬೇರೆ ಇತ್ತು. ಕರ್ನಾಟಕದ ಮುಂದಿನ ಮುಖ್ಯಮಂತ್ರಿ ಕುರ್ಚಿ ತಮಗೆ ಸಿಗುವಂತೆ, ನಡುವೆ ಯಾವ ಅಡೆತಡೆಗಳೂ ಎದುರಾಗದಂತೆ ಯಡ್ಡಿ ತಿರುಪತಿಯಲ್ಲಿ ಒಂದು ರಹಸ್ಯ ಹೋಮ ಮಾಡಿಸಿಬಂದಿದ್ದಾರೆ. ಈ ವಿಷಯ ಗೊತ್ತಾದ ಮೇಲೆ ಗಾಬರಿಬಿದ್ದ ದೇವೇಗೌಡ ಕುಮಾರಸ್ವಾಮಿ ಜೋಡಿಯು ಯಡ್ಡಿಯ 'ಮಹಾಗಣಪತಿ ಹೋಮ' ಫಲ ಕೊಡದಂತೆ ಮಾಡಲು ಮಧೂರ್, ಮಂಗಳೂರು, ಕಟೀಲು ದೇವಸ್ಥಾನಗಳಿಗೆ ಓಡಿಹೋಗಿ ಪರ್ಯಾಯ ಹೋಮಗಳನ್ನು ನಡೆಸಿ ಬಂದಿದ್ದಾರೆ. ಅಂದರೆ ಒಂದೋ ಕುಮಾರಸ್ವಾಮಿ ಸಿಎಂ ಆಗಿ ಮುಂದುವರಿಯಬೇಕು ಇಲ್ಲಾ ರೇವಣ್ಣ ಸಿಎಂ ಆಗಬೇಕೆ ವಿನಃ ಯಡ್ಡಿಯಲ್ಲ ಎಂಬುದೇ ಪದ್ಮನಾಭನಗರದ ಮಹಾಮಾಂತ್ರಿಕನ ಲೆಕ್ಕಾಚಾರ.

ಯಡ್ಡಿಯ ಹುಟ್ಟುಹಬ್ಬ ತಿರುಪತಿಯಲ್ಲಿ ಏರ್ಪಾಟಾಗಿದ್ದಕ್ಕೆ, ಇನ್ನೂ ಬೇರೆ ಕಾರಣಗಳಿವೆ. ಹಾಲಿ ರಾಜ್ಯ ಬಿಜೆಪಿಯೊಳಗೆ ಯಡ್ಡಿ-ಅನಂತಕುಮಾರ್ ಬಣಗಳೆಂದು ವಿಭಜನೆಯಾಗಿ ಹೋಗಿದೆ. ಯಡ್ಡಿಯ ಆಪ್ತ ವಲಯದಲ್ಲಿದ್ದ ಈಶ್ವರಪ್ಪ, ಜಗದೀಶ್ ಶೆಟ್ಟರ್ ಹಾಗೂ ಅಶೋಕ್ ಈಗ ದೂರವಾಗಿದ್ದಾರೆ. ಇಂಥ ಸಂದರ್ಭದಲ್ಲಿ ತಮ್ಮ ಅಸಲಿ ಹಿಂಬಾಲಕರ್ಯಾರು, ಯಾವ ಯಾವ ಶಾಸಕರೆಲ್ಲಾ ತನ್ನ ಬೆಂಬಲಕ್ಕಿದ್ದಾರೆಂದು ಯಡ್ಡಿಯೂ ದೃಢಪಡಿಸಿಕೊಳ್ಳಬೇಕಿತ್ತು, ಹಾಗಾಗಿ ತಿರುಪತಿ ಯಾತ್ರೆಗೆ ಎಲ್ಲರೂ ಹೊರಡುವಂತೆ ಯಡ್ಡಿಯಿಂದ ಸೂಚನೆ ಹೋಗಿತ್ತು,



ಆದರೆ ಅವತ್ತು ಬೆಳಗ್ಗೆ ಎಷ್ಟು ಕಾದರೂ ಬಂದಿದ್ದ ಎಂ.ಎಲ್.ಎ-ಎಂ.ಎಲ್.ಸಿ.ಗಳ ಸಂಖ್ಯೆ 22 ದಾಟಲಿಲ್ಲ, ಜೊತೆಗೆ ಕೆಲವು ಬೋರ್ಡ್ ಅಧ್ಯಕ್ಷರುಗಳು, ಅರಕಲಗೂಡಿನಿಂದ ಬಿಜೆಪಿ ಅಭ್ಯರ್ಥಿಯಾಗಿದ್ದ ವಾಗೀಶ್ ಮತ್ತಿತರರಿದ್ದರು. ಸರಿ ಎಂದು ಬಂದಷ್ಟು ಜನರನ್ನು ಬಸ್ಸಿಗೆ ಹತ್ತಿಸಿದರು ಯಡ್ಡಿ. ಆದರೆ ಬಂದಿದ್ದವರಲ್ಲೂ ಒಗ್ಗಟ್ಟಿರಲಿಲ್ಲ ಎಂಬುದು ದಾರಿಯಲ್ಲೇ ಗೊತ್ತಾಯಿತು. ಬಸ್ಸಿನ ಮುಂದುಗಡೆ ಕುಳಿತಿದ್ದ ರಾಮಚಂದ್ರಗೌಡರ ಮೇಲೆ ಯಾಕೋ ರೇಗಿಬಿದ್ದ ಕಟ್ಟಾ ಸುಬ್ರಮಣ್ಯ ನಾಯ್ಡು 'ಲೇಯ್, ಇಲ್ಲೂ ನೀನು ರಾಜಕೀಯ ಮಾಡಬೇಡ' ಎಂದು ಅಬ್ಬರಿಸಿದರು. ಅದಕ್ಕೆ ಸೊಪ್ಪು ಹಾಕದ ರಾಮಚಂದ್ರಗೌಡ 'ಲೋ ಕಟ್ಟಾ ನೀನು ಬೆಂಗಳೂರಿನಲ್ಲಿ ಓಡಾಡದಂಗೆ ಮಾಡಿಬಿಡ್ತೀನಿ ಹುಶಾರ್' ಎಂದು ಆವಾಜ್ ಹಾಕಿಬಿಟ್ಟರು.

ಬಸ್ಸಿನೊಳಗಿದ್ದ ಬೇರೆಯವರಿಗೆಲ್ಲಾ ಇದೊಂತರ ಪುಗಸಟ್ಟೆ ಮನರಂಜನೆಯಾಗಿತ್ತು. ಹೀಗೆ ಜಗಳವಾಡಿಕೊಂಡೇ ತಿರುಪತಿ ತಲುಪಿದ ಯಡ್ಡಿ ಮತ್ತವರ ಬಂಟರಿಗೆ ಸಕಲ ಸೌಲಭ್ಯ ಕಲ್ಪಿಸುವ ಜವಾಬ್ದಾರಿಯನ್ನು ಮಾಲೂರಿನ ಭೂಗಳ್ಳ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ ವಹಿಸಿಕೊಂಡಿದ್ದ.

ನಂತರ ನಡೆದದ್ದೇ ತಮಾಷೆಯಾಗಿತ್ತು. ಕೆಲ ನುರಿತ ಪುರೋಹಿತರನ್ನೂ ಅಲ್ಲಿಗೇ ಕರೆಸಿದ್ದ ಯಡ್ಡಿ 'ಮಹಾಗಣಪತಿ ಹೋಮ' ಅರೇಂಜ್ ಮಾಡಿದ್ದರು. ತಾವೇ ಮುಂದಿನ ಮುಖ್ಯಮಂತ್ರಿಯಾಗುವಂತೆ ಶಕ್ತಿ ಪಡೆಯಲು ಯಡ್ಡಿ ಇದನ್ನು ಏರ್ಪಡಿಸಿದ್ದರು. ಖಾಸಾ ಶಾಸಕರ ಸಮ್ಮುಖದಲ್ಲೇ ಇದು ನಡೆದರೆ ಅರ್ಥಾತ್ ಹೋಮ ನಡೆದಾಗ ಶಾಸಕರೂ ಇದ್ದರೆ 'ಅಗ್ನಿ ಸಾಕ್ಷಿ'ಯಾಗಿ ಎಲ್ಲರೂ ಅದಕ್ಕೆ ಬದ್ಧರಾಗಿರಬೇಕಾಗುತ್ತದೆ ಎಂಬುದೇ ಯಡ್ಡಿ ಲೆಕ್ಕಾಚಾರವಾಗಿತ್ತು. ಅಲ್ಲೇ ನಡೆದ ಇನ್ನೊಂದು ತಮಾಷೆ ಏನೆಂದರೆ ಈ ಹೋಮ ನಡೆಯುವಾಗ ಯಡ್ಡಿ ಪಕ್ಕ ಕುಳಿತುಕೊಳ್ಳಲು ಬಿಜೆಪಿಯ ಇಬ್ಬರು ಸುಂದರ ಸ್ತ್ರೀ ರತ್ನಗಳು ಪೈಪೋಟಿ ನಡೆಸಿದ್ದು. ಇವರಿಬ್ಬರೂ ಸಚಿವರಾಗಲು ಸರ್ಕಸ್ ಮಾಡಿ ವಿಫಲರಾಗಿರುವವರೆ.

ಯಡ್ಡಿ ಅಕ್ಕಪಕ್ಕ ವಿಜೃಂಭಿಸುತ್ತಿದ್ದ ಈ ಮಹಿಳಾ ಮಣಿಗಳನ್ನು ನೋಡಿ ಹಲವು ಚಡ್ಡಿ ಶಾಸಕರಿಗೆ 'ಕೃಷ್ಣದೇವರಾಯ' ಚಿತ್ರ ನೆನಪಾಯಿತಂತೆ. ಆ ಚಿತ್ರದಲ್ಲಿ ರಾಜ್‌ಕುಮಾರ್‌ರವರ ಅಕ್ಕಪಕ್ಕದಲ್ಲಿ ಭಾರತಿ ಮತ್ತು ಜಯಂತಿ ನಿಂತು "ತಿರುಪತಿ ಗಿರಿವಾಸ, ಶ್ರೀವೆಂಕಟೇಶ, ನೀನೊಲಿದ ಮನೆಮನೆಯೂ ಲಕ್ಷ್ಮೀ ನಿವಾಸ" ಎಂದು ಹಾಡಿದಂತೆ ಈ ತ್ರಿಮೂರ್ತಿಗಳೂ ಕಂಡು ಬಂದರಂತೆ.

ಈ ಹೋಮ ಮುಗಿದ ನಂತರ ಕರ್ನಾಟಕ ಭವನದಲ್ಲಿ ಕೇಕ್ ಕಟ್ ಮಾಡಿದ ಯಡ್ಡಿ ಬಂದಿದ್ದ ಎಲ್ಲಾ ಶಾಸಕರಿಗೂ ತಮ್ಮ ಕೈಯಾರೆ ಚಿನ್ನದ ಸರಗಳನ್ನೂ ಕೊಟ್ಟರು. ಯಡ್ಡಿಯ ಈ ಇಡೀ ಖಾಸಗಿ ಒಡ್ಡೋಲಗವು ಒಂದು ಸರ್ಕಾರಿ ಕಾರ್ಯಕ್ರಮವೇನೋ ಎಂಬಂತೆ ಕರ್ನಾಟಕ ಭವನದ ಸರ್ಕಾರಿ ಸಿಬ್ಬಂದಿಯೆಲ್ಲಾ ಕೆಲಸ ಮಾಡಿಕೊಟ್ಟರು.

ಹೀಗೆ ಮುಖ್ಯಮಂತ್ರಿಯಾಗುವ ತೆವಲಿಗೆ ಬಿದ್ದಿರುವ ಯಡ್ಡಿ ತಾವೇನೋ ಮಹಾಗಣಪತಿ ಹೋಮ ನಡೆಸಿ ಬಂದುಬಿಟ್ಟರು. ಆದರೆ ಅದರ ಪರಿಣಾಮವೇನಾಗಿದೆ ನೋಡಿ. ದೇವೇಗೌಡ ಕುಮಾರ ಸ್ವಾಮಿಗಳಿಬ್ಬರೂ ಯಡ್ಡಿಯನ್ನು ಮಟ್ಟ ಹಾಕಲು ಇನ್ನೊಂದಿಷ್ಟು ಬಲಿಷ್ಠ ಪೂಜೆಪುನಸ್ಕಾರ ನಡೆಸಲು ಊರೂರು ತಿರುಗಲು ಶುರು ಮಾಡಿದ್ದಾರೆ!

‘ನಿಮಗೆ ಬುದ್ಧಿ, ಭಾಷೆ ಇದೆಯಾ?’

ಬಿ. ಚಂದ್ರೇಗೌಡ

ತೇಜಸ್ವಿಯವರು ಯಾರ ಸಾವಿಗೂ ಕಣ್ಣೀರು ಸುರಿಸಿ ಅತ್ತವರಲ್ಲ. ಬದಲಾಗಿ ಅವರು ಲೊಚಗರಿದು ಗಂಭೀರವಾಗುತ್ತಿದ್ದರು. ಹತ್ತಿರದಲ್ಲೇ ಇದ್ದ ಕಾಡಿನೊಳಗೆ ಹೋಗಿಬರುತ್ತಿದ್ದರು. ಆದರೆ ಅವರೇ ತೀರಿಕೊಂಡಾಗ ಗುಂಡಿಗೆ ಗಟ್ಟಿ ಇದ್ದವರೆಲ್ಲಾ ಗಳಗಳನೆ ಅತ್ತರು. ಹತ್ತಿರ ಸುಳಿದ ಸರಪ್ರಾಣಿಗಳನ್ನೆಲ್ಲಾ ಗದರಿ ಓಡಿಸುತ್ತಿದ್ದ ತೇಜಸ್ವಿಯ ಪಾರ್ಥಿವ ಶರೀರದ ಹಿಂದೆ ಮುದುಗಟ್ಟಿದ ಮುಖದೊಡನೆ ಹರಿದು ಬಂದ ಜನಸಾಗರ ನೋಡಿ ನಮ್ಮ ಜನ ಅವರ ಬರವಣಿಗೆ, ವ್ಯಕ್ತಿತ್ವ ಮತ್ತು ಸಿಡುಕುತನವನ್ನೆಲ್ಲ ಎಷ್ಟು ಮೆಚ್ಚಿದ್ದರು ಎಂದು ಅಚ್ಚರಿಯಾಯಿತು.

ಆ ನಿಸರ್ಗ ಪ್ರಿಯನ ಶವಸಂಸ್ಕಾರಕ್ಕಾಗಿ ಒಂದಿಷ್ಟು ಕಾಡು ಸವರಿ ಮರದ ದಿಮ್ಮಿ ಹೊಟ್ಟಿ ಬೆಂಕಿಕೊಟ್ಟಾಗ, ಇದಕ್ಕೆ ಬದಲು ಭೂದೇವಿಯ ಒಡಲು ಬಗೆದು ಮಲಗಿಸಬಹುದಿತ್ತಲ್ಲ ಅನ್ನಿಸಿತು. ನಮ್ಮ ಜನ ತೇಜಸ್ವಿ ಇಷ್ಟದಂತೆ ಎಂದಾದರೂ ನಡೆದುಕೊಂಡಿದ್ದಾರೆಯೇ ಎಂದು ಯೋಚಿಸಿದರೆ ಅದೂ ಕೂಡ ಸುಳ್ಳಾಗಿತ್ತು. ಆದ್ದರಿಂದಲೇ ಏನೋ ಬರು ಬರುತ್ತ ಅವರು ಈ ನಾಡಿನ ಎಲ್ಲ ಅನಾಹುತ ಮತ್ತು ದುರಂತಗಳಿಗೆ ಪ್ರತಿಕ್ರಿಯಿಸುವುದನ್ನೇ ಕಡಿಮೆ ಮಾಡಿದ್ದರು. “ಮನೆ ಮುಂದೆ ಬೆಂಕಿ ಹಾಕಬೇಡಿ. ಆಕಸ್ಮಾತ್ ಕಿಡಿಹಾರಿ ಮನೆ ಸುಟ್ಟರೆ ಗತಿಯೇನು ಎಂದು ಸಲಹೆ ಕೊಡುತ್ತೇನೆ. ಆದರೂ ಬೆಂಕಿ ಹಚ್ಚಿಕೊಂಡರೆ ಹಾಳಾಗಿ ಹೋಗಿ ಎಂದು ಸುಮ್ಮನಾಗುತ್ತೇನೆ” ಎಂದಿದ್ದ ಅವರು ತಮ್ಮ ಬದುಕಿನುದ್ದಕ್ಕೂ ಹೀಗೆ ಒಂದು ಮಾತಿನ ವಿವೇಕ ಹೇಳಿ ಸುಮ್ಮನಾದದ್ದನ್ನು ನೋಡಿದ್ದೇವೆ.

ಲಂಕೇಶ್‌ರವರು ಪತ್ರಿಕೆ ತೆಗೆಯುವಾಗಲೂ ಇಂತದ್ದೇ ವಿವೇಕವನ್ನು ಹೇಳಿದ್ದರು. “ನೀವು ಎಲ್ಲಾನು ಕಳಕೊಂಡು ಬೀದಿಲಿ ನಿಂತಗಳೋದನ್ನು ನೋಡದು ನಮ್ಮ ಹಣೆಲಿ ಬರೆದದಲ್ರೀ” ಎಂದಿದ್ದರು. ಅದಕ್ಕೆ ಲಂಕೇಶ್ “ಅದೆಲ್ಲ ಬೇಡಿ ನೀವು ಸುಮ್ಮನೆ ವಾರಕ್ಕೊಂದು ಲೇಖನ ಬರೀರಿ” ಎಂದು ಬಂದಿದ್ದರು. ಪತ್ರಿಕೆ ಬಂತು; ಅದರ ಪ್ರಸಾರ ಏರುತ್ತಾ ಹೋಗಿ ತೇಜಸ್ವಿ ಅಚ್ಚರಿಪಡುವಂತಾಯ್ತು. ಲಂಕೇಶರೂ ಕೂಡ ತಿಂಗಳಿಗೆರಡಾವರ್ತಿ ಮೂಡಿಗೆರೆಗೆ ಹೋಗಿ ಪತ್ರಿಕೆ ರೂಪಿಸುವುದರ ಬಗ್ಗೆ ಚರ್ಚಿಸಿ ಬರುತ್ತಿದ್ದರು. ತೇಜಸ್ವಿ ತಮ್ಮ ಗಂಭೀರ ಚಿಂತನೆಯ ಲೇಖನದ ಜೊತೆಯಲ್ಲಿ ‘ಖೂಳ, ನೀಚ, ಅಧಮ’ ಎಂದು ಬೈಸಿಕೊಂಡ ಎಮ್ಮೆಲ್ಲೆ ಬಗೆಗಿನ ಲೇಖನವನ್ನು ನೋಡಿ “ಇದೇನ್ರಿ, ಈ ತರದ ಕಾಂಬಿನೇಷನ್ನು” ಎಂದು ನಕ್ಕಿದ್ದರು. ಲಂಕೇಶ್ ಮತ್ತು ತೇಜಸ್ವಿ ಒಟ್ಟಿಗೆ ಪತ್ರಿಕೆ ತೆಗೆದದ್ದು ಕರ್ನಾಟಕ ಸಾಂಸ್ಕೃತಿಕ ಲೋಕದಲ್ಲಿ ಒಂದು ದೊಡ್ಡ ಘಟನೆಯಾದರೆ ಅವರಿಬ್ಬರ ಬೇರ್ಪಡೆಯೂ ಒಂದು ನೋವಿನ ಘಟನೆಯಾಗಿತ್ತು.

ಪತ್ರಿಕೆ ಹೊರಬರುವುದಕ್ಕೆ ಮೊದಲು ‘ಅಬಚೂರಿನ ಪೋಸ್ಟಾಫೀಸು’ ಮತ್ತು ‘ನಿಗೂಢ ಮನುಷ್ಯರು’ ಓದಿದ್ದ ನಾನು ಈ ನಿಗೂಢ ಮನುಷ್ಯನನ್ನು ಜೀವಮಾನದಲ್ಲಿ ಒಮ್ಮೆ ನೋಡಬೇಕೆನ್ನಿಸಿತ್ತು.

ಒಮ್ಮೆ ಮೇಷ್ಟ್ರು ಇದ್ದಕ್ಕಿದ್ದಂತೆ ಶ್ರೀನಿವಾಸ ಗೌಡರು, ರೆಡ್ಡಿಯನ್ನು ಕೂರಿಸಿಕೊಂಡು ಮೂಡಿಗೆರೆಗೆ ಹೊರಟುಬಿಟ್ಟರು. “ನಾನೂ ಬರ್ಲಾ ಸಾರ್” ಎಂದೆ. “ಹತ್ತಿಗೊ” ಅಂದರು. ಅಂದು ನಮ್ಮೊಂದಿಗೆ ಲಂಕೇಶರ ಗೆಳತಿಯೊಬ್ಬಳೂ ಇದ್ದಳು. ಸಂಜೆಯ ವೇಳೆಗೆ ತೇಜಸ್ವಿ ಮನೆ ತಲುಪಿದೆವು. ಮನೆ ಬಾಗಿಲಲ್ಲೇ ದೈತ್ಯಕಾರವಾಗಿ ನಿಂತಿದ್ದ ತೇಜಸ್ವಿ “ಇನ್ನೈದು ನಿಮಿಷ ತಡ ಆದ್ರು ನಿಮ್ಮ ಕೈಗೆ ಸಿಕ್ತಿರಲಿಲ್ಲ ನಾನು” ಎಂದು ನಕ್ಕರು.

ಆ ಮನೆಯ ಸುತ್ತಲ ಗಿಡಮರವೆಲ್ಲಾ ಬೇಗ ಸಂಜೆ ಮಾಡಿದ್ದರಿಂದ ಲಂಕೇಶ್ ಮನೆಬಾಗಿಲಲ್ಲೇ ಬಾಟಲ್ ಬಿಚ್ಚಿಕೊಂಡು ಪತ್ರಿಕೆಯಲ್ಲಿ ಹೊಸ ಕಾಲಂಗಳನ್ನು ಸೃಷ್ಟಿಸುವ ಬಗ್ಗೆ ಮಾತನಾಡುತ್ತಾ ಕುಳಿತರು. ನಾನು ತೇಜಸ್ವಿಯನ್ನು ವಿಶೇಷವಾಗಿ ಗಮನಿಸುತ್ತಿದ್ದುದನ್ನು ನೋಡಿದ ಅವರು ನನ್ನತ್ತ ತುಟಿಬಿರಿದರು. ಆಗ ಅವರ ಮೀಸೆ ಗಡ್ಡ ಕೂಡಿಕೊಂಡು ಮುನಿಯಂತೆ ಕಾಣಿಸಿದರು. ಆಗ ನನ್ನ ಬಗ್ಗೆ ಜ್ಞಾಪಿಸಿಕೊಂಡವರಂತೆ ಲಂಕೇಶ್ “ಇವ್ರುನು ನಮ್ಮ ಹೊಸ ಬರಹಗಾರ, ಚಂದ್ರೇಗೌಡಾ” ಎಂದು ಪರಿಚಯಿಸಿದರು. ಆಗಲೂ ತೇಜಸ್ವಿ ತುಟಿ ಬಿರಿದರು.

ಅಂದು ಮನೆಯಲ್ಲಿ ಯಾರೂ ಇರಲಿಲ್ಲ. ನಮಗೆಲ್ಲಾ ಕುರ್ಚಿ ಹಾಕುವುದರಿಂದ ಹಿಡಿದು ಟೀ ಮಾಡಿಕೊಡುವುದಕ್ಕೆಲ್ಲಾ ಅವರೇ ಓಡಾಡುತ್ತಿದ್ದರು. ಲಂಕೇಶರ ಗೆಳತಿ ಸಹಾಯ ಮಾಡಲು ಪ್ರಯತ್ನಿಸಿದಾಗ “ನೀವು ಸುಮ್ಮನಿರ್ರಿ. ಇಲ್ಲಿ ಏನೇನು ಎಲ್ಲೆಲ್ಲಿದೆ ಅಂತ ನಿಮಗೇನು ಗೊತ್ತು” ಎನ್ನುತ್ತಾ ಅನ್ನ, ಸಾರು ಮಾಡಿ ಎಗ್‌ಬುರ್ಜಿಯನ್ನೂ ತಯಾರಿಸಿದರು. ವರಾಂಡದಲ್ಲಿ ಕುಳಿತಿದ್ದ ಶ್ರೀನಿವಾಸಗೌಡರು ಮತ್ತು ಲಂಕೇಶರು ಎಣ್ಣೆ ಏಟಿಗೆ ಬಿರುಸಾಗಿ ಮಾತನಾಡುತ್ತಿದ್ದರು. ಅಲ್ಲಿಗೆ ಬಂದ ತೇಜಸ್ವಿ ಆರ್ಸಿ ಬಾಟಲ್ ಮುಚ್ಚಳ ತೆಗೆದು ಅದಕ್ಕೇ ಎರಡು ಬಾರಿ ವಿಸ್ಕಿ ಹಾಕಿಕೊಂಡು ಗುಟುಕರಿಸಿ ಗಂಟಲು ಸರಿ ಮಾಡಿಕೊಂಡು ಚರ್ಚೆಯಲ್ಲಿ ಸೇರಿಕೊಂಡರು. ಒಂದು ರೀತಿಯ ಸೋಮಾರಿತನದಲ್ಲೇ ಮಾತನಾಡುತ್ತಾ ಇಂಗ್ಲಿಷ್‌ಗೆ ಜಾರಿಕೊಂಡು ಭುಜ ಕುಣಿಸಿ ನಗುತ್ತಿದ್ದ ತೇಜಸ್ವಿ ಗೋಗರಿಯುವ ನಗುನಕ್ಕು ಉಸಿರೆಳೆದುಕೊಂಡ ಹುಡುಗನಂತೆ ತಮಾಷೆ ಮಾಡುತ್ತಿದ್ದರು.



ಆಗ ಸಣ್ಣಗೆ ಮಳೆ ಶುರುವಾಯ್ತು. ಮರದ ಮೇಲಿದ್ದ ಕೋತಿ ಮಿಸುಕಾಡದೆ ಕುಳಿತಿತ್ತು. “ಆ ಕೋತಿ ನೋಡಿ ಸಾ, ಮಳೆಗೂ ಅಲ್ಲಾಡದಂಗೆ ಕುಂತದೆ” ಎಂದೆ. “ಎಷ್ಟು ಸಾವಿರ ವರ್ಷದಿಂದ ಕುಂತವೆ ಗೊತ್ತ ಅವು?” ಎಂದು ನನ್ನ ಮುಗ್ಧ ಪ್ರಶ್ನೆಗೆ ಕೋತಿಗಳ ಪೂರ್ವೇತಿಹಾಸವನ್ನೇ ಹೇಳಲಾರಂಭಿಸಿದರು. ಆಗ ಲಂಕೇಶ್ “ತಗಳಯ್ಯ ನೀನೊಂಚೂರ” ಎಂದು ಗ್ಲಾಸಿಗೆ ಆರ್ಸಿ ಹಾಕಿದರು. ಅದು ತುಂಬ ರುಚಿಯಾಗಿದ್ದರಿಂದ ಒಂದೇ ಗುಟುಕಿಗೆ ಕುಡಿದ ನಾನು ಮತ್ತೆ ಗ್ಲಾಸ್ ಒಡ್ಡಿದೆ. “ಥೂ, ಥೂ, ನೀವೆಲ್ಲ ಕುಡಿಯದಲ್ಲ ಇದು. ಜಾಸ್ತಿ ಕುಡಿಬೇಡ” ಎಂದು ಸೀಸವನ್ನು ಪಕ್ಕಕ್ಕೆ ಇಟ್ಟುಕೊಂಡರು. “ಅವುಕ್ಕೆಲ್ಲಾ ಕುಡಿಸಿ ಹಾಳು ಮಾಡಬೇಡಿ ಕಂಡ್ರಿ” ಎಂದ ತೇಜಸ್ವಿ, “ಮರತೆಬಿಟ್ಟದ್ದೆ ಕಂಡ್ರಿ. ಗಾಳ ತಂದರೇನ್ರಿ? ” ಎಂದರು. “ಹೊರಡುವಾಗ ಜ್ಞಾಪಕಕ್ಕೆ ಬರಲಿಲ್ಲ ಸಾರಿ” ಎಂದ ಲಂಕೇಶ್ ತುಂಟತನದಿಂದ ನಕ್ಕರು. “ಹಲ್ಕ ನೀನು” ಎಂದು ತೇಜಸ್ವಿ ಬೇಸರದ ಮುಖಮಾಡುವಷ್ಟರಲ್ಲಿ ಲಂಕೇಶ್ ಗಾಳ ತೆಗೆದು ತೇಜಸ್ವಿಗೆ ಕೊಟ್ಟರು.

ಲಂಕೇಶ್ ಗೆಳತಿ ಸುಸ್ತಾದಂತೆ ಬಾಗಿಲಿಗೆ ಒರಗಿಕೊಂಡು ನಿಂತಿದ್ದನ್ನು ನೋಡಿದ ತೇಜಸ್ವಿ “ಯಾಕ್ರಿ ಹುಷಾರಿಲ್ಲವೇನ್ರಿ?” ಎಂದರು. ಆಕೆಯ ಆರೋಗ್ಯದ ಬಗ್ಗೆ ಲಂಕೇಶ್ ಹೇಳಿದಾಗ “ಹಾಗಾದ್ರೆ ಹುಷಾರು ಕಂಡ್ರಿ. ಇಲ್ಲಿ ನಮ್ಮ ಮನೇಲಿ ತೀರಿಕೊಂಡು ನಮ್ಮ ಮೇಲೆಲ್ಲ ರೇಪ್, ಮರ್ಡರ್ ಕೇಸು ಬೀಳಂಗಾದಾತು. ಆ ಹಾಳು ಪೊಲೀಸ್‌ನೋರು ನಮ್ಮ ಮಾತ ಕೇಳ್ತರೇನ್ರಿ? ಯಾವುದ್ನೂ ಆಕೆ ಕೈಲಿ ಮೊದ್ಲೆ ಬರಿಸಿಗಳದು ಒಳ್ಳೆದು. ಆದ್ರೆ ಅದೂ ಇನ್ನೊಂದು ಸಮಸ್ಯೆ ಕಂಡ್ರಿ” ಎಂದು ಬಿದ್ದುಬಿದ್ದು ನಕ್ಕರು.

ಊಟದ ಸಮಯಕ್ಕೆ ಎಲ್ಲವನ್ನು ತಂದು ಟೇಬಲ್ ಮೇಲೆ ಜಮಾಯಿಸಿದ ತೇಜಸ್ವಿ ಎಲ್ಲರ ತಟ್ಟೆಗೂ ಗುಡ್ಡೆಯಲ್ಲಿ ಕೆಮ್ಮಣ್ಣು ಬಗೆದು ಹಾಕಿದಂತೆ ಕೆಂಪಕ್ಕಿ ಅನ್ನ ಹಾಕಿದರು. ಎಲ್ಲ ಉಣ್ಣುತ್ತಿರಬೇಕಾದರೆ ಲಂಕೇಶ್ ಗೆಳತಿ ಬೆಂದು ಕಡ್ಡಿಯಂತಾಗಿದ್ದ ಹುಳಗಳನ್ನು ಅನ್ನದಿಂದ ತೆಗೆದು ತೋರಿಸುತ್ತ “ಇದೇನು? ” ಎಂದು ಕೇಳಿದಳು. “ಅವು ಅಕ್ಕಿ ಹುಳಕಂಡ್ರಿ, ಸುಮ್ಮನೆ ಊಟ ಮಾಡ್ರಿ” ಎಂದು ಆರಾಮಾಗಿ ಹೇಳಿದರು. ಹೆದರಿದ ಆಕೆ ಊಟ ಮಾಡಲಿಲ್ಲ. ನಂತರ ತೇಜಸ್ವಿ ತಂದ ಮಜ್ಜಿಗೆಯಲ್ಲೂ ಇರುವೆಗಳಿದ್ದವು. ಅವು ಗಾಬರಿಯಿಂದ ಪಾತ್ರೆ ಬಿಟ್ಟು ಓಡಲು ಅವಕಾಶ ಕೊಡದಂತೆ ಹುಯ್ದುಕೊಂಡು “ಮಜ್ಜಿಗೆಗೆ ಇರುವೆ ಅತ್ತವೆ ಸಾರ್” ಎಂದೆ. “ಕಣ್ಣಿಗೆ ಒಳ್ಳೆದು ಕಂಡ್ರಿ” ಎಂದರು. ನಾನವರನ್ನು ಮೆಚ್ಚಿಸಲು ಇರುವೆ ಮಜ್ಜಿಗೆಯನ್ನೆ ಹುಯ್ದುಕೊಂಡೆ. ಮರುದಿನ ತೇಜಸ್ವಿ ತುಂಬ ಗಂಭೀರವಾಗಿ “ಸರ್ಕ್ಯುಲೇಷನ್ ಸರಿಯಾಗಿ ನೋಡಿಕೊಳ್ಳಿ. ಅಚ್ಚಿನ ತಪ್ಪು ಆಗದಂತೆ ಎಚ್ಚರ ವಹಿಸಿ” ಎಂದು ಲಂಕೇಶರಿಗೆ ಹೇಳಿ ಕಳುಹಿಸಿದರು. ಇವೆಲ್ಲಾ ನಾನು ನೆನೆಸಿಕೊಂಡು ಖುಷಿಪಡುವ ಸಂದರ್ಭಗಳಾಗಿ ಉಳಿದಿದ್ದವು.

ಶೃಂಗೇರಿಯ ಐತಿಹಾಸಿಕ ಸಭೆ

ಮತ್ತೊಮ್ಮೆ ತೇಜಸ್ವಿಯನ್ನು ನೋಡಲು ಅವರ ಮನೆಗೆ ಹೋಗುವ ಅವಕಾಶ ಬಂತು. ಅದೊಂದು ದಾರುಣ ಸಂದರ್ಭ. ಸಿರಿಮನೆ ನಾಗರಾಜ ತನ್ನ ತಂಗಿಯನ್ನು ಹರಿಜನರ ಹುಡುಗನಿಗೆ ಕೊಟ್ಟು ಮದುವೆ ಮಾಡಿದ್ದ. ಇದರ ವಿರುದ್ಧ ಹರಿಹರಪುರದ ಮಠದ ಸ್ವಾಮಿ, ಶಿವಳ್ಳಿ ಬ್ರಾಹ್ಮಣರೆಲ್ಲಾ ತಿರುಗಿಬಿದ್ದಿದ್ದರು. ಸಿರಿಮನೆ ಚಿಕ್ಕಪ್ಪನ ಹೆಣ್ಣುಮಕ್ಕಳಿಬ್ಬರಿಗೆ ಯಾರೋ “ನಿಮಗ್ಯಾರು ಹರಿಜನರ ಹುಡುಗರು ಸಿಗಲಿಲ್ಲವೇ” ಎಂದು ಮೂದಲಿಸಿದ್ದಕ್ಕೆ ಆ ಹೆಣ್ಣು ಮಕ್ಕಳು ಮೆಟಾಸಿಡ್ ತೆಗೆದುಕೊಂಡು ಅಸುನೀಗಿದ್ದರು. ಇದನ್ನು ಕೇಳಿದ ತೇಜಸ್ವಿ ಕನಿಕರದಿಂದ ಲೊಚಗರಿದು “ಈಗ ನಾನೇನು ಮಾಡಬೇಕು ಹೇಳಿ” ಎಂದರು. “ಶೃಂಗೇರಿಯಲ್ಲಿ ಒಂದು ಪ್ರತಿಭಟನೆ ಮಾಡೋಣ. ಅಂದು ಅಂತರ್ಜಾತಿ ವಿವಾಹಿತರ ಸಮ್ಮೇಳನ ಜರುಗಿಸುವುದರ ಮುಖಾಂತರ ಪ್ರತಿಭಟಿಸೋಣ” ಎಂದಾಗ ಒಪ್ಪಿಕೊಂಡ ತೇಜಸ್ವಿ, “ನಡೀರಿ ಸರಿಯಾಗಿ ಬೈಯ್ಯನ ಆ ಶನಿಮುಂಡೆಗಂಡ್ರ. ಈ ಜಗದ್ಗುರುಗಳು, ಸ್ವಾಮಿಗಳನ್ನು ನಾವು ಸೋಲಿಸಕ್ಕಾಗದಿಲ್ಲ ಕಂಡ್ರೀ. ತಿಂದಂಗೆ ತಿಂದಂಗೆ ಬೀಳ್ತಯಿರತವೆ. ಕಡಿಗೆ ಸೋಲರು ನಾವೇಯ. ಇವರನ್ನೆಲ್ಲ ಬದಲಾಯ್ಸಕ್ಕಾಯ್ತದೇನ್ರಿ” ಎಂದು ನಗುತ್ತ ಕಳಿಸಿದ್ದರು.

1988 ನೇ ಅಕ್ಟೋಬರ್ 20 ರಂದು ಜರುಗಿದ ಅಂತರ್ಜಾತಿ ವಿವಾಹಿತರ ಸಮ್ಮೇಳನದಲ್ಲಿ ತೇಜಸ್ವಿ, ರಾಮದಾಸ್, ವಡ್ಡರ್ಸೆ ರಘುರಾಮಶೆಟ್ಟರೆಲ್ಲಾ ಭಾಗವಹಿಸಿದ್ದರು. ಆದರೆ ಅದೇ ದಿನಾಂಕದಂದು ಶ್ರೀರಂಗಪಟ್ಟಣದಲ್ಲಿ ರೈತಸಂಘ ಮತ್ತು ಪ್ರಗತಿರಂಗ ಒಟ್ಟಾಗಿ ಸೇರಿ ರಾಜಕಾರಣ ಮಾಡುವ ಚರ್ಚೆ ಜರುಗುವುದಿತ್ತು. ಈ ಚರ್ಚೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಲೇ ಅವರೆಲ್ಲ ಶೃಂಗೇರಿಯಲ್ಲಿ ಸೇರಿದ್ದಾರೆ ಎಂದು ರೈತ ಸಂಘದವರು ಭಾವಿಸಿದರು. ಇದರಿಂದಾಗಿ ಇವರಿಬ್ಬರ ನಡುವೆ ಬಿರುಕು ಮೂಡಿತು.

ಆದರೆ ತೇಜಸ್ವಿಗೆ ರೈತಸಂಘದ ರಾಜಕಾರಣವಾಗಲಿ, ಪ್ರಗತಿರಂಗದ ರಾಜಕಾರಣವಾಗಲಿ ಒಂದಿಷ್ಟೂ ಬೇಕಿರಲಿಲ್ಲ. ಆದರೂ ರೈತಸಂಘದವರು ಬೆಂಗಳೂರಿನಲ್ಲಿ ನಡೆಸಿದ ಬೃಹತ್ ಸಮಾವೇಶಕ್ಕೆ ತೇಜಸ್ವಿಯವರನ್ನು ಎಳೆತರುವುದರಲ್ಲಿ ಯಶಸ್ವಿಯಾಗಿದ್ದರು. ಅನಂತರ ಲಂಕೇಶ್, ತೇಜಸ್ವಿ, ರಾಮದಾಸ್, ಎಚ್.ಎಲ್. ಕೇಶವಮೂರ್ತಿ, ಶ್ರೀನಿವಾಸಗೌಡರನ್ನೊಳಗೊಂಡ ಪಂಚ ಪಾಂಡವರ ಪ್ರಗತಿರಂಗ ರಾಜ್ಯದಾದ್ಯಂತ ಸಭೆ ಏರ್ಪಡಿಸಿಕೊಂಡು ಸುತ್ತಾಡುತ್ತಿರಬೇಕಾದರೆ ಆ ಸಭೆಗಳಿಗೆ ತೇಜಸ್ವಿಯವರನ್ನು ಎಳೆ ತರುವುದೊಂದು ಸಾಹಸವಾಗಿಬಿಟ್ಟಿತು. ಅವರನ್ನು ಕರೆತರುವುದೇ ಸರಪಳಿಯಿಂದ ಬಂಧಿಸಿದ್ದ ಒಂಟಿ ಸಲಗನನ್ನು ಕಾಡಿನಿಂದ ಈಚೆ ಎಳೆದು ತಂದಂತಾಗುತ್ತಿತ್ತು. ಕೆಲವು ಸಭೆಗಳಲ್ಲಿ ಲಂಕೇಶರ ಒತ್ತಾಯದಿಂದ ತೇಜಸ್ವಿ ಬಂದು ಭಾಗವಹಿಸಿದರು.

ಇದರಿಂದ ಉತ್ತೇಜನಗೊಂಡ ನಾವೊಂದಿಷ್ಟು ಗೆಳೆಯರು ಶಿವಮೊಗ್ಗದಲ್ಲಿ ಪ್ರಗತಿರಂಗದ ಸಭೆ ಮಾಡಿ ತೇಜಸ್ವಿಯವರನ್ನು ಕರೆದೆವು. ಸಭೆ ದಿನ ಫೋನ್ ಮಾಡಿದರೆ, “ಸ್ಕೂಟ್ರಲ್ಲಿ ಹೋಗ್ತಾಯಿರುವಾಗ ಸ್ಕಿಡ್ಡಾಗಿ ಒಂದಿಷ್ಟು ಮಂಡಿ ನೋವಾಗಿದೆ ಕಣಯ್ಯ” ಎಂದರು. ಇನ್ನರ್ಧ ಗಂಟೆ ಬಿಟ್ಟು ಫೋನ್ ಮಾಡಿ “ಈಗಾಗಲೇ ಲಂಕೇಶ್, ರಾಮದಾಸ್ ಬಂದು ಸರ್ಕಿಟ್ ಹೌಸಿನಲ್ಲಿದ್ದಾರೆ, ಬೇಗ ಹೊರಡಿ ಸಾರ್” ಎಂದರೆ “ತಲೆನೋವು ಕಣಯ್ಯ” ಎಂದರು. ಅವರ ಈ ಸಬೂಬುಗಳು ನಮ್ಮಲ್ಲಿ ನಗೆ ಉಕ್ಕಿಸುತ್ತಿದ್ದವು.

ತೇಜಸ್ವಿಯವರ ರಾಜಕಾರಣದ ಆಕಾಂಕ್ಷೆ ಹಿಂಗಿ ಹೋಗಿ ಬಹಳ ದಿನಗಳಾಗಿದ್ದು ನಮಗೆ ಗೊತ್ತಿರಲಿಲ್ಲ. ಗೋಪಾಲಗೌಡರ ಕಾಲದಲ್ಲಿ ಅವರೂ ಖಾಲಿ ಕುರ್ಚಿಗಳಿಗೆಲ್ಲಾ ಭಾಷಣ ಮಾಡಿ, ಕೋಣಂದೂರು ಲಿಂಗಪ್ಪನನ್ನು ಆರಿಸಿ ವಿಧಾನಸಭೆಗೆ ಕಳಿಸಿದ ನಂತರ “ಇನ್ನು ನಮ್ಮ ಕೆಲಸ ಇಷ್ಟೇ ನೋಡಿ” ಎಂಬಂತೆ ಹಿಂದೆ ಸರಿದಿದ್ದರು. ಹಾಗೆಯೇ ಹೊಳೆಹೊನ್ನೂರು ಸಂತೆಯಲ್ಲೆಲ್ಲಾ ರೈತರನ್ನು ಎಚ್ಚರಿಸುವ ಭಾಷಣ ಮಾಡುತ್ತಾ ಆ ಚಳವಳಿಗೆ ಶಾಮಣ್ಣ, ಸುಂದರೇಶ್ ನಂತಹವರೆಲ್ಲಾ ಬಂದು ಸೇರಿಕೊಂಡ ನಂತರ ಅಲ್ಲೂ ತಮ್ಮ ಕರ್ತವ್ಯ ಮುಗಿಯಿತು ಎಂಬಂತೆ ಕಾಡು ಸೇರಿಕೊಂಡಿದ್ದರು. ಕೊನೆಗೂ ಅವರನ್ನು ಮತ್ತೆ ರಾಜಕಾರಣಕ್ಕೆ ಎಳೆತರುವುದರಲ್ಲಿ ಲಂಕೇಶರೂ ಸೋತರೆಂದೇ ಹೇಳಬೇಕು.

ಹೊಸ ರಾಜಕಾರಣ ಮಾಡಲು ಹೊರಡುವ ಬಗ್ಗೆ ಅವರು ಖಚಿತವಾಗಿ ಲಂಕೇಶ್ ಜೊತೆ ಸಂವಾದಿಸಿದ್ದು ನಾಡಿನ ಜನತೆಗೇ ಗೊತ್ತಿದೆ. ಸಣ್ಣ ಝರಿಯೊಂದು ನದಿಯಾಗಿ ಹೊಳೆಯಾಗಿ ಕಡೆಗೆ ಸಮುದ್ರದೆಡೆಗೆ ರಭಸವಾಗಿ ಹೊರಟಂತೆ ಕಾಣುತ್ತಿದ್ದ ತೇಜಸ್ವಿಯವರಿಗೆ ಅವರ ಸುತ್ತಲವರ ಚಟುವಟಿಕೆ ಅಡೆತಡೆಗಳಂತೆ ಕಾಣುತ್ತಿದ್ದವು. ಆ ಸಮಯದಲ್ಲಿ ನನಗೆ ಸರಿಯಾಗಿ ಬೈದ ಅವರು “ಹಲ್ಕಗಳು, ನೀವೆಲ್ಲಾ ಸೇರಿ ಆ ಲಂಕೇಶ್‌ಗೆ ಸುಳ್ಳು ಸುಳ್ಳೆ ಬುಗಲಚ್ಚಿ ಭಾಷಣಕ್ಕೆ ಯಳಕೊಂಡು ಬತ್ತಿರಿ. ಹಾಳಾಗೋಗಿ ಅಂದ್ರೆ ನಮ್ಮನ್ನು ಬಿಡೋಲ್ಲ. ಶಿವಮೊಗ್ಗದಲ್ಲಿ ಆ ದಿವಾಕರ ಹೆಗಡೆ, ನೀನು ಸೇರಿಕೊಂಡು ಮಾಡೋ ಕಿತಾಪತಿ ಇವೆಲ್ಲಾ, ಸುಮ್ಮನಿರಕ್ಕೇನಾಗಿದೆ ನಿಮಗೆ?” ಎಂದರು.

“ನಾವು ಲಂಕೇಶ್ ಹೇಳಿದಂಗೆ ಮಾಡ್ತಿವಿ” ಎಂದೆ. “ಲಂಕೇಶ್‌ಗೆ ರಾಜಕಾರಣದ ಅಮಲು ಇಳಿಯೋವರಿಗಾದ್ರು ಸುಮ್ಮನಿರ್ರೊ ಶನಿಗಳಾ. ನಾನೂ ನೋಡ್ತಾಯಿದ್ದೀನಿ. ಯಲ್ಲ ನಿಮ್ಮಂಥೋರಿಂದ್ಲೆ ನಡೀತಾಯಿರದು” ಎಂದು ಬೈದಿದ್ದ ತೇಜಸ್ವಿಯವರು ನಿರಾಳಗೊಂಡಿದ್ದು ಪ್ರಗತಿರಂಗದ ಸಭೆಗಳು ಬೆಂಗಳೂರಲ್ಲಿ ಜರುಗಿದ ಜಾಗೃತ ಸಾಹಿತ್ಯ ಸಮ್ಮೇಳನದೊಂದಿಗೆ ಮುಕ್ತಾಯಗೊಂಡಾಗ.

ಡಿ.ಆರ್. ನಾಗರಾಜ್, ಶೂದ್ರ ಶ್ರೀನಿವಾಸ್, ಅಗ್ರಹಾರ ಮತ್ತು ಇತರರು ಶ್ರಮವಹಿಸಿ ಏರ್ಪಡಿಸಿದ್ದ ಆ ಸಮ್ಮೇಳನಕ್ಕೆ ತೇಜಸ್ವಿ ಬಂದಿದ್ದರು. ಅಲ್ಲಿದ್ದ ಜನರೆಲ್ಲ ತೇಜಸ್ವಿಯತ್ತ ಕುತೂಹಲದಿಂದ ನೋಡುತ್ತಿದ್ದರು. ಆಗ ಡಿ.ಆರ್. ತೇಜಸ್ವಿಯವರನ್ನು ವೇದಿಕೆಗೆ ಕರೆತರಲು ತುಂಬ ಪ್ರಯತ್ನಿಸಿದರು. “ಒತ್ತಾಯ ಮಾಡಿದ್ರೆ, ಇಲ್ಲಿಂದ

ತೇಜಸ್ವಿಗೆ ಅಪಚಾರದ ವಿದಾಯ

ಪೂರ್ಣಚಂದ್ರ ತೇಜಸ್ವಿ ಜೀವ ತೊರೆದರೆಂಬ ಸುದ್ದಿ ಗೊತ್ತಾದ ಬಳಿಕ ಅವರ ಕಳೇಬರದೆದಿರು ಎರಡು ರೀತಿಯ ಅಪಚಾರಗಳಾಗಬಹುದೆಂಬ ಚಟಪಟಿಕೆಯಿತ್ತು ನಮಗೆ.

ಒಂದು ಶಾಸ್ತ್ರಾಚಾರ ಇತ್ಯಾದಿಗಳ ಮೂಲಕ ಸಂಸ್ಕಾರ ನಡೆಸುವುದು. ತೇಜಸ್ವಿಯವರ ಭಾವ ಅಂದರೆ ಕುವೆಂಪುರವರ ಅಳಿಯ ಚಿದಾನಂದಗೌಡರು ಈಗ ಪೂರ್ತಿ ಪುರೋಹಿತಶಾಹಿಯಂತಾಗಿರುವುದೇ ಇದಕ್ಕೆ ಕಾರಣವಾಗಿತ್ತು, ಕೊನೆಗೆ ಅಂಥದ್ದೇನೂ ನಡೆಯದೆ ತೇಜಸ್ವಿ ತಮ್ಮ ಮೃತದೇಹದ ಮೇಲಾಗಬಹುದಾದ ಅಪಚಾರದಿಂದ ಪಾರಾದರು. ಆದರೆ ನಮ್ಮ ಇನ್ನೊಂದು ಕಸಿವಿಸಿ ಕೊನೆಗೂ ನಿಜವಾಗಿ ಹೋಯಿತು. ಅದು ಸಕಲ ಸರ್ಕಾರಿ ಗೌರವ, ಪೊಲೀಸು-ಪುಢಾರಿಗಳ ಪೆರೇಡ್‌ನಲ್ಲಿ ತೇಜಸ್ವಿಯವರನ್ನು ಬೀಳ್ಕೊಟ್ಟಿದ್ದು!

ಯಾವ ಪುರೋಹಿತ, ಪುಢಾರಿಗಳಿಂದ ಹಾಗೂ ಸರ್ಕಾರದ ಅಧಿಕಾರದ ಕೇಂದ್ರಗಳಿಂದಲೇ ತೇಜಸ್ವಿ ದೂರವಿರುತ್ತಿದ್ದರೋ ಅವೆಲ್ಲಾ ವಿಲನ್ ಪಾತ್ರಗಳೂ ಶನಿಗಳಂತೆ ಬಂದು ನಿರುತ್ತರಿಯಾಗಿದ್ದ ತೇಜಸ್ವಿ ದೇಹದ ಸುತ್ತ ಕೆಲಕಾಲ ನಿಂತು ವಿಕೃತ ನಡವಳಿಕೆ ತೋರಿಸಿ ಹೋದರು.



ಸರ್ಕಾರಗಳ ಹಂಗು, ಪ್ರಶಸ್ತಿ-ಪುರಸ್ಕಾರಗಳು, ಸರ್ಕಾರಿ previlege ಗಳಿಂದ ಸದಾ ದೂರವಿರುತ್ತಿದ್ದ ತೇಜಸ್ವಿಗೆ 'ಸಕಲ ಸರ್ಕಾರಿ ಗೌರವ'ವೆಂಬ ಕೃತಕ ಬೀಳ್ಕೊಡುಗೆಯ ಅಗತ್ಯ ಖಂಡಿತಾ ಇರಲಿಲ್ಲ. ಇನ್ನು ಮಿಗಿಲಾಗಿ ಪಾತಕಿಗಳೂ, ಫ್ಯಾಸಿಸ್ಟರೂ ನಡೆಸುತ್ತಿರುವ ಈಗಿನ ಸರ್ಕಾರಿ ಗೌರವವಂತೂ ಬೇಕಿರಲಿಲ್ಲ. ತೇಜಸ್ವಿ ಕುಟುಂಬ ಇಂಥದ್ದನ್ನೆಲ್ಲಾ ಬಯಸಿರಲಿಕ್ಕಿಲ್ಲ. ಆದರೆ ಇಂಥದ್ದರ ಅಗತ್ಯವೂ ಇಲ್ಲ ಎನ್ನಲಾರದೆ ಸುಮ್ಮನಾದರಲ್ಲ ಎಂಬ ಬೇಸರ ಹಾಗೇ ಉಳಿದಿದೆ. ಜಿಲ್ಲಾಧಿಕಾರಿಯೆಂಬ ಕಾರಕೂನನೊಬ್ಬ ಬಂದು ಸರ್ಕಾರದ ಅಧಿಕೃತ ಹಾರ ಹಾಕುವುದು, ಆರೆಂಟು ಜನ ಸಶಸ್ತ್ರ ಪೊಲೀಸರು ಬಂದು ತೇಜಸ್ವಿಯವರೆದುರು ನಿಂತು ಲಾಗ ಹಾಕಿ ಹೋಗುವುದು. ಎಲ್ಲರ ಎದೆಗಳಲ್ಲೂ ಮಡುಗಟ್ಟಿದ್ದ ಮೌನ ಯಾತನೆಯನ್ನು ಚದುರಿಸಿದಂತೆ ಗುಂಡು ಹಾರಿಸಿದ್ದೆಲ್ಲವನ್ನೂ ಅಪಚಾರವೆನ್ನದೆ ಇನ್ನೇನೆಂದು ಹೇಳಲು ಸಾಧ್ಯ? ಇಂಥದ್ದೆಲ್ಲದರಿಂದ ದೂರವಿದ್ದ ತೇಜಸ್ವಿಯವರ ಮೇಲೆ ಸೇಡು ತೀರಿಸಿಕೊಳ್ಳುವಂತೆ ಸರ್ಕಾರದವರು ವರ್ತಿಸಿಬಿಟ್ಟರು. ಈ ಅಪಚಾರವನ್ನು ಪೂರ್ತಿಗೊಳಿಸುವವನಂತೆ ಕಾಣಿಸಿಕೊಂಡಿದ್ದು ಹಾಲಿ ಕರ್ನಾಟಕ ಸರ್ಕಾರದ ಕೊಲೆಗಡುಕ ಫ್ಯಾಸಿಸ್ಟ್ ನಾಯಕ ಯಡಿಯೂರಪ್ಪ. ಈತ ಬರುತ್ತಾನೆಂದು ಯಾರೂ ಕಾದು ಕೂತಿರಲಿಲ್ಲ. ಬಂದು ಹೋದನೆಂಬ ಬಗ್ಗೆ ಯಾರಿಗೂ ದನ್ಯತಾಭಾವವೂ ಸ್ಫುರಿಸಲಿಲ್ಲ. ಸುಮ್ಮನೆ ಬೇವಾರ್ಸಿಯಂತೆ ಬಂದು, ಬೇವಾರ್ಸಿಯಂತೆಯೇ ನಿರ್ಗಮಿಸಿ ಹೋದ ಆತ.

ಈ ರಾಜಕಾರಣಿಗಳ ಇನ್ನೊಂದು ವಿಚಿತ್ರವೇನೆಂದರೆ ಜಾತ್ಯತೀತ ದಳದ ಒಬ್ಬನೂ ಅಲ್ಲಿ ಕಾಣಿಸಿಕೊಳ್ಳದೇ ಹೋದದ್ದು. ಬಿಜೆಪಿಯಿಂದ ಯಡಿಯೂರಪ್ಪ, ಶಾಸಕ ಜೀವರಾಜ್, ಅರೆಬೆಡ್ಡಿ ಡಿ.ಬಿ. ಚಂದ್ರೇಗೌಡ ಬಂದರೆ ಕಾಂಗ್ರೆಸ್‌ನಿಂದ ಮೋಟಮ್ಮ, ಕುಮಾರ್ ಬಂಗಾರಪ್ಪ, ತಾರಾದೇವಿ, ಎಚ್. ವಿಶ್ವನಾಥ್ ಮುಂತಾದವರಿದ್ದರು. ಧರಂಸಿಂಗ್, ಖರ್ಗೆ ಮುಂತಾದ ಪಂಡಿತರೆಲ್ಲಾ ವಿಧಾನ ಸೌಧದಲ್ಲೇ ಒಂದನೇ ಕ್ಲಾಸ್ ಲೆವೆಲ್‌ನ ಹೇಳಿಕೆಗಳನ್ನು ಉದುರಿಸಿ ತಮ್ಮ ಯೋಗ್ಯತೆ ತೋರಿಸಿಕೊಂಡಿದ್ದರು.

ಸರ್ಕಾರಿ ಗೌರವವೆಂದ ಮೇಲೆ ಬರಬಹುದಾಗಿದ್ದ ಜೆಡಿಎಸ್‌ನ ಮುಖ್ಯಮಂತ್ರಿ ಕುಮಾರಸ್ವಾಮಿ ಹತ್ತಿರದ ಕಟೀಲು ದೇವಸ್ಥಾನದೊಳಗೆ ರಹಸ್ಯ ಹೋಮದಲ್ಲಿ ತಲ್ಲೀನರಾಗಿದ್ದರು! ಈತ ಹಾಳಾಗಿ ಹೋಗಲಿ ಬಿಡಿ, ಆದರೆ ಪೊಲೀಸ್ ಖಾತೆ ಮಂತ್ರಿ ಎಂ.ಪಿ. ಪ್ರಕಾಶ್ ಏನೂ ಮಾತಾಡಲಿಲ್ಲ, ಬಂದೂ ಹೋಗಲಿಲ್ಲ. ಇದೇನು ದೊಡ್ಡ ವಿಚಾರ ಅಲ್ಲದೇ ಹೋದರೂ ಈಗಿನ ಸರ್ಕಾರದಲ್ಲಿ, ಇವತ್ತಿನ ರಾಜಕಾರಣಗಳಲ್ಲಿ ಸಾಹಿತ್ಯ-ಸಂಸ್ಕೃತಿ ಬಗ್ಗೆ ನಾಲ್ಕು ಮಾತಾಡಬಲ್ಲ ತಯಾರಿ ಇದ್ದಿದ್ದೇ ಪ್ರಕಾಶ್‌ಗೆ. ಈತನಿಗೆ ಆಗಾಗ್ಗೆ ತೇಜಸ್ವಿ ಬರವಣಿಗೆ ಬಗ್ಗೆ ಮಾತೆಸೆಯುವ ಚಟವೂ ಇತ್ತು. ಹಾಗಾಗಿ ಜನ 'ಪ್ರಕಾಶ್ ಬರಲಿಲ್ಲ ಯಾಕೆ' ಅಂದುಕೊಂಡರು.

ತೇಜಸ್ವಿಯವರನ್ನು ಎಲ್ಲಿ ಊಳಿಸಬೇಕೆಂಬ ಬಗ್ಗೆ ಬಹಳ ಚರ್ಚೆಯಾಗಿ ಕೊನೆಗೆ ಕುಪ್ಪಳಿಯ ಕವಿಶೈಲ ಎಂದು ಕುಟುಂಬದವರೆಲ್ಲಾ ನಿರ್ಧರಿಸಿದಾಗ ಕೆಲವರು ಬೇಡ ಎಂದರಂತೆ. ಆ ಸ್ಥಳ ಈಗಾಗಲೇ ಕುವೆಂಪು ಟ್ರಸ್ಟ್‌ಗೆ ಸೇರಿರುವುದರಿಂದ ಹಾಗೂ ಮುಂದೆ ಕುವೆಂಪು ಕುಟುಂಬದವರ ಸಂಸ್ಕಾರ ತಾಣವಾಗಿ ಬಿಟ್ಟೀತೆಂದು ಅವರೆಲ್ಲಾ ಬೇಡ ಎಂದರೇನೊ. ಆದರೆ ಅಂತಿಮವಾಗಿ ತೇಜಸ್ವಿಗೆ ಅಲ್ಲಿಂದಲೇ ವಿದಾಯ ಹೇಳಲಾಯಿತು. ಈ ಬಗ್ಗೆ ಕೂದಲು ಸೀಳುವಂತಾ ಚರ್ಚೆಗಳಾಗದಿದ್ದುದು ಒಳ್ಳೆಯದಾಯಿತು.

ಕರ್ನಾಟಕ ಕಂಡ ಅತ್ಯಂತ ದೊಡ್ಡ ಮನುಷ್ಯನೊಬ್ಬನ ಸಂಸ್ಕಾರಕ್ಕೆಂದು ದೊಡ್ಡ ಚಿತೆ ಸಿದ್ಧಪಡಿಸುತ್ತಿದ್ದಾಗ ನಮ್ಮ ಚಂದ್ರೇಗೌಡರು ಅಲ್ಲಿನ ಉಸ್ತುವಾರಿ ನೋಡಿಕೊಳ್ಳುತ್ತಿದ್ದವರ ಹತ್ತಿರ ಹೋಗಿ 'ಬೆಂಕಿ ಜೋರಾಗಿ ಅಕ್ಕಪಕ್ಕ ಕಾಡಿಗೆ ಹಬ್ಬೀತು, ಹುಷಾರಾಗಿರಿ' ಎಂದರು.


ಇದೂ ತೇಜಸ್ವಿ ಕಲಿಸಿದ ಪಾಠವಲ್ಲವೇ ಅನ್ನಿಸಿತು ನನಗೆ.

–ಈಶ

ಕನ್ನಡ ತಂತ್ರಾಂಶ ಮತ್ತು ತೇಜಸ್ವಿ

ಕಂಪ್ಯೂಟರನ್ನು ಕನ್ನಡ ಅಭಿವೃದ್ಧಿಗಾಗಿ ಹೇಗೆ ದುಡಿಸಿಕೊಳ್ಳಬಹುದೆಂದು ತೇಜಸ್ವಿ ಬಹಳ ತಲೆ ಕೆಡಿಸಿಕೊಂಡಿದ್ರು. ನನ್ನ ಜೊತೆ ಬಹಳ ಸಲ ಆ ಬಗ್ಗೆ ಚರ್ಚೆ ಮಾಡಿದ್ರು. ಕನ್ನಡದಲ್ಲಿ ಬೇರೆಬೇರೆ ತಂತ್ರಾಂಶಗಳಿದ್ದು ಒಂದರಲ್ಲಿ ತಯಾರಿಸಿದ ಫೈಲುಗಳನ್ನು ಮತ್ತೊಂದರಲ್ಲಿ ಬಳಸಲು ಸಾಧ್ಯವಿಲ್ಲ. ಈ ಸಮಸ್ಯೆ ಬಗೆಹರಿಸುವುದಕ್ಕೂ ಆತ ಬಹಳ ಚಿಂತಿಸಿದ್ರು. ನಾವಿಬ್ಬರೂ ಸೇರಿ ಆ ನಿಟ್ಟಿನಲ್ಲಿ ಬಹಳ ಪ್ರಯತ್ನ ಮಾಡಿದ್ರೂ ಅದು ಗಣನೀಯವಾದ ಪ್ರಗತಿ ಕಾಣಲೇ ಇಲ್ಲ.

ಕರ್ನಾಟಕ ಗಣಕ ಪರಿಷತ್ತು ತಾನೇ ಕನ್ನಡ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ತಾನೇ ಪ್ರಮಾಣೀಕರಿಸುತ್ತಿತ್ತು. ನಾನು ಮತ್ತು ತೇಜಸ್ವಿ ಸೇರಿ ತಂತ್ರಾಂಶ ರೂಪಿಸೋರೂ ನೀವೇ, ಅದನ್ನು ಪ್ರಮಾಣೀಕರಿಸೋರೂ ನೀವೆ ಅಂದ್ರೆ ಸರಿಹೋಗೊಲ್ಲ. ಕನ್ನಡ ತಂತ್ರಾಂಶವನ್ನು ಬಳಸುವ ಎಲ್ಲ ವರ್ಗದ-ವಕೀಲರು, ಉಪನ್ಯಾಸಕರು, ಸಾಹಿತಿಗಳು, ಬರಹಗಾರರು ಮುಂತಾದವರು ಜನರ ಪ್ರತಿನಿಧಿಗಳನ್ನೊಳಗೊಂಡ ಸಮಿತಿ ರಚನೆ ಮಾಡಿ ಆ ಸಮಿತಿ ತಂತ್ರಾಂಶವನ್ನು ಪ್ರಮಾಣೀಕರಿಸಲಿ ಎಂದು ಸರ್ಕಾರವನ್ನು ಒತ್ತಾಯಿಸಿದ್ದೆವು.



ಕನ್ನಡ ತಂತ್ರಾಂಶ ಅಭಿವೃದ್ಧಿಗೆ ಎರಡು ಅಡೆತಡೆಗಳಿದ್ದವು. ಒಂದನೆಯದು, ಕನ್ನಡ ತಂತ್ರಾಂಶ ಅಭಿವೃದ್ಧಿ ಪಡಿಸುವ ಸಾಫ್ಟ್‌ವೇರ್ ಇಂಜಿನಿಯರುಗಳಿಗೆ ಶೇ. 5 ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು. ಆದರೆ ಅದೇ ವೇಳೆಯಲ್ಲಿ ಇನ್ಫೋಸಿಸ್, ವಿಪ್ರೋದಂತಹ ದೈತ್ಯ ಕಂಪೆನಿಗಳಿಗೆ ಇದು ಅನ್ವಯವಾಗುತ್ತಿರಲಿಲ್ಲ. ಕನ್ನಡಕ್ಕೆ ಯಾಕೆ ಈ ತೆರಿಗೆ ಅಂತ ತೇಜಸ್ವಿ ನಾನು ಹೋಗಿ ಅಂದಿನ ಮಂತ್ರಿ ಸಿದ್ದರಾಮಯ್ಯನವರನ್ನು ಕೇಳಿದೆವು. ಅದನ್ನು ಅರ್ಥ ಮಾಡಿಕೊಂಡ ಸಿದ್ದರಾಮಯ್ಯನವರು ಆ ತೆರಿಗೆಯನ್ನು ರದ್ದುಗೊಳಿಸಿದರು. ಇನ್ನು ಎರಡನೇ ತೊಡಕೆಂದರೆ, ಕನ್ನಡ ತಂತ್ರಾಂಶ ಅಭಿವೃದ್ಧಿಯ ಕೆಲಸವನ್ನು ಅಧಿಕಾರಿಗಳು ಕಂಪೆನಿಗಳಿಗೆ ಕೊಡಬೇಕು. ಪಾರದರ್ಶಕ ಕಾಯಿದೆ ಪ್ರಕಾರ 25 ಲಕ್ಷ ರೂಪಾಯಿಗಳಿಗಿಂತ ಕಡಿಮೆ ವ್ಯವಹಾರ ವಿರುವ ಯಾವ ಕಂಪೆನಿಗೂ ಈ ತಂತ್ರಾಂಶ ಅಭಿವೃದ್ಧಿಯ ಕೆಲಸವನ್ನು ಕೊಡಲಾಗುವುದಿಲ್ಲ. ಈ ವಿಚಾರವಾಗಿ ಸರ್ಕಾರದೊಂದಿಗೆ ವ್ಯವಹರಿಸಬೇಕೆಂದರೆ ಒಂದು ಕಂಪೆನಿಗೆ ಕನಿಷ್ಠ 25 ಲಕ್ಷ ರೂಪಾಯಿಗಳ ವ್ಯವಹಾರ ಇರಬೇಕು. ಕನ್ನಡ ತಂತ್ರಾಂಶ ಅಭಿವೃದ್ಧಿಗಾಗಿ ,ಕೆಲಸ ಮಾಡುವ ಸುಮಾರು 27 ಕಂಪೆನಿಗಳು ಕರ್ನಾಟಕದಲ್ಲಿದ್ದವು. ಆದರೆ ಅವೆಲ್ಲ ಚಿಕ್ಕ ಬಂಡವಾಳವಿರುವ ಕಂಪೆನಿಗಳು. ಸರ್ಕಾರದ ಈ ನೀತಿಯಿಂದಾಗಿ ಕೇವಲ 2 ಕಂಪೆನಿಗಳು ಮಾತ್ರ ಉಳಿದುಕೊಂಡು ಉಳಿದವುಗಳೆಲ್ಲ ಬೇರೆಬೇರೆ ರಾಜ್ಯಗಳಿಗೆ ಹೊರಟುಹೋದದ್ದು. ಇಲ್ಲದೇ ಕನ್ನಡ ತಂತ್ರಾಂಶ ಅಭಿವೃದ್ಧಿಯನ್ನು ನಿಲ್ಲಿಸಿದದ್ದು.

ಇದಾದ ಮೇಲೆ ಕನ್ನಡ ತಂತ್ರಾಂಶ ಅಭಿವೃದ್ಧಿಯನ್ನು ಬೇರೆ ರಾಜ್ಯದ ಕಂಪೆನಿಗಳಿಗೆ ವಹಿಸಿಕೊಡಲಾಯಿತು. ಆದರೆ ಅಲ್ಲಿರುವವರು ಯಾರೂ ಕನ್ನಡ ಪಂಡಿತರಲ್ಲ, ಅವರಿಗೆ ಕನ್ನಡವೇ ಬರೋಲ್ಲ, ಅಂತಹವರಿಗೆ ಕನ್ನಡ ತಂತ್ರಾಂಶ ಅಭಿವೃದ್ಧಿಯನ್ನು ವಹಿಸಿಕೊಡಲಾಗಿದೆ. ಅವರ ಕನ್ನಡ ಹೇಗಿರುತ್ತೆ ಅಂದ್ರೆ, ಒಂಥರಾ ಬಿಲ್‌ಗೇಟ್ಸ್ ಕಲಿಸುತ್ತಿರುವ ಕನ್ನಡದಂತಿರುತ್ತದೆ. ಅರ್ಧ ಇಂಗ್ಲಿಷ್ ಪದಗಳೇ ಇರುತ್ತವೆ. 'ಲೆಫ್ಟ್‌ಗೆ ಟರ್ನ್ ಮಾಡಿ ಮತ್ತೆ ರೈಟ್‌ಗೆ ಟರ್ನ್ ಮಾಡಿ ಸ್ಟ್ರೇಟ್ ಹೋಗಿ' ಎಂಬಂತಹ ಕನ್ನಡ ಅದು. ಕಂಪ್ಯೂಟರ್‌ನಲ್ಲಿಯೂ ಕೂಡ, "ಮೌಸ್ ಬಟನ್ ಒತ್ತಿದರೆ ಸೂಚನೆಗಳು ತೆರೆದುಕೊಳ್ಳುತ್ತವೆ" ಎಂಬಂತಹ ಕನ್ನಡ ಬಳಸಲಾಗುತ್ತಿದೆ. ಇದನ್ನು ಸರ್ಕಾರಕ್ಕೆ ವಿವರಿಸಿ ವಿವರಿಸಿ ಸಾಕಾಗಿಹೋಯ್ತು. ಅದು ಅವರ್‍ಯಾರಿಗೂ ಅರ್ಥವೇ ಆಗಲಿಲ್ಲ. ಅಥವಾ ಅರ್ಥ ಮಾಡಿಕೊಳ್ಳಲು ತಲೆಕೆಡಿಸಿಕೊಳ್ಳಲಿಲ್ಲ. ಈಗಿರುವ ಸಮ್ಮಿಶ್ರ ಸರ್ಕಾರ ಒಂದಿಷ್ಟು ಕಾಳಜಿ ತೋರಿಸುವಂತೆ ಕಾಣುತ್ತಿದೆ.

ಇತ್ತೀಚೆಗೆ ಕನ್ನಡ ವಿವಿಯಲ್ಲಿ ಕುವೆಂಪು ತಂತ್ರಾಂಶ ಬಿಡುಗಡೆ ಮಾಡಲಾಯಿತು. ಅದನ್ನು ತೇಜಸ್ವಿಯ ಇಬ್ಬರು ಶಿಷ್ಯರೇ ಅಭಿವೃದ್ಧಿಪಡಿಸಿದ್ದಾರೆ. ಆದರೆ ನಾವು ಏನೇ ಮಾಡಿದ್ರೂ ಸರ್ಕಾರವೇ ಕೊಳ್ಳಬೇಕು. ಸರ್ಕಾರವೇ ದೊಡ್ಡ ಗಿರಾಕಿ. ಸರ್ಕಾರವೇ ಮನಸ್ಸು ಮಾಡಬೇಕು. ಆಗ ಮಾತ್ರವೇ ಕನ್ನಡ ತಂತ್ರಾಂಶದ ಪರಿಣಾಮಕಾರಿ ಅಭಿವೃದ್ಧಿ ಸಾಧ್ಯ. ಏನೆಲ್ಲಾ ಪ್ರಯತ್ನ ಮಾಡಿದ್ರೂ ತಮ್ಮ ಕನಸು ನನಸಾಗುವ ಮೊದಲೇ ತೇಜಸ್ವಿ ಹೊರಟೋದ್ರು.

–ಚಂದ್ರಶೇಖರ್ ಕಂಬಾರ್

ಹೊರಟೋಯ್ತಿನಿ" ಎಂದು ತೇಜಸ್ವಿ ಹೆದರಿಸಿದರು. ಕಾಡಿನ ಜೀವನಕ್ಕೆ ಒಗ್ಗಿಕೊಂಡ ಅವರಿಗೆ ಈ ಮನುಷ್ಯರ ಸಭೆಗಳು, ಸ್ವಾಗತ, ಪ್ರಾರ್ಥನೆ, ವಂದನಾರ್ಪಣೆ, ಸಮಾರೋಪ ಇವೆಲ್ಲಾ ಬಿದ್ದುಬಿದ್ದು ನಗುವಂತಹ ತಮಾಷೆಗಳಾಗಿದ್ದವು.

ಸಂದರ್ಶನ

ಪತ್ರಿಕೆ ನಾಲ್ಕು ಪುಟ ಜಾಸ್ತಿ ಮಾಡಿ ಅದನ್ನು ತುಂಬಿಸಲು ನಾಡಿನ ಖ್ಯಾತ ಸಾಹಿತಿಗಳ ಸಂದರ್ಶನ ಆರಂಭಿಸಿತು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇದೂ ಒಂದು ದಾಖಲೆ. ಲಂಕೇಶರು ನನಗೆ ತೇಜಸ್ವಿ ಸಂದರ್ಶನ ಮಾಡು ಎಂದು ಆಜ್ಞಾಪಿಸಿದರು. ಕೇವಲ ಓದುಗನಾಗಿದ್ದ ನಾನು ತೇಜಸ್ವಿಯಂತಹ ದೊಡ್ಡ ಲೇಖಕರ ಸಂದರ್ಶನ ಮಾಡುವುದೇಗೆಂದು ಹೆದರಿ ಸುಮ್ಮನಿದ್ದೆ. ಫೋನ್ ಮಾಡಿದ ಲಂಕೇಶ್ "ಅಲ್ಲಯ್ಯ, ಅವರಿಗೊಂದಿಷ್ಟು ಪ್ರಶ್ನೆ ಕೇಳಿ ಅವರೇಳಿದ್ದ ಕೇಳಿಸಿಕೊಂಡು ಬರಕಂಡು ಬರಕ್ಕಾಗಲವೆ ನಿನಗೆ?" ಎಂದು ಗದರಿದರು. ನಾನು ಧೈರ್ಯ ಮಾಡಿ ತೇಜಸ್ವಿ ಹೇಳುವುದನ್ನು ಬರೆದುಕೊಳ್ಳುವುದಕ್ಕಿಂತ ರೆಕಾರ್ಡ್ ಮಾಡಿಕೊಂಡು ಆನಂತರ ಅದನ್ನು ಬರೆದು ಒಪ್ಪಿಸಿದರೆ ಹೇಗೆಂದು ಯೋಚಿಸಿ ಗೆಳೆಯ ನಾಗರಾಜ ಶೆಟ್ಟಿಯೊಡನೆ ಹೋಗಿ ಚಿಕ್ಕಮಗಳೂರಿಂದ ಫೋನ್ ಮಾಡಿದೆ.

"ಏನೋ ಶನಿ, ಏನಾಗಬೇಕೋ?" ಎಂದರು.

"ನಿಮ್ಮ ಸಂದರ್ಶನ ಮಾಡಬೇಕಂತೆ ಸಾರ್."

"ಯಾರೇಳಿದ್ರು?"

"ಮೇಷ್ಟ್ರು ಹೇಳಿ ಕಳಿಸ್ಯವ್ರೆ ಸಾರ್. ಅದ್ಕೆ ಬತ್ತಾಯಿದ್ದಿನಿ."

"ಅಲ್ರೋ ನಮ್ಮ ಪತ್ರಿಕೆಲಿ ನಮ್ಮ ನಮ್ಮದೇ ಸಂದರ್ಶನ ಹಾಕ್ಕಳದೇನೊ. ಇನ್ನಾರು ಸಿಗಲಿಲ್ವೆ ನಿನಿಗೆ."

"ಮೇಷ್ರೇಳಿ ಒಂತಿಂಗ್ಳಾಯ್ತು ಸಾರ್. ಸಂದರ್ಶನ ಮಾಡದಿದ್ರೆ ಬೈತರೆ."

"ಪುನಃ ಅದ್ನೆ ಹೇಳ್ತಿಯಲ್ಲಯ್ಯ. ನಿಮಗೇನು ಬುದ್ಧಿ ಭಾಷೆ ಇದೆಯಾ. ಬಾ ಇಲ್ಲಿ ನಿನಗೆ ಕಾಲು ಮುರಿತಿನಿ."

"ಆಯ್ತು ಸಾರ್ ಬತ್ತಿನಿ."

"ಇಲ್ಲಿಗೆ ಊಟಕ್ಕೆ ಬತ್ತಿಯಾ?"

"ನನ್ನ ಜೊತೆ ಇನ್ನೊಬ್ಬರವ್ರೆ."

"ಶನಿಗಳು ನೀವು, ಕರಕೊಂಡು ಬಾ" ಎಂದರು.

ಸಂಭ್ರಮ ಮತ್ತು ಸಂತೋಷದಿಂದ ಹೋದೆವು. ಅವತ್ತು ತೇಜಸ್ವಿ ತುಂಬ ಖುಷಿಯ ಮೂಡಿನಲ್ಲಿದ್ದರು. ರಾಜೇಶ್ವರಿಯಕ್ಕ ನಮಗೆ ಮೊಟ್ಟೆಸಾರಿನ ಊಟ ಹಾಕುವಾಗ ನಾನು ಪತ್ರಿಕೆ ವಿಷಯ ಹೇಳುತ್ತಿರಬೇಕಾದರೆ "ಹುಚ್ಚಾಸ್ಪತ್ರೆಯ ಎಕ್ಸ್‌ಟೆನ್‌ಷನ್ ಕಣೋ ಲಂಕೇಶ್ ಪತ್ರಿಕೆ" ಎಂದು ಬಿದ್ದುಬಿದ್ದು ನಕ್ಕರು. ನಂತರ ನಾನು ರೆಡಿ ಮಾಡಿಕೊಂಡೋಗಿದ್ದ ಪ್ರಶ್ನೆ ಶುರು ಮಾಡಿ ಟೇಪ್‌ರೆಕಾರ್ಡ್‌ರನ್ನು ಆನ್ ಮಾಡಿದೆ. ಮೊದಲ ಪ್ರಶ್ನೆಗೆ ಉತ್ತರಿಸಿದ ಅವರು ರಿವೈಂಡ್ ಮಾಡಿ ಪುನಃ ಹಾಕಿಸಿದರು. ಹೊರಗಡೆ ಮಳೆಯಿದ್ದ ಕಾರಣ ಟೇಪಿನಲ್ಲಿ ಮಳೆ ಶಬ್ದದ ಹೊರತು ತೇಜಸ್ವಿ ದನಿ ಕೇಳಲಿಲ್ಲ.

"ಶನಿ ಮುಂಡೆ ಗಂಡ ನೀನು, ಟೇಪ್ ರೆಕಾರ್ಡ್ ಗೊತ್ತಿಲ್ಲ. ಅದಕ್ಕೆ ಮೈಕ್ ಇದೆ. ಅದನ್ನು ತಂದಿಲ್ಲ. ಹೋಗ್ಲಿ ನಿನ್ನ ಪ್ರಶ್ನೆ ಕೊಡು. ನಾನು ಉತ್ತರ ಬರೆದು ಕಳುಸ್ತೀನಿ" ಎಂದು ಪ್ರಶ್ನೆಗಳನ್ನು ಈಸಿಕೊಂಡರು. ನನಗೆ ಸಮಾಧಾನವಾಯ್ತು.

ಇದಾದ ನಂತರದ ಹಲವು ದಿನಗಳ ಮೇಲೆ ನನಗೆ ಚೆನ್ನಾಗಿ ಇಂಗ್ಲಿಷ್ ಬರುತ್ತದೆಂದು ತಿಳಿದಿದ್ದ ಅವರು "ಒಂದಿಷ್ಟು ಟ್ರಾನ್ಸ್‌ಲೇಷನ್ ವರ್ಕಿದೆ, ಮಾಡಿ ಕೊಡ್ತಿಯೇನೋ" ಎಂದರು. ಪಿಯುಸಿಯಲ್ಲಿ ನನಗೆ ಇಂಗ್ಲಿಷ್‌ನಲ್ಲಿ ಕೇವಲ ಒಂಭತ್ತು ಮಾರ್ಕ್ಸ್ ಬಂದು ಕಾಲೇಜನ್ನೇ ಬಿಟ್ಟ ಸಂಗತಿ ಯಾರಿಗೂ ಗೊತ್ತಿರಲಿಲ್ಲವಾದ್ದರಿಂದ "ನನಗೆ ಬಿಡುವಿಲ್ಲ ಸಾರ್" ಎಂದೆ. "ನೀನೆಷ್ಟು ಬಿಜಿ ಅಂತ ನನಗೂ ಗೊತ್ತು, ಮಾಡಿ ಕೊಡಲೇ" ಎಂದರು. ನಾನು ನಗುತ್ತಲೇ ನಿರಾಕರಿಸಿ, ತಪ್ಪಿಸಿಕೊಂಡೆ.

ತೇಜಸ್ವಿಯವರ ಸಂದರ್ಶನ ಆ ವರ್ಷದ ದೀಪಾವಳಿಯ ವಿಶೇಷಾಂಕದಲ್ಲಿ ಪ್ರಕಟವಾಯ್ತು. ಅದನ್ನೋದಿದ ಅವರು ಕೆಂಡಾಮಂಡಲವಾದರು. ಏಕೆಂದರೆ ಅಡಿಗರ ಬಗ್ಗೆ ಅವರು ಹೇಳಿದ್ದ ಮಾತು ಬಿಟ್ಟುಹೋಗಿತ್ತು. ಅಲ್ಲದೆ ಅವರು ಬರೆದುಕೊಟ್ಟಿದ್ದನ್ನು ನಾನು ನನ್ನ ಭಾಷೆಯಲ್ಲಿ ಬರೆದಿದ್ದೆ. "ಅಲ್ಲೋ, ನಿನ್ನ ಕಟ್ಟೆಪುರಾಣ ಭಾಷೆಲಿ ಬರೆದಿದ್ದಿಯಲ್ಲಾ, ಹಲ್ಕ ನೀನು, ಇನ್ನೊಂದು ಸತಿ ಬಾಯಿಲ್ಲಿ" ಎಂದು ಬೈದಿದ್ದರು.

"ಸಾರ್ ನಾನು ಯಥಾವತ್ ಬರಿಯೋನಿದ್ದೆ. ಆದ್ರೆ ದಿವಾಕರ ಹೆಗಡೆ ನಿನ್ನ ಭಾಷೆಲಿ ದಾಖಲಿಸು ಅಂದ" ಎಂದೆ.


"ಅವ್ನಿಗೆ ಅಂಗಡಿಲಿ ಯವ್ವಾರಿಲ್ಲ, ನಿನಗೆ ಒಂದಿಷ್ಟೂ ಜವಾಬ್ದಾರಿಯಿಲ್ಲ. ಇನ್ನಿಕಡೆ ಸುಳಿಬೇಡ ನೀನು."

"ಸಾರ್ ಸಂದರ್ಶನ ಮೆಚ್ಚಿಕೊಂಡು ತುಂಬ ಲೆಟ್ರು ಬಂದವೆ."

"ನೀನೆ ಬರದು ಹಾಕಿರ್ತಿಯೇನೊ ದರಿದ್ರ" ಎಂದು ಬೈದರು.

ಈ ಘಟನೆ ನಂತರ ತೀರ್ಥಹಳ್ಳಿ ಐಬಿಯಲ್ಲಿ ಸಿಕ್ಕ ತೇಜಸ್ವಿ ಆಗಲೂ ಬೈದರು. ಆಗ ಅಲ್ಲೇ ಇದ್ದ ಹೆಗಡೆ ಕಡೆ ಕೈ ತೋರಿದೆ. "ಅಲ್ರೋ ನೀನು ಅಂಗಡಿ ಬಾಗಲಾಯ್ತಂದು ಬರಿಯೋದ್ನು ಬಿಟ್ಟು ತಪ್ಪುಸ್ತಾಯಿದ್ದಿಯಲ್ಲ, ನಿಮಗೆಲ್ಲಾ ಏನಾಗಿದೆ?" ಎಂದು ಬೈದರು. ಹೆಗಡೆ ಸಮುಜಾಯಿಷಿ ನೀಡಿ ತೇಜಸ್ವಿ ಬಾಯಿ ಬಂದ್ ಮಾಡಿದ. ಏಕೆಂದರೆ ಹೆಗಡೆ ಗಂಟಲಿಗೆ ಆ ಶಕ್ತಿಯಿತ್ತು. ●

ವಿಸ್ಮಯ ವೈರುಧ್ಯ



ಕನ್ನಡದ ಸಮಕಾಲೀನ ಸಾಂಸ್ಕೃತಿಕ ಸಂದರ್ಭದಲ್ಲಿ ನಾವು ಯಾವ ಒಬ್ಬ ಲೇಖಕರ ಸಾಧನೆ ಕುರಿತು ಯೋಚಿಸುವಾಗ ಎರಡು ಮುಖ್ಯ ಮಾನದಂಡಗಳು ಅಗತ್ಯ ಎನಿಸುತ್ತವೆ.

ಒಂದು, ಲೇಖಕನಾದೊಬ್ಬ ತನ್ನ ಸುತ್ತಲಿನ, ತಾನು ಕಂಡ, ಕೇಳಿದ ಬದುಕನ್ನು ಎಷ್ಟು ಸೃಜನಶೀಲವಾಗಿ, ಮಾನವೀಯವಾಗಿ ದಾಖಲಿಸಿದ ಎಂಬುದು. ನಮ್ಮ ಬಹುಪಾಲು ಬರಹಗಾರರು ಸಮಾಜವಾದಿ ಚಿಂತನೆ, ಹೋರಾಟ ಹಾಗೂ ರಾಜಕೀಯವನ್ನು ತಮ್ಮ ಚಟುವಟಿಕೆಯ ಭಾಗ ಮಾಡಿಕೊಂಡಿದ್ದರಾದ್ದರಿಂದ ನಾವು ಪರಿಶೀಲಿಸಬೇಕಾದ ಇನ್ನೊಂದು ಅಂಶವೂ ಇದೆ. ಅದು, ಇವರೆಲ್ಲಾ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಬಲಪಡಿಸಲು, ಪ್ರಜಾಸತ್ತಾತ್ಮಕ ಆಶಯಗಳಿಗೆ ಶಕ್ತಿ ತುಂಬಲು ಎಷ್ಟು ಶ್ರಮಿಸಿದರೆಂಬುದು.

ನಮ್ಮ ಬಹುಪಾಲು ಬುದ್ಧಿಜೀವಿಗಳು, ಪ್ರಜಾಪ್ರಭುತ್ವವನ್ನು ಬಲಪಡಿಸುವುದೆಂದರೆ ಸರ್ಕಾರದೊಂದಿಗೇ ಸೇರಿಕೊಂಡು ವ್ಯವಹರಿಸುವುದು ಎಂದುಕೊಂಡಿದ್ದಾರೆ. ಆದರೆ ಡೆಮಾಕ್ರಟಿಕ್ ಎಂಬ ಮುಖವಾಡ ತೊಟ್ಟುಕೊಳ್ಳುವ ಆದರೆ ಪೂರ್ತಿ ಡೆಮಾಕ್ರಟಿಕ್ ಅಲ್ಲದ ವ್ಯವಸ್ಥೆಗೆ ಪ್ರಜಾಪ್ರಭುತ್ವದ ನಾನಾ ಮೌಲ್ಯ ಹಾಗೂ ಪಾಠಗಳನ್ನು ನಾವು ಕಲಿಸುತ್ತಾ ಹೋಗಬೇಕಿದೆ. ಅದಕ್ಕೆ ಸರ್ಕಾರಗಳಿಂದ ದೂರವಿದ್ದು ಅದರ ವಿರುದ್ಧ ಜನರನ್ನು ಎಚ್ಚರಿಸುವ ಕೆಲಸ ನಿರಂತರವಾಗಿ ನಡೆಯುತ್ತಲೇ ಹೋಗಬೇಕು.

ಪ್ರಜಾಪ್ರಭುತ್ವ ಬಲಗೊಳ್ಳುವುದು ಜನರ ಕಣ್ಗಾವಲಿನಲ್ಲೇ ತಾನೆ?

ಕನ್ನಡ ಸಾಂಸ್ಕೃತಿಕ ಜಗತ್ತಿನ ನಾಲ್ಕು ನಕ್ಷತ್ರಗಳೆಂದೇ ಹೆಸರಾಗಿರುವ ಅನಂತಮೂರ್ತಿ, ಲಂಕೇಶ್, ಡಿ.ಆರ್. ನಾಗರಾಜ್, ತೇಜಸ್ವಿಯವರ ಪೈಕಿ ಟೀಕೆ, ವಿಮರ್ಶೆಗಳಿಗೆ ಹೆಚ್ಚು ಸಿಗದೆ ಹೋದವರೆಂದರೆ ತೇಜಸ್ವಿ ಮಾತ್ರ. ಅದಕ್ಕೆ ತೇಜಸ್ವಿಯವರ ಜೀವನ ಕ್ರಮ, ಅವರು ಮಲೆನಾಡಿನೊಳಗೇ ಇರುತ್ತಾ ಮೊಗೆಮೊಗೆದು ಕೊಟ್ಟ ಕತೆ, ಕಾದಂಬರಿಗಳು, ವಿಜ್ಞಾನ-ಪರಿಸರದ ವಿಸ್ಮಯಗಳೇ ಕಾರಣವಾಗಿದ್ದವು. ಕರ್ವಾಲೋ ಬಂದಾಗ ನಿಬ್ಬೆರಗಾಗಿ 'ಆ್ಹಂ' ಎಂದು ಬಾಯಿತೆರೆದ ಕನ್ನಡ ಓದುಗ-ವಿಮರ್ಶಕಾರಾದಿಯಾಗಿ ಎಲ್ಲರೂ ಆದಾಗಿ ನಾಲ್ಕು ದಶಕಗಳ ನಂತರ ತೇಜಸ್ವಿ ಜೀವ ತೊರೆಯುವವರೆಗೂ ತಮ್ಮ ನಿಬ್ಬೆರಗಾಗಿದ್ದ ಬಾಯನ್ನು ತೆರೆದುಕೊಂಡೇ ಇದ್ದರು.

"ನೀವೆಲ್ಲಾ ಮುಟ್ಟು ಒಬ್ಬಟ್ಟುಗಳ ಬಗ್ಗೇನೇ ಬರೆದುಕೊಂಡಿರಿ, ನಾನು ಅನುಭವಗಳನ್ನು ಹುಡುಕಿಕೊಂಡು ಹೊರಟೆ' ಎಂದು ಮೈಸೂರಿನಿಂದ ಅವತ್ತು ನಿರ್ಗಮಿಸಿದ ತೇಜಸ್ವಿ ಹಾಗೆ ಮಾಡುವ ಮೂಲಕ ತಮ್ಮನ್ನು ತಾನೇ ಕಾಪಾಡಿಕೊಂಡರಲ್ಲದೆ ಕನ್ನಡ ಸಾಹಿತ್ಯವನ್ನು ಅದರ ಏಕತಾನತೆಯಿಂದ ಬಚಾವು ಮಾಡಿದರು. ಹಾಗೆ ಬದುಕುತ್ತಾ ಬರೆಯುತ್ತಲೇ ತೇಜಸ್ವಿ ಕನ್ನಡ ಸಮುದಾಯದ ಸಾಂಸ್ಕೃತಿಕ ಪ್ರಜ್ಞೆಗೆ ಇನ್ನೊಂದಿಷ್ಟು ವಿವೇಕ, ಮನುಷ್ಯತ್ವ ಜ್ಞಾನ ತುಂಬಿದರು. ಅವರ ಜೊತೆಗೇ ಅನಂತಮೂರ್ತಿ ದೇಶ-ವಿದೇಶ ಸುತ್ತುತ್ತಾ ಕತೆ-ಪದ್ಯ ವಿಮರ್ಶೆ ಬರೆಯುತ್ತಾ ಬಂದರೆ ಲಂಕೇಶ್ ಇದ್ದಲ್ಲಿಂದಲೇ ಎಷ್ಟೋ ವಿಚಾರ, ಸಾಹಿತ್ಯ ಸಿನಿಮಾ, ದೇಶಗಳ ಆಗುಹೋಗುಗಳ ಬಗ್ಗೆ ತಮ್ಮ ಓದುಗರೊಂದಿಗೆ ಪಿಕ್‌ನಿಕ್‌ಗೆ ಹೋಗಿಬರುವಂತೆ ಕರೆದೊಯ್ದು ತಿಳಿ ಹೇಳುತ್ತಿದ್ದರು. ಮತ್ತೊಂದೆಡೆ ಡಿ.ಆರ್. ನಾಗರಾಜ್ ನಾವು ಕಂಡುಕೇಳರಿಯದ ಜಗತ್ತಿನ ಎಷ್ಟೋ ದಾರ್ಶನಿಕರ, ಚಿಂತಕರ ಬಗ್ಗೆ ಎಲ್ಲಾ ಮಾತಾಡುತ್ತಾ ನಮ್ಮ



ಬೌದ್ಧಿಕ ಹಸಿವನ್ನು ಹೆಚ್ಚಿಸುತ್ತಾ ಹೋದರು. ಈ ಜಗತ್ತಿನ ಮಹಾ ಮಹಿಮರೆಲ್ಲಾ ತಮ್ಮ ತಮ್ಮ ಪುಸ್ತಕ ಕೈಲಿಡಿದು ಡಿ.ಆರ್. ಮನೆ ಮುಂದೆ ಕ್ಯೂ ನಿಂತು 'ನಮ್ಮ ಪುಸ್ತಕ ಓದಿ ಹೇಳಿ' ಎಂದು ಕೊಟ್ಟು ಹೋಗುತ್ತಿದ್ದರೇನೊ ಎಂಬಂತಿತ್ತು ಡಿ.ಆರ್.ರ ಬೌದ್ಧಿಕ ಸಾಹಸ, ಓದಿನ ವೇಗ ಹಾಗೂ ಮಾತಿನ ಧಾಟಿ.

ಒಟ್ಟಾರೆಯಾಗಿ ಇವೆಲ್ಲವೂ ಆಧುನಿಕ ಕನ್ನಡಿಗನ ಸಮಷ್ಟಿ ಪ್ರಜ್ಞೆಯನ್ನು ಪೊರೆದು ಬೆಳೆಸಿದ ಅಂಶಗಳು. ತೇಜಸ್ವಿ ತಮ್ಮನಂತೆ ಇದನ್ನು ಸಾಧಿಸಿದ ದೊಡ್ಡ ವ್ಯಕ್ತಿ, ದೊಡ್ಡ ಲೇಖಕ.


ಕನ್ನಡ ಸಾಂಸ್ಕೃತಿಕ ಜಗತ್ತಿನ ವೈರುಧ್ಯ ಏನೆಂದರೆ ನಮ್ಮಲ್ಲಿಯ ಮಹಾನ್ ಪ್ರತಿಭಾವಂತ ಸೃಜನಶೀಲ ಲೇಖಕರೆಲ್ಲರನ್ನು ಅಷ್ಟೇ ದೊಡ್ಡ ಚಿಂತಕರೆಂದೂ ಭಾವಿಸಿಬಿಡುವುದು. ತೇಜಸ್ವಿಯವರಿಗೂ ಆ ಕೀರ್ತಿ ಅಂಟಿಕೊಂಡಿತ್ತು. ಸಮಾಜ, ಜನಜೀವನ, ರಾಜಕೀಯವೆಂದರೆ ಆಗಾಗ್ಗೆ ಒಂದು ಹೇಳಿಕೆ ನೀಡುವುದು ಎಂದೇ ನಮ್ಮ ಸಮಾಜವಾದಿ ಬುದ್ಧಿಜೀವಿಗಳು ನಂಬಿಕೊಂಡಿದ್ದ ಕಾಲ ಅದು. ಯಾವ ವಿಚಾರ ಅಥವಾ ವಿವಾದದ ಆಳಕ್ಕಿಳಿಯದೆ ಸೂಪರ್‌ಫಿಷಿಯಲ್ಲಾದ ಅನಿಸಿಕೆಗಳನ್ನು ಹೇಳುತ್ತಿದ್ದಾರಾದ್ದರಿಂದ ಯಾವುದೂ ಮುಂದಕ್ಕೆ ಹೋಗದೆ ನಿಂತಲ್ಲೇ ನಿಲ್ಲುವಂತಿರುತ್ತಿತ್ತು.

ತೇಜಸ್ವಿ ಕೂಡ ಇದಕ್ಕೆ ಹೊರತಾಗಿರಲಿಲ್ಲ.

2000 ನೇ ಇಸವಿಯಲ್ಲಿ ತೇಜಸ್ವಿ ತರಂಗ ವಾರಪತ್ರಿಕೆಯಲ್ಲಿ 'ಸ್ವತಂತ್ರ ಭಾರತ ಅಂತರಂಗದ ಅವಲೋಕನ' ಎಂಬ ದೀರ್ಘ ಲೇಖನವೊಂದನ್ನು ಬರೆದಿದ್ದರು. ಅದರಲ್ಲಿ ಈ ಜಗತ್ತಿನ ನಾನಾ ವಿದ್ಯಮಾನಗಳನ್ನು ವಿಶ್ಲೇಷಿಸುತ್ತಾ ಹಿಂದೂವಾದದ ಬಗ್ಗೆಯೂ ಬರೆದಿದ್ದರು. ತೇಜಸ್ವಿ ಪ್ರಕಾರ ನಮ್ಮ ಸಂವಿಧಾನದಲ್ಲಿ ಡೆಮಾಕ್ರಸಿ, ಸೆಕ್ಯುಲರಿಸಂ ಹಾಗೂ ಸೋಷಿಯಲಿಸಂ ಎಂಬ ಆಶಯಗಳನ್ನು ಅಳವಡಿಸಿರುವುದರಿಂದ ಹಿಂದೂ ಕೋಮುವಾದ ಎಂಬುದು ಅದರೊಳಗೆ ನುಗ್ಗಲು ಸಾಧ್ಯವೇ ಇಲ್ಲ ಎಂಬುದಾಗಿತ್ತು. ಆದರೆ ಹಿಂದೂ ಕೋಮುವಾದವೆಂದರೆ ಕೇವಲ ಬ್ರಾಹ್ಮಣಶಾಹಿತನ ಎಂದು ನಂಬಿಕೊಂಡಿದ್ದ ತೇಜಸ್ವಿಗೆ ಅದು ಫ್ಯಾಸಿಸಂನ ಇನ್ನೊಂದು ಮುಖ, ಕಮ್ಯುನಿಸ್ಟರಾದಿಯಾಗಿ ಎಲ್ಲರೂ ಈ ಅಜೆಂಡಾ ಹೊಂದಿದ್ದಾರೆಂಬುದನ್ನು ಗ್ರಹಿಸಲಾಗಿರಲಿಲ್ಲ. ನಮ್ಮ ಸಂವಿಧಾನದಲ್ಲಿ ಏನೇನು ಬರೆಯಲಾಗಿದೆ ಎಂಬುದಷ್ಟರಿಂದಲೇ ಜನರಿಗೆ ಸರ್ಕಾರದಿಂದ ರಕ್ಷಣೆ ಸಿಗುವುದಿಲ್ಲ ಎಂಬುದನ್ನು ನಾವೀಗ ನೋಡುತ್ತಿಲ್ಲವೆ?

ತೇಜಸ್ವಿ ಅತ್ಯದ್ಭುತ ಬರಹಗಾರ. ಬಹುಶಃ ವಿಶ್ವ ಶ್ರೇಷ್ಠ ಬರಹಗಾರರಲ್ಲಿ ಒಬ್ಬರು. ಆದರೆ ಒಬ್ಬ ಬುದ್ಧಿಜೀವಿಯಾಗಿ ನಮ್ಮ ಸಂದರ್ಭದ ಯಾವ ಸಮಸ್ಯೆಗಳಿಗೂ ಅವರ ಚಿಂತನಾ ಲೆವೆಲ್‌ನಲ್ಲಿ ಪರಿಹಾರಗಳಿರಲಿಲ್ಲ ಅಥವಾ ಇದ್ದರೂ ಅವು ಒಂದೋ ಕಳಪೆ ಇಲ್ಲಾ ಅಪ್ರಸ್ತುತವಾಗಿರುತ್ತಿದ್ದವು. ತೇಜಸ್ವಿ ತಾವೇ ಲೀನವಾಗಿದ್ದ ವಿಸ್ಮಯದ ಲೋಕದೊಳಗೆ ಎಷ್ಟು ಆಳವಾಗಿ ಬಂಧಿಯಾಗಿದ್ದರೆನ್ನಲು ಅವರ ಮಿಲೇನಿಯಂ ಸೀರೀಸ್ ಪುಸ್ತಕಗಳೇ ಉದಾಹರಣೆಯಾಗಿವೆ. ಈ ಪುಸ್ತಕಗಳು ಬರುವ ಮೊದಲೇ 80ರ ದಶಕದಲ್ಲೇ ಪ್ರೊ. ಬಿ.ಎಲ್. ಶ್ರೀಧರ್ ಲಂಕೇಶ್ ಪತ್ರಿಕೆಯಲ್ಲಿ 'ಈ ಶತಮಾನ'ವೆಂಬ ಅತ್ಯದ್ಭುತ ಸರಣಿ ಲೇಖನಗಳನ್ನು ಬರೆದಿದ್ದರು. ಕಾಲೇಜು, ಮನೆಗಳೆಂಬ ಸೀಮಿತ ವಲಯದೊಳಗಿದ್ದ ನಾವೆಲ್ಲಾ ಹೊರಜಗತ್ತನ್ನು ಪರಿಚಯಿಸಿಕೊಂಡದ್ದೇ ಇಂಥ ಓದಿನ ಮೂಲಕ. ಆದಾದನಂತರ ಸ್ವತಃ ತೇಜಸ್ವಿ 'ಈ ಅದ್ಭುತ ಜಗತ್ತು' ಸೀರೀಸ್ ಬರೆದರು. ಅವರದ್ದೇ ಪರಿಸರದ ಕತೆ ಬಂತು. ಅದೇ ವೇಳೆಗೆ ಎಚ್.ಎಲ್. ನಾಗೇಗೌಡರು 'ಪ್ರವಾಸಿ ಕಂಡ ಇಂಡಿಯಾ' ಎಂಬ ಸಾವಿರಾರು ಪುಟಗಳ ಜ್ಞಾನವನ್ನೆಲ್ಲಾ ಬಸಿದು ಅನುವಾದಿಸಿ ಕೊಟ್ಟಿದ್ದರು. ಇಂಥದ್ದನ್ನೆಲ್ಲಾ ಓದಿ, ಗ್ರಹಿಸಿ ಜೀರ್ಣಿಸಿಕೊಂಡಿದ್ದ ಕನ್ನಡ ಬೌದ್ಧಿಕ ಜಗತ್ತಿಗೆ ಮಿಲೇನಿಯಂ ಸೀರೀಸ್ ಕೇವಲ ರಂಜಿಸಿತೇ ವಿನಃ ಓದುಗನ ವಿವೇಕ ಬೆಳೆಸದೇ ಹೋಯಿತೆನ್ನಿಸುತ್ತದೆ.

ಸ್ವತಃ ಕೃಷಿಕರಾಗಿದ್ದ ತೇಜಸ್ವಿ ರೈತಾಪಿಯ ಬಗ್ಗೆ ಬರೆದಾಗಲೆಲ್ಲಾ ಕಾಫಿ ಬೆಳೆಗಾರರ ಕಷ್ಟಗಳ ಬಗ್ಗೆ ಬರೆದದ್ದೇ ಹೆಚ್ಚು. ಜಾಗತೀಕರಣ ನೀತಿ ಜಾರಿಗೆ ಬಂದ ಮೇಲೆ ಕಾಫಿ ಬೆಳೆಗಾರರಿಗೂ ವಿಶ್ವ ಮಾರುಕಟ್ಟೆ ಸಿಕ್ಕು ತೇಜಸ್ವಿ ಅದನ್ನು ಸಂಭ್ರಮದಿಂದ ಸ್ವಾಗತಿಸಿ, ನಂತರ ಮಾರುಕಟ್ಟೆ ಶಕ್ತಿಗಳ ಏಟಿಗೆ ಸಿಕ್ಕು ಕಾಫಿ ಬೆಳೆಗಾರರು ದಿವಾಳಿ ಏಳತೊಡಗಿದಾಗ ತೇಜಸ್ವಿಗೆ ಅದರ ಮರ್ಮ ಅರ್ಥವಾಗಿರಲಿಲ್ಲ. ಅದೇ ಸಮಯಕ್ಕೆ ನಕ್ಸಲೀಯ ನಾಯಕ ಸಾಕೇತ್ 'ರಾಜ' ಎಂಬ ಹೆಸರಿನಲ್ಲಿ ಬರೆದಿದ್ದ **Bitter Coffee** ಪುಸ್ತಕ ನನಗೆ ಸಿಕ್ಕು ನಾನದರ ಪ್ರತಿಯೊಂದನ್ನು ತೇಜಸ್ವಿಗೆ



ಮುಂದುವರೆದ ಕಾರಂತ.....

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಾಗೂ ಕನ್ನಡ ಸಾರಸ್ವತ ಲೋಕದ ದಿಗ್ಗಜರಲ್ಲೊಬ್ಬರಾದ ಡಾ. ಶಿವರಾಮ್ ಕಾರಂತರು ಮರಣಹೊಂದುವ ಕೆಲವು ದಿನಗಳ ಮೊದಲು ತೇಜಸ್ವಿಯವರ ಮನೆಗೆ ಬಂದಿದ್ದರು. ಕೆಲವು ದಿನಗಳ ಕಾಲ ಅಲ್ಲಿಯೇ ಉಳಿದುಕೊಂಡಿದ್ದರು. ಜೊತೆಗೆ ನಾನೂ ಅಲ್ಲಿಯೇ ಇದ್ದೆ. ಕಾರಂತರು ಮಾತನಾಡ್ತಾ, "ಕನ್ನಡದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳಿಲ್ಲ, ಆ ಕೊರತೆಯನ್ನು ನೀಗಿಸಬೇಕು ಅಂತ ಬಹಳ ಪ್ರಯತ್ನಪಟ್ಟೆ. ಬೇರೆಬೇರೆ ಭಾಷೆಗಳಿಂದ ಹಲವು ಲೇಖನ, ಪ್ರಬಂಧ, ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದೆ. ಆದರೆ ಅವೆಲ್ಲವೂ ಅನುವಾದಗಳೇ ಹೊರತು ನಾನೇ ಬರೆದವುಗಳಲ್ಲ, ಆದರೆ ನೀನು ಸ್ವಂತವಾಗಿ ಕುಳಿತು ಬರೆಯುತ್ತಿದ್ದೀಯಾ. ಈ ವಿಚಾರದಲ್ಲಿ ನಾನು ಅನುವಾದಿಸಿದ್ದಕ್ಕೂ, ನೀನು ಬರೆದದಕ್ಕೂ, ತುಲನೆ ಮಾಡಲಾಗುವುದಿಲ್ಲ, ನಿನ್ನದು ಅಗಾಧ. ನಿಜಾರ್ಥದಲ್ಲಿ ನೀನು ಮುಂದುವರೆದ ಕಾರಂತ ಕಣೋ" ಎಂದು ಹೇಳಿದರು. ಇದನ್ನೆಲ್ಲಾ ಕೇಳಿದ ತೇಜಸ್ವಿ ಸಣ್ಣದಾಗಿ ಒಂದು ಕಿರುನಗೆ ಬೀರಿ ಸುಮ್ಮನಾದರು.

ಮೀನುಗಳ ಬಗ್ಗೆ ಅವರ ಜ್ಞಾನ ಎಲ್ಲೂ ದಾಖಲಾಗಲೇ ಇಲ್ಲ, ಈ ಕುರಿತ ಅವರ ಬಹಳಷ್ಟು ಜ್ಞಾನ ಅವರೊಂದಿಗೇ ಹೋಯಿತು. ಯಾವುದೇ ಒಂದು ವಿಚಾರದ ಬಗ್ಗೆ ಪ್ರೊಫೆಷನಲ್ ನಾಲೆಡ್ಜ್ ಹೊಂದ ಬೇಕೆಂಬ ಅವರ ತುಡಿತ ಮೀನು ಹಿಡಿಯುವುದರಲ್ಲೂ ವ್ಯಕ್ತವಾಗುತ್ತಿತ್ತು. ಮೀನು ಹಿಡಿಯುವುದು ಅವರ ಪಾಲಿಗೆ ಹವ್ಯಾಸಕ್ಕಿಂತ ಮಿಗಿಲಾದುದು. ತುಂಗಾ, ಭದ್ರಾ ನದಿಗಳಲ್ಲಿ ಮೀನು ಹಿಡಿದು ಅವುಗಳನ್ನು ಮತ್ತೆ ನೀರಿಗೆ ಬಿಡುತ್ತಿದ್ದರು. ಮತ್ತ ಅವುಗಳನ್ನು ಹಿಡಿಯಲು ಪ್ರಯತ್ನಿಸುತ್ತಿದ್ದರು. ಏಕೆಂದರೆ ಅವರು ಮೀನು ಹಿಡಿಯುತ್ತಿದ್ದುದು ಮಾಂಸಕ್ಕಾಗಿಯಲ್ಲ! ಮಾಂಸವನ್ನು ಬೇಕಾದರೆ ದುಡ್ಡಿಗೆ ಕೊಂಡುಕೊಳ್ಳಬಹುದು. ಮೀನು ಹಿಡಿಯುವ ಕಲೆಯನ್ನು ಕೊಂಡುಕೊಳ್ಳಲಾಗುವುದಿಲ್ಲ. ಅದನ್ನು ಮಾಡುತ್ತಲೇ ಅಭಿವೃದ್ಧಿ ಪಡಿಸಬೇಕು ಎಂದವರು ವಾದಿಸುತ್ತಿದ್ದರು. ಮೀನು ಹಿಡಿಯುವ ಕೆಲಸವೆಂದರೆ ಒಂದು ರೀತಿಯ ಧ್ಯಾನವಿದ್ದಂತೆ. ಗಂಟೆಗಟ್ಟಲೆ ದಡದಲ್ಲಿ ಏಕಾಂತವಾಗಿ ಕುಳಿತುಕೊಳ್ಳಬೇಕು. ಅವರು ದಡದಲ್ಲಿ ಕುಳಿತರೂ ಅವರ ಮನಸ್ಸು ಮಾತ್ರ ನೀರಿನ ಒಳಗಡೆ ಮೀನಿಗಾಗಿ ಹುಡುಕುತ್ತಿರುತ್ತಿತ್ತು. ಅವರಿಗೆ ಪರಿಚಯವಿದ್ದಂತಹ ನಂಜಪ್ಪ ಎಂಬ ಮೀನು ತಜ್ಞನನ್ನು ಕರೆದುಕೊಂಡು ಹೋಗಿ ತಮ್ಮ ಜ್ಞಾನ ಮತ್ತು ಅಕೆಡೆಮಿಕ್ ಜ್ಞಾನ-ಎರಡನ್ನೂ ಬೆಸೆಯುತ್ತಿದ್ದರು ತೇಜಸ್ವಿ. ಮೀನು ಹಿಡಿಯುವ ಬಗೆಗಿನ ಅವರ ಚಟುವಟಿಕೆಗಳು ಅಷ್ಟಾಗಿ ಎಲ್ಲೂ ದಾಖಲಾಗಲೇ ಇಲ್ಲ.

ನಗರಗಳಲ್ಲಿ ಓದಿ ನಗರಗಳಲ್ಲಿಯೇ settle ಆಗ ಬಯಸುವ ಹಾಗೂ ಹಳ್ಳಿಗಳ ಕಡೆಯಿಂದ ನಗರಗಳ ಕಡೆ ವಲಸೆ ಬರುವ ಟ್ರೆಂಡೇ ಜಾಸ್ತಿಯಾಗಿರುವ ಈ ದಿನಗಳಲ್ಲಿ ತೇಜಸ್ವಿ ಅಪವಾದವಾಗಿ ಕಾಣುತ್ತಾರೆ. ಹತ್ತಾರು ವರ್ಷಗಳ ಕಾಲ ಮಲೆನಾಡಿನ ಆ ದಟ್ಟ ಕಾನನದಲ್ಲಿ ಕುಳಿತು, ವಿಶ್ವದ ಬಗ್ಗೆ ಚಿಂತನೆ, ಬರವಣಿಗೆ ಮಾಡಿದ್ದು ಕಡಿಮೆ ಏನಲ್ಲ, ತಮ್ಮ ಜೀವನದ ದಿಕ್ಕು ಏನಾಗಿರಬೇಕೆಂದು ಸ್ಪಷ್ಟವಾಗಿ ತೀರ್ಮಾನಿಸಿ ಆ ಕಡೆ ಹೆಜ್ಜೆ ಹಾಕಿದರು. ಮತ್ತೆಂದೂ ತಿರುಗಿ ನೋಡಲಿಲ್ಲ, ಪ್ರಶಸ್ತಿ-ಪುರಸ್ಕಾರಗಳಿಗಾಗಿ ಹಪಹಪಿಸುವ ಸಾಹಿತಿಗಳಿರುವ ಈ ಕಾಲದಲ್ಲಿ ಅವರೆಂದೂ ಅದಕ್ಕಾಗಿ ಪ್ರಯತ್ನಿಸಲಿಲ್ಲ, ಪ್ರಶಸ್ತಿಗಳೇ ಅವರನ್ನು ಹುಡುಕಿಕೊಂಡು ಮೂಡಿಗೆರೆಗೆ ಹೋದವು.

ಅವರನ್ನು ಯಾವ ಯಾವ ಕ್ಷೇತ್ರದ ಜನ ಭೇಟಿಯಾಗುತ್ತಿದ್ದರೋ ಆಯಾ ಕ್ಷೇತ್ರಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು ತೇಜಸ್ವಿ. ನಾವು ಅವರೊಂದಿಗಿದ್ದಾಗ ವನ್ಯಜೀವಿಗಳ ಬಗ್ಗೆ ಗಂಟೆಗಟ್ಟಲೆ ಹರಟೆ ಕೊಚ್ಚುತ್ತಿದ್ದೆವು. ಒಂದು ಸಾರಿ ನನಗೆ ಬಾ ಎಂದು ಬಹಳ ಕರೆದರು. "ನಮ್ಮ ಮನೆಯ ಅಂಗಳದಲ್ಲಿಯೇ ಹಕ್ಕಿಗೂಡು ಕಟ್ಟಿದೆ. ಚಿಕ್ಕಚಿಕ್ಕ ಮರಿಗಳೂ ಇವೆ. ಇಲ್ಲೇ ನೋಡೋಣ" ಅಂತ ಬಹಳ ಪೀಡಿಸಿದರು. ಆ ಹಕ್ಕಿ ಪಕ್ಕದ ದ್ರಾಕ್ಷಿ ಬಳ್ಳಿಯಿಂದ ಹಣ್ಣು ತಿನ್ನುತ್ತಿತ್ತು, ಅಲ್ಲಿ ದ್ರಾಕ್ಷಿ ಖಾಲಿಯಾದ ಮೇಲೆ ಇವರು ಮನೆಯಲ್ಲಿರುವ ದ್ರಾಕ್ಷಿ ಅದಕ್ಕೆ ಕೊಡ್ತಾ ಇದ್ರು. ಹಕ್ಕಿಗಳ ಜೊತೆ ಅವರು ಸಂಭಾಷಣೆ ಮಾಡ್ತಿದ್ರು.

ಅವುಗಳೊಂದಿಗೆ ಅವರಿಗೆ ಅನ್ಯೋನ್ಯ ಸಂಬಂಧವೇರ್ಪಟ್ಟಿತ್ತು.

ಅವರು ವನ್ಯಜೀವಿಗಳ ಬಗ್ಗೆ ವೈಜ್ಞಾನಿಕವಾಗಿ ಮತ್ತು ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ವಿವರಿಸಬಲ್ಲವರಾಗಿದ್ದರು. ಸರಳವಾಗಿ ವಿವರಿಸುವುದರಿಂದ ಆ ವಿಚಾರ ಗೊತ್ತಿಲ್ಲದವರಿಗೆ ಕುತೂಹಲಕಾರಿಯಾಗಿ ಕಾಣಿಸುತ್ತಿತ್ತು. ಗೊತ್ತಿದ್ದವರಿಗೆ ಇಷ್ಟೊಂದು ನಿಖರವಾಗಿ ಹೇಗೆ ಹೇಳುತ್ತಿದ್ದಾರೆಂದು ಆಶ್ಚರ್ಯವಾಗುತ್ತಿತ್ತು.

ಕಳೆದ ಹತ್ತಾರು ವರ್ಷಗಳಿಂದ ಛಾಯಾಚಿತ್ರ ಕ್ಷೇತ್ರದಲ್ಲಿ ಒಂದು ರೀತಿಯ ಏಕತಾನತೆ ಮುಂದುವರೆಯುತ್ತಿದೆ. ಹೊಸತು ಎನ್ನಬಹುದಾದದ್ದು ಕಾಣಿಸುತ್ತಲೇ ಇಲ್ಲ, ಕೇವಲ **image capture** ಗೆ ಸೀಮಿತವಾಗಿ ಉಳಿದು ಹೋಗಿದೆ. ಆದರೆ ತೇಜಸ್ವಿ ಇದಕ್ಕೆ ಹೊಸ ಆಯಾಮ ಕೊಟ್ಟರು. ಉದಾಹರಣೆಗೆ ಹಕ್ಕಿಗಳೂ, ಪ್ರಾಣಿಗಳೂ ದುಃಖ, ಸಂತೋಷಗಳಂತಹ ಭಾವನೆಗಳನ್ನು ವ್ಯಕ್ತಪಡಿಸುತ್ತವೆ. ಅಂತಹ ಭಾವನೆಗಳನ್ನು ಅವುಗಳ ಮುಖದಲ್ಲಿ ನಾವು ಸ್ಪಷ್ಟವಾಗಿ ಕಾಣಬಹುದೆಂದು ಹೇಳುತ್ತಾ ಅಂತಹ ಭಾವನೆಗಳು ವ್ಯಕ್ತಗೊಂಡ ಹಕ್ಕಿಗಳ, ಪ್ರಾಣಿಗಳ ಫೋಟೋ ತೆಗೆಯಬೇಕು ಎಂದು ಆ ಸಾಹಸ ಕೆಲಸಕ್ಕೆ ಕೈಯಿಟ್ಟರು. ಪ್ರಾಯಶಃ ಇಂತಹ ಕೆಲಸಕ್ಕೆ ಕೈಯಿಟ್ಟವರಲ್ಲಿ ತೇಜಸ್ವಿ ಮೊದಲಿಗರು ಎಂದರೆ ತಪ್ಪಲ್ಲ.



ಓದಲು ಕಳುಹಿಸಿಕೊಟ್ಟಿದ್ದೆ. ಅದನ್ನು ಓದಿದ ತೇಜಸ್ವಿ ಗೌರಿಗೆ ಫೋನ್‌ನಲ್ಲಿ ಸಿಕ್ಕು "ಇವೆಲ್ಲಾ ಉತ್ಪ್ರೇಕ್ಷೆ ಕಣೆ" ಎಂದು ಬಿಟ್ಟರಂತೆ. ಕಾಫಿ ಉದ್ಯಾನದಲ್ಲಿರುವ ಮಲ್ಟಿ ನ್ಯಾಷನಲ್ ಕಂಪನಿಗಳು ಹೇಗೆ ಬೆಲೆಗಳ ಜೊತೆ ಆಟವಾಡುತ್ತಾ ರೈತರನ್ನು ದಿವಾಳಿ ಎಬ್ಬಿಸುತ್ತಿವೆ ಎಂಬ ಬಗ್ಗೆ ಹತ್ತಾರು ಕಾಫಿ ಬೆಳೆಯುವ ದೇಶಗಳ ವಿದ್ಯಾಮಾನಗಳನ್ನು ಅಧ್ಯಯನ ಮಾಡಿ ಉದಾಹರಣೆ ಸಮೇತ ಬರೆದಿದ್ದ ಆ ಪುಸ್ತಕದ ಬಗ್ಗೆ ತೇಜಸ್ವಿ ಪ್ರತಿಕ್ರಿಯೆ ಹೀಗಿತ್ತು. ಬಹುಶಃ ಅದು ತೇಜಸ್ವಿಯವರ ಮುಗ್ಧತೆಯೂ ಆಗಿದ್ದಿರಬಹುದು. ಆದರೆ ಸಾಮಾಜಿಕ-ಆರ್ಥಿಕ ಬಿಕ್ಕಟ್ಟುಗಳಿಗೆ ಮುಗ್ಧತೆ, ತಿಳಿ ಚಿಂತನೆಗಳಲ್ಲಿ ಪರಿಹಾರ ಸಿಗಲು ಹೇಗೆ ಸಾಧ್ಯ?

ತೇಜಸ್ವಿ ಬಹಳ ಘನತೆ, ಸ್ವಾಭಿಮಾನದಿಂದ ಬದುಕಿದವರು. "ಈಗ ಕಳೆದಿರೋ ಜೀವನಕ್ಕಿಂತ ಇನ್ನೂ ಬದುಕಬೇಕಿರೋ ಜೀವನ ನೆನೆಸಿಕೊಂಡರೆ ಬಳಲಿಕೆಯಾಗುತ್ತೆ ಕಣಯ್ಯ ಹೇಮಂತ" (ಸ್ವರೂಪ ಕಾದಂಬರಿ) ಎಂದು ಹೇಳಿ ನಮ್ಮಂತವರಲ್ಲಿ ಬದುಕಿನ ನಶ್ವರತೆ ಹಾಗೂ ಸಾವಿನ ವಾಸ್ತವತೆಯ ಎಚ್ಚರ ಮೂಡಿಸಿದ ಲೇಖಕ.

ತಮ್ಮ ವ್ಯಕ್ತಿ ವಿಶಿಷ್ಟವಾದಿ ಸಿದ್ಧಾಂತವನ್ನು ನಿರೂಪಿಸುವಾಗ 'ಆರ್ಥಿಕ ದಾಸ್ಯದಲ್ಲಿ ಯಾರೊಬ್ಬರ ಆತ್ಮಸಿದ್ಧಿಯೂ ಅಸಾಧ್ಯ' ಎಂದು ಪ್ರತಿಪಾದಿಸಿದ ತೇಜಸ್ವಿ ಅದು ಸಮುದಾಯಗಳಿಗೂ ಅನ್ವಯಿಸುತ್ತದಲ್ಲವೇ ಎಂಬುದನ್ನು ಪರಿಗಣಿಸಲಿಲ್ಲ. ಬದುಕಿನ ದಾರುಣತೆಗಳಿಗೆ ತುತ್ತಾಗಿ ನರಳುತ್ತಿದ್ದವರು, ಅಂಥವರ ಬಗ್ಗೆ ದನಿ ಎತ್ತುತ್ತಿದ್ದವರೆಲ್ಲಾ ತೇಜಸ್ವಿ ಬರಹಗಳಲ್ಲಿ ಕಾಮಿಕ್ ಕ್ಯಾರೆಕ್ಟರ್‌ಗಳಾಗಿ ರೂಪಾಂತರಗೊಂಡರು. ತೇಜಸ್ವಿ ಕಾಡೊಳಗೆ ಹೊಕ್ಕು ಕಣ್ಮರೆಯಾಗುತ್ತಿದ್ದುದೇ ಹೊಸದೇನನ್ನಾದರೂ ಹುಡುಕಿ ತಂದು ನಮಗೆ ಹೇಳಲಿಕ್ಕಾಗಿ. ಜನ ಅಂಥದನ್ನೆಲ್ಲಾ ಸಂಭ್ರಮಾಶ್ಚರ್ಯಗಳಿಂದ ಬರಮಾಡಿಕೊಳ್ಳುತ್ತಾ ತೇಜಸ್ವಿಯವರನ್ನು ಉತ್ತೇಜಿಸುತ್ತಾ ಹೋದರು. ಹಾಗಾಗಿ ತೇಜಸ್ವಿಯವರ ಕೊನೆಗಾಲದ ಬರಹಗಳಲ್ಲಿ ಸರಳ, ಸ್ಪಷ್ಟ ಗೋಚರವಾಗಿದ್ದ ಎಷ್ಟೋ ವಾಸ್ತವಗಳೂ ಕೂಡ 'ಮಾಯಾಲೋಕ'ವಾಗಿ ರೂಪಾಂತರಗೊಂಡು ಓದುಗನನ್ನು entertain ಮಾಡಲೆಂದೇ ಬರೆಯಲ್ಪಟ್ಟವೆಯೇನೋ ಎಂಬಂತಿರುತ್ತಿದ್ದವು.

ಮೊದಲೇ ಹೇಳಿದಂತೆ ನಮ್ಮ ಕಾಲದ ಬಹುದೊಡ್ಡ ಲೇಖಕ, ತೇಜಸ್ವಿಯವರ ಬದುಕು ಹಾಗೂ ಬರವಣಿಗೆಗಳ ಬಗ್ಗೆ ಕೇವಲ ಬೆರಗು ಪಡುವುದನ್ನು ಸಾಕು ಮಾಡಿ ಮೆಚ್ಚಬೇಕಾದ್ದನ್ನು ಮೆಚ್ಚುವ, ವಿಮರ್ಶಿಸಬೇಕಾದಷ್ಟನ್ನು ವಿಮರ್ಶಿಸುವ ತಾಕತ್ತನ್ನು ಕನ್ನಡದ ಬೌದ್ಧಿಕ ಜಗತ್ತು ತೋರಿಸಬೇಕಿದೆ.

-ಪಾರ್ವತೀಶ


ಕೃಪಾಕರ ಮತ್ತು ಸೇನಾನಿ

ಅವರು ಬರೆಯುತ್ತಿದ್ದುದೂ ಹೊಟ್ಟೆಪಾಡಿಗಾಗಿ ಅಲ್ಲ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಬೇಕಾದಷ್ಟು ಮಾರ್ಗಗಳಿವೆ. ಅದಕ್ಕೆ ಬರವಣಿಗೆನೇ ಬೇಕಾ? ಅಂತ ವಾದಿಸುತ್ತಿದ್ದರು. ಅವರು ತುಷಾರ ಪತ್ರಿಕೆಗೆ 'ಮುದಿರೆಂಬೆಯ ಕಡೆಯ ಗಾನ'ವನ್ನು ಬರೆಯುತ್ತಿದ್ದಾಗ ಅವರಿಗೆ ಪತ್ರಿಕೆ ಕೇವಲ 5 ರೂಪಾಯಿ ಕೊಡುತ್ತಿತ್ತು, ಆದರೆ ಅದನ್ನು ಬರೆಯುವುದಕ್ಕೆ ಅವರು ಹತ್ತಾರು-ನೂರಾರು ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಇದರಿಂದಲೇ ಗೊತ್ತಾಗುತ್ತೆ ಅವರು ಹಣಕ್ಕಾಗಿ ಬರೆಯುತ್ತಿರಲಿಲ್ಲ ಎಂದು.

ದೊಡ್ಡ ಪ್ರತಿಭೆ, ವಿಶ್ವವಿಖ್ಯಾತ, ಹಾಗೆ ಹೀಗೆ ಅಂತ ಯಾರ್ಯಾರನ್ನೋ ಹೊಗಳುತ್ತಾರೆ. ಆದರೆ ನನ್ನ ದೃಷ್ಟಿಯಲ್ಲಿ ತೇಜಸ್ವಿ ತುಂಬಾ ಗ್ರೇಟ್. ಮಹಾನ್ ಲೇಖಕರು, ವನ್ಯಜೀವಿ ತಜ್ಞರು, ಮುಂತಾದವರೆಲ್ಲ ಕೇವಲ ಒಂದೊಂದು ವರ್ಗದ, ಕ್ಷೇತ್ರದ ಜನರನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ. ಆದರೆ ತೇಜಸ್ವಿ ಎಲ್ಲರಿಗೂ ತಲುಪಿದರು ಎಂದರೆ ಅತಿಶಯೋಕ್ತಿ ಆಗಲಾರದು.

-ಕೃಪಾಕರ

ವನ್ಯಜೀವಿ ಛಾಯಾಗ್ರಾಹಕ

ಟ್ಯಾನರಿ ರಸ್ತೆಯಲ್ಲಿ ಸ್ಟ್ರೀಟ್ ಫೈಟಿಂಗ್

ಕೇಬಲ್ ಶ್ರೀಧರನ ರೊಕ್ಕ ಹುತಕರೇ ಪೊಲೀಸರ ಪಕ್ಕ

ಇದು ರೌಡಿಗಳು ಮತ್ತು ಪೊಲೀಸರು ಒಂದೇ ತಟ್ಟೆಯಲ್ಲಿ ಊಟಕ್ಕೆ ಕುಂತ ರೀತಿಯಾ?

ನಿನ್ನೆಮೊನ್ನೆಯ ತನಕ ಟ್ಯಾನರಿ ರೋಡನ್ನಾಳುತ್ತಿದ್ದ ಸಾರಾಯಿ ರಾಣಿ ಮಾರಿಮುತ್ತು ಪಾಲಿಕೆ ಕೌನ್ಸಿಲರ್ ಪದವಿಗೇರುತ್ತಿದ್ದಂತೆ ಆ ಜಾಗಕ್ಕೆ ಕೇಬಲ್ ಕ್ರಿಮಿ ಶ್ರೀಧರ ಕಾಲಿಟ್ಟದ್ದರ ಪರಿಣಾಮವಾ?


ಡ್ಯಾನಿಯಲ್

ಬೆಂಗಳೂರಿನ ಕಾಲುಭಾಗವನ್ನಾಕ್ರಮಿಸಿದ ಕೇಬಲ್ ಶ್ರೀಧರನ ಆಧಿಪತ್ಯದ ವಿರುದ್ಧ ಸೊಲ್ಲೆತ್ತಿದವರ್‍ಯಾರೂ ಬದುಕಲೇಬಾರದಾ?

ಬಹುಜನ ಸಮಾಜ ಪಕ್ಷದ ಕಾರ್ಯಕರ್ತರ ಪಡೆಯೊಂದನ್ನು ನಿಕಾಲಿ ಮಾಡಿಬಿಟ್ಟರೆ ಶ್ರೀಧರನ ಕೇಬಲ್ ಸಾಮ್ರಾಜ್ಯ ಚಿರಾಯುವಾಗುತ್ತಾ?

ಕೇಬಲ್ ಶ್ರೀಧರನಿಗಾಗಿ ಇನ್ನೆಷ್ಟು ಹೆಣ ಬೀಳಬೇಕು?

ಇದೇ ಏಪ್ರಿಲ್ ಮೂರರ ನಡುರಾತ್ರಿ ಟ್ಯಾನರಿ ರಸ್ತೆಯ ಕೆ.ಜಿ. ಹಳ್ಳಿಯಲ್ಲಿ ನಡೆದ ಸ್ಟ್ರೀಟ್ ಫೈಟಿಂಗ್‌ನ ಆಳ-ಅಗಲ ಬಲ್ಲ ಪ್ರತಿಯೊಬ್ಬರೂ ಕೇಳುವ ಪ್ರಶ್ನೆಗಳಿವು.

ಒದೆ ತಿಂದ ಡ್ಯಾನಿಯಲ್ ಎಂಬಾತ ಕೇಬಲ್ ಕಿರಾತಕ ಶ್ರೀಧರನ ಮೆಚ್ಚಿನ ಬಂಟ ಮತ್ತು ಜೆ.ಸಿ. ನಗರದ ರೌಡಿ ಪೀಟರ್. ಆತನನ್ನು ಥಳಿಸಿದ ಏಳುಮಲೈ ಬಹುಜನ ಸಮಾಜ ಪಕ್ಷದ ಕಾರ್ಯಕರ್ತ. ತಪ್ಪು ತಪ್ಪೇ ನಿಜ; ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಗಂಗಾಧರ್ ಇದ್ಯಾವುದಕ್ಕೂ ಸಂಬಂಧವೇ ಇಲ್ಲದ ಬಹುಜನ ಸಮಾಜ ಪಕ್ಷದ ಬೆಂಗಳೂರು ಜಿಲ್ಲಾಧ್ಯಕ್ಷ ವೇಲು ಮತ್ತು ಇನ್ನೊಬ್ಬ ಬಿಎಸ್‌ಪಿ ನಾಯಕ ಮಣಿವಣ್ಣನ್‌ರನ್ನೇಕೆ ಬಂಧಿಸಿ ಜೈಲಿಗೆ ಹಾಕುತ್ತಾರೆ?

...ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡ. ಅದಕ್ಕೂ ಮುನ್ನ ಮನೆಮನೆಗೆ ಹಾಲು ಹಾಕುತ್ತಿದ್ದವನು ಕೇಬಲ್ ದಂಧೆಗೆ ಕೈಯಿಟ್ಟದ್ದೇ ತಡ, ಭಕ್ತಿ ಗಾರ್ಡನ್ನಿನ ಪರಮಪಾತಕಿಗಳಾದ ಕುಟ್ಟಿ-ರಾಜಾ ಬ್ರದರ್ಸ್, ಕಾಲಾಪತ್ಥರ್, ಡೆಡ್ಲಿ ಸೋಮನ ಬಂಟ ಕವಳ ಮುಂತಾದವರೆಲ್ಲ ಕಂಟೋನ್ಮೆಂಟ್ ಏರಿಯಾಗೆ ಶಿಫ್ಟಾದರು. ಕಾಕ್ಸ್‌ಟೌನಿನ ದೊಡ್ಡಿಗುಂಟೆಯ ರಾಮಕೃಷ್ಣಪ್ಪ ರಸ್ತೆಯಲ್ಲಿ ಸಣ್ಣಗೆ ಶುರುವಾದ ಶ್ರೀಧರ 'ಶ್ರೀ ಸ್ಯಾಟ್ ವಿಜನ್' ಒಂದೆರಡು ವರ್ಷಕ್ಕೆ ಇಡೀ ಕಾಕ್ಸ್‌ಟೌನ್ ವ್ಯಾಪಿಸಿ ಕ್ರಮೇಣ ಜೀವನಹಳ್ಳಿ, ಫ್ರೇಜರ್ ಟೌನ್, ಥಣಿಸಂದ್ರ, ಸಿಂಧಿ ಕಾಲೋನಿ, ಮಾರತಹಳ್ಳಿ, ವೈಟ್ ಫೀಲ್ಡ್ ತನಕ ವಿಸ್ತರಿಸಿತು.


ವಿ. ವೇಲು

ತನ್ನ ಕೇಬಲ್ ವಿಸ್ತರಣೆಗೆಂದು ಹುಡಿಪುಡಿ ರೌಡಿಗಳನ್ನೆಲ್ಲ ಶ್ರೀಧರ್ ಗುಡ್ಡೆ ಹಾಕಿಕೊಂಡ. ಸರಿಸುಮಾರು ಒಂದು ಡಜನ್ ಪೊಲೀಸ್ ಠಾಣೆಗಳಿಗೆ 'ಮಂತ್ಲಿ' ಗೊತ್ತು ಮಾಡಿಕೊಂಡ. ಅಂಥಾ ಪೂರ್ವಂಕರ ಬಿಲ್ಡರುಗಳಿಗೇ ಧಮಕಿ ಹಾಕಿ ಪೂರ್ವಪಾರ್ಕ್ ಅಪಾರ್ಟ್‌ಮೆಂಟ್‌ನ ಎಂಟುನೂರು ಫ್ಲಾಟುಗಳಿಗೆ ಶ್ರೀಧರ್ ಕೇಬಲ್ ಎಳೆದಿದ್ದ. ಇತ್ತ ಐಟಿಸಿ ಕ್ಲಬ್‌ನಿಂದ ಜೈಭಾರತ್ ನಗರದ ತನಕ ಅತ್ತ ದೊಡ್ಡಿಗುಂಟೆಯಿಂದ ಸೇವಾನಗರದ ತನಕ ತನ್ನ ಕೇಬಲ್ ಜಾಲವನ್ನು ವಿಸ್ತರಿಸಿದವನು ಆಯಾ ಏರಿಯಾದ ಪುಡಿ ರೌಡಿಗಳು ನಡೆಸುವ ಗಣೇಶ, ಅಣ್ಣಮ್ಮ, ಮೇರಿ ಫೀಸ್ಟ್, ಅಂಬೇಡ್ಕರ್ ಜಯಂತಿಗಳಿಗೆಲ್ಲ ಚಿಲ್ಲರೆ ಕಾಸು ಕೊಡುತ್ತಿದ್ದ. ಈ ಹಂತದಲ್ಲೇ ಬಾಗಲೂರು ಲೇಔಟಿನ ದಲಿತ ಹೋರಾಟಗಾರ ವೇಲು ಜೊತೆ ಶ್ರೀಧರನ ದೋಸ್ತಿ...


...ಪೊಲೀಸರೆದುರೇ ರೌಡಿ ಗ್ಯಾಂಗ್ ದಾಳಿ ನಡೆಸುತ್ತಿದ್ದರೆ ಪೊಲೀಸರು ಚಪ್ಪಾಳೆ ತಟ್ಟುತ್ತಿದ್ದರು!


ಏಕೆಂದರೆ ಈ ಹೊತ್ತಿಗಾಗಲೇ ಭಾರತಿನಗರದ ಶಾಸಕ ನಿರ್ಮಲ್ ಸುರಾಣಾನೇ ಕೇಬಲ್ ಶ್ರೀಧರನಗಾಡ್‌ಫಾದರ್ ಆಗಿಬಿಟ್ಟಿದ್ದ. ಇದರ ಪರಿಣಾಮ ಅದೆಷ್ಟು ಭೀಕರವಾಗಿತ್ತೆಂದರೆ, 2005 ರ ಜೂನ್ 25ರ ರಾತ್ರಿ ಬಿಎಸ್‌ಪಿ ನಾಯಕಿ ಮಾಯಾವತಿಯ ಬಹಿರಂಗ ಸಭೆಗೆಂದು ಮೋರ್ಸ್ ರಸ್ತೆಯಲ್ಲಿ ಕಟೌಟ್ ನಿಲ್ಲಿಸುತ್ತಿದ್ದ ಸತ್ಯವೇಲುವನ್ನು ಶ್ರೀಧರನ ಬಂಟ ಮ್ಯಾಥ್ಯೂ ಕತ್ತರಿಸಿ ಕೊಂದುಬಿಟ್ಟ.

ದುರಂತವೆಂದರೆ ಕೊಲೆಗೆ ಪ್ರಮುಖ ಕಾರಣನಾದ ಶ್ರೀಧರನನ್ನು ಮಾತ್ರ ಪೊಲೀಸರು ಮುಟ್ಟಲೇ ಇಲ್ಲ! ಇವತ್ತಿಗೂ ಆತನನ್ನು ಬಂಧಿಸುತ್ತಿಲ್ಲ!!

ಇದರ ಪರಿಣಾಮವೇ ಏಪ್ರಿಲ್ ಮೂರರ ಸ್ಟ್ರೀಟ್ ಫೈಟಿಂಗ್. ಆವತ್ತು ಕೇಬಲ್ ಶ್ರೀಧರನ ಅಸಲಿ ಗುರಿಯಿದ್ದದ್ದು ವೇಲು ತಮ್ಮ ಏಳುಮಲೈ ಮೇಲೆ. ಬೆನ್ನಿಗೆ ಒಂದಷ್ಟು ಹುಡುಗರು ಮತ್ತು ಬಡಿದಾಡುವ ತಾಕತ್ತು ಇರುವುದು ಏಳುಮಲೈಗೆ ಮಾತ್ರ. ಆತನನ್ನು ಮುಗಿಸಿಬಿಟ್ಟರೆ ಇಡೀ ಬಿಎಸ್‌ಪಿಯ ಜಂಘಾಬಲವೇ ಉಡುಗಿಬಿಡುತ್ತದೆ. ಹಾಗೆಂದೇ ಲೆಕ್ಕ ಹಾಕಿ ಬಂಟ ಮ್ಯಾಥ್ಯೂನನ್ನು ಛೂಬಿಟ್ಟಿದ್ದ. ಆದರೆ ಬಲಿಯಾದವನು ಏಳುಮಲೈನ ಕಿರಿಯ ಅಣ್ಣ ಸತ್ಯವೇಲು.

ಈಗ ಸತ್ಯವೇಲು ಕೊಲೆ ಕೇಸು ವಿಚಾರಣೆಗೆ ಬಂದಿದೆ.


ಕೇಬಲ್ ಶ್ರೀಧರ


ಕೊಲೆಯಾದ ಸತ್ಯವೇಲು

ಆದು ಕೇಬಲ್ ಶ್ರೀಧರನ 'ಕಾಂಚಾಣ ಮಹಾತ್ಮೆ' ಎಂಬುದು ಕೂಡ ಗುಟ್ಟಾಗುಳಿದಿಲ್ಲ. ಇಲ್ಲಿಗೆ ವರ್ಷದ ಹಿಂದಷ್ಟೇ ಬಿಎಸ್‌ಪಿ ನಾಯಕ ಸತ್ಯವೇಲುವನ್ನು ಇದೇ ಕೇಬಲ್ ಶ್ರೀಧರ ಗ್ಯಾಂಗ್ ಕೊಚ್ಚಿ ಕೊಂದಿದೆ. ಈಗ ಶ್ರೀಧರನ ಬಂಟ ಡೇನಿಯಲ್‌ನಿಂದ ಬದುಕುಳಿಯಲೆಂದು ಆಯುಧ ಹಿಡಿದ ಏಳುಮಲೈ ಕೊಲೆಯಾದ ಸತ್ಯವೇಲುವಿನ ಒಡಹುಟ್ಟಿದ ತಮ್ಮ!

ಸತ್ಯವೇಲು ಕೊಲೆಯಾದಾಗಲೂ ಈಗ ಆತನ ತಮ್ಮ ಏಳುಮಲೈ ಹತ್ಯೆಗೆ ಯತ್ನವಾದಾಗಲೂ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಗಂಗಾಧರ್ ಸಾಹೇಬರದು ಅದೇ ಮಾಮೂಲಿ ಕೇಬಲ್ ಕಾಯಕ. ಅಣ್ಣನ ಕೊಲೆಯಾದಾಗ ಕೊಂದ ಕೇಬಲ್ ಶ್ರೀಧರನನ್ನು ಬಂಧಿಸದೇ ಕೊಂದವರ ಜೊತೆಗೆ ಚಕ್ಕಂದ, ಈಗ ತಮ್ಮನನ್ನು ಕೊಲ್ಲಲು ಬಂದವರೊಡನೆ ಒಂದೇ ತಟ್ಟೆಯಲ್ಲಿ ವನಭೋಜನ!

ಟ್ಯಾನರಿ ರಸ್ತೆಯ ವೇಲು, ಸತ್ಯವೇಲು, ಏಳುಮಲೈ ಮತ್ತು ಮಣಿವಣ್ಣನ್ ಎಂಬ ದಲಿತ ಹೋರಾಟಗಾರರ ಗುಂಪೊಂದನ್ನು ನಿರ್ನಾಮ ಮಾಡಿಬಿಟ್ಟರೆ ಬೆಂಗಳೂರಿನ ಕಾಲುಭಾಗವನ್ನಾಕ್ರಮಿಸಿದ ಕೇಬಲ್ ಸಾಮ್ರಾಜ್ಯವೊಂದು ನಿರಂಕುಶವಾಗಿ ಬಿಡುತ್ತದೆ ಎಂಬುದೇ ಇಷ್ಟೆಲ್ಲ ರಕ್ತಪಾತಕ್ಕೆ ಮೂಲ ಕಾರಣ.



ರೌಡಿ ಮ್ಯಾಥ್ಯು

ಟ್ಯಾನರಿ ರಸ್ತೆಯ ಬಾಗಲೂರು ಲೇಔಟಿನ ವೇಲು ಬ್ರದರ್ಸ್ ಮೊದಮೊದಲು ಸಾರಾಯಿ ರಾಣಿ ಮಾರಿಮುತ್ತುವಿನ ವಿರುದ್ಧ ಹೋರಾಟಕ್ಕಿಳಿದವರು. ಆವತ್ತು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರಾಗಿದ್ದ ಈ ತಂಡ ಕ್ರಮೇಣ ಬಹುಜನ ಸಮಾಜ ಪಕ್ಷ ಸೇರ್ಪಡೆಯಾಗುತ್ತಿದ್ದಂತೆ ಆ ಭಾಗದ ಕೇಬಲ್ ಕ್ರಿಮಿ ಶ್ರೀಧರ್ ಈ ಗುಂಪನ್ನು ಬೆಂಬಲಿಸಲಾರಂಭಿಸಿದ. ಕೇವಲ ಅರ್ಧ ಗಂಟೆಯ ಒಳಗೆ ಸಾವಿರಾರು ಜನರನ್ನು ಸೇರಿಸಬಲ್ಲ ತಾಕತ್ತುಳ್ಳ ವೇಲು ಮತ್ತು ಆತನ ತಮ್ಮಂದಿರನ್ನು ತನ್ನೊಂದಿಗೆ ಇಟ್ಟುಕೊಂಡು ಪಗಡೆ ಆಡುವುದು ಶ್ರೀಧರನ ಹುನ್ನಾರವಾಗಿತ್ತು.

ಈ ಕೇಬಲ್ ಶ್ರೀಧರ್ ಭಾರತಿನಗರದ ಮಾಜಿ ಶಾಸಕ ರಾಜಣ್ಣನವರ ತಮ್ಮ ರಾಮಕೃಷ್ಣಪ್ಪನ ಮಗ. ರಾಜಣ್ಣ ಎಮ್ಮೆಲ್ಲೆಯಾಗಿದ್ದಷ್ಟೂ ದಿನ ಅವರ ಹೆಸರಲ್ಲೇ ತನ್ನ ಕೇಬಲ್...

...ಕುದುರಿದೆ. ವೇಲು ತಮ್ಮಂದಿರಾದ ಸತ್ಯವೇಲು ಮತ್ತು ಏಳುಮಲೈ ಆ ಹೊತ್ತಿಗಾಗಲೇ ಮಾರಿಮುತ್ತು ಗ್ಯಾಂಗಿನ ವಿರುದ್ಧ ಬಡಿದಾಡುತ್ತಿದ್ದರು. ಅವರನ್ನು ಬಳಸಿಕೊಂಡಷ್ಟು ದಿನ ಬಳಸಿಕೊಂಡ ಶ್ರೀಧರ ಕ್ರಮೇಣ ಪಾಟರಿಟೌನ್‌ನ ಬಿಎಸ್‌ಪಿ ಕಾರ್ಯಕರ್ತನೊಬ್ಬನ ಮನೆಯನ್ನೇ ಖಾಲಿ ಮಾಡಿಸಿ ಅದನ್ನು ಲಪಟಾಯಿಸಲು ರೌಡಿಗಳನ್ನು ಛೂಬಿಟ್ಟ. ಸಾಲದ್ದಕ್ಕೆ ವೇಲುಗೆ ಆತ್ಮೀಯರಾಗಿದ್ದ ಬಾಗಲೂರು ಲೇಔಟಿನ ಇನ್ನಿಬ್ಬರ ಮನೆಗಳನ್ನು ಕಬಳಿಸಲು ಕೈಯಿಟ್ಟಿದ್ದ.

ಅಲ್ಲಿಗೆ ಶ್ರೀಧರನ ದುರಾಚಾರದ ವಿರುದ್ಧ ಬಿಎಸ್‌ಪಿಯೇ ಹೋರಾಟಕ್ಕಿಳಿದಿತ್ತು. ಹೇಗೂ ಪೊಲೀಸರೇ ಶ್ರೀಧರನ ಋಣದಲ್ಲಿದ್ದರಲ್ಲ; ಕ್ರಮೇಣ ಒಂದೊಂದೇ ಪೊಲೀಸ್ ಠಾಣೆಯ ಖಾಕಿಧೂತರನ್ನು ಬಿಎಸ್‌ಪಿ ವಿರುದ್ಧ ಶ್ರೀಧರ್ ಛೂಬಿಟ್ಟ. 2003 ರ ಸೆಪ್ಟೆಂಬರ್ 21 ರ ರಾತ್ರಿ ಸರಿಸುಮಾರು ಎರಡು ಡಜನ್ ರೌಡಿಗಳ ಸಮೇತ, ಪಾಟರಿ ಟೌನ್‌ನ ಬಿಎಸ್‌ಪಿ ಕಚೇರಿಯ ಮೇಲೆ ದಾಳಿ ಮಾಡಿಬಿಟ್ಟ.


ಏಳುಮಲೈ

ಈ ಬಗ್ಗೆ ಜೆ.ಸಿ. ನಗರ ಪೊಲೀಸ್ ಠಾಣೆಯಲ್ಲಿ ಶ್ರೀಧರನ ವಿರುದ್ಧ ವೇಲು ದೂರು ಕೊಟ್ಟಾಗಲೂ ಇನ್ಸ್‌ಪೆಕ್ಟರ್ ಬಾಲಾಜಿ ಸಿಂಗ್ ಅದಕ್ಕೆ ಕ್ಯಾರೇ ಎನ್ನಲಿಲ್ಲ. ಪೊಲೀಸ್ ಕಮೀಷನರ್ ಕಚೇರಿಗೆ ಮುತ್ತಿಗೆ ಹಾಕಿತು ಬಿಎಸ್‌ಪಿ. ಸಿಕ್ಕ ಪ್ರತಿಫಲವೇನು ಗೊತ್ತೆ?

ಬಾಣಸವಾಡಿಯ ಇನ್ಸ್‌ಪೆಕ್ಟರ್ ಸಿದ್ಧಪ್ಪ ಬಿಎಸ್‌ಪಿಯ ಮೂವರೂ ಸಹೋದರರನ್ನು ಸುಳ್ಳು ಕೇಸಿನಲ್ಲಿ ಸಿಲುಕಿಸಿ ಜೈಲಿಗೆ ಹಾಕಿಬಿಟ್ಟರು. ಅದರ ಬೆನ್ನಲ್ಲೇ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಶ್ರೀನಿವಾಸ್ ಮತ್ತು ಜೆ.ಸಿ.ನಗರದ ಇನ್ಸ್‌ಪೆಕ್ಟರ್ ಬಾಲಾಜಿಸಿಂಗ್ ದಲಿತ ಹೋರಾಟಗಾರರ ವಿರುದ್ಧ ಇನ್ನಷ್ಟು ಖೊಟ್ಟಿ ಕೇಸು ಹೊರಿಸಿದರು. ಜೈಲಿಂದ ಹೊರಬರುವ ಹೊತ್ತಿಗೆ ಅಣ್ಣತಮ್ಮಂದಿರು ಇನ್ನಷ್ಟು ಹೈರಾಣಾಗಿಬಿಟ್ಟರು.

ಹಾಗಂತ ಶ್ರೀಧರನ ಅಟ್ಟಹಾಸ ಇಷ್ಟಕ್ಕೇ ತಣಿಯಲಿಲ್ಲ. ಒಂದೆಡೆ ಪೊಲೀಸರನ್ನು ಬಿಟ್ಟು ಕಾಟಕೊಡಿಸಿದ್ದಲ್ಲದೇ ಮತ್ತೊಂದೆಡೆ ಪರಮಪಾತಕಿಗಳಾದ ಕುಟ್ಟಿ-ರಾಜಾ, ಗಿಡ್ಡಪ್ಪ ಲೇನಿನ ರೌಡಿ ಸೆಲ್ವಾ ಮತ್ತು ಬ್ಯಾಡರಹಳ್ಳಿಯ ಕಾಲಾಪತ್ಥರ್ ಶಿಷ್ಯ ಮ್ಯಾಥ್ಯೂ ಥರದ ರೌಡಿಗಳನ್ನು ಶ್ರೀಧರ್ ಛೂಬಿಟ್ಟಿದ್ದ ವೇಲು, ಸತ್ಯವೇಲು, ಏಳುಮಲೈಗಳ ಮೇಲೆ...

...ತನ್ನ ವಿರುದ್ಧ ಅಣ್ಣ ವೇಲು ಮತ್ತು ತಮ್ಮ ಏಳುಮಲೈ ಕೋರ್ಟಿಗೆ ಬಂದು ಸಾಕ್ಷಿ ಹೇಳುವ ಮುನ್ನ ಅವರಿಬ್ಬರನ್ನೂ ಮುಗಿಸುವುದು ಶ್ರೀಧರನ ಉದ್ದೇಶ. ಅದಕ್ಕೆ ಏಳುಮಲೈ ಜೊತೆಗೇ ಇದ್ದ ಡೇನಿಯಲ್‌ನನ್ನು ಎತ್ತಿ ಕಟ್ಟಿದ್ದಾನೆ.

ಡೇನಿಯಲ್ ಮತ್ತು ಏಳುಮಲೈ ಒಂದಾನೊಂದು ಕಾಲಕ್ಕೆ ದೋಸ್ತಿಗಳೇ. ಯಾವತ್ತು ಕೇಬಲ್ ಶ್ರೀಧರನ ಕೈ ಡೇನಿಯಲ್ ಹೆಗಲಿಗೆ ಬಿತ್ತೋ ಕ್ಷುಲ್ಲಕ ಕಾರಣ ನೆಪವೊಡ್ಡಿ ಏಳುಮಲೈ ವಿರುದ್ಧ ತಿರುಗಿಬಿದ್ದ. ಇದೇ ಏಪ್ರಿಲ್ 3ರ ರಾತ್ರಿ ಇದ್ದಕ್ಕಿದ್ದಂತೆ ಏಳುಮಲೈ ಮೇಲೆ ಡೇನಿಯಲ್ ಮತ್ತು ಆತನ ಸಹಚರರಾದ ಜಾನ್, ಅರುಣ, ಖಾನಿ, ಆಲ್ಫೋನ್ಸ್, ಸೆಂದಿಲ್ ಮುಂತಾದವರ ಗ್ಯಾಂಗ್ ದಾಳಿ ಮಾಡಿದೆ. ದಾಳಿಗೆ ಸಿಲುಕಿದ ಏಳುಮಲೈನ ಸ್ಕಾರ್ಪಿಯೋ ಚಿಂದಿಯಾಗಿದೆ. ಏಳುಮಲೈ ಮತ್ತು ಆತನ ದೊಡ್ಡಣ್ಣನ ಮಗ ವಿಷ್ಣು ಎಂಬಾತನಿಗೂ ಲಾಂಗ್ ಏಟು ಬಿದ್ದಿದೆ. ಆದರೆ ಹುಷಾರಾದ ಏಳುಮಲೈ ಪ್ರಾಣದ ಹಂಗು ತೊರೆದು ಡೇನಿಯಲ್ ಗ್ಯಾಂಗಿನ ಮೇಲೆ ಮರುದಾಳಿ ನಡೆಸಿದ್ದಾನೆ.

ಇಲ್ಲಿ ಮೊದಲು ದಾಳಿ ಮಾಡಿದ್ದೇ ಡೇನಿಯಲ್ ಗ್ಯಾಂಗ್. ಏಳುಮಲೈ ತಾನು ಬದುಕುಳಿಯಲು ಪ್ರತಿದಾಳಿ ನಡೆಸಿದನಷ್ಟೇ. ಆದರೆ ಕೆ.ಜಿ. ಹಳ್ಳಿ ಇನ್ಸ್‌ಪೆಕ್ಟರ್ ಗಂಗಾಧರ್ ಡೇನಿಯಲ್‌ನನ್ನು ಫಿರ್ಯಾದಿಯನ್ನಾಗಿಸಿ ಏಳುಮಲೈ ವಿರುದ್ಧ ಕೇಸು ದಾಖಲಿಸಿಬಿಟ್ಟ. ಇನ್ನೂ ದುರಂತವೆಂದರೆ ಘಟನೆಗೆ ಏನೇನೂ ಸಂಬಂಧವಿಲ್ಲದ ಬಿಎಸ್‌ಪಿ ನಾಯಕ ವೇಲು ಮತ್ತು ಕಾರ್ಯಕರ್ತ ಮಣಿವಣ್ಣನ್‌ರನ್ನೇ ಈ ಕೇಸಿಗೆ ಸಿಲುಕಿಸಿ ಬಂಧಿಸಿ ಜೈಲಿಗಟ್ಟಿದ್ದಾರೆ.

ಇದು ಯಾವ ನ್ಯಾಯ?

ಹೇಳಿಕೇಳಿ ಈ ಹಿಂದೆ ಕೊಲೆಯಾದ ಸತ್ಯವೇಲು ಕೇಸಿನಲ್ಲಿ ಆವತ್ತು ಬಾಣಸವಾಡಿ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿದ್ದ ಸಿದ್ಧಪ್ಪನವರನ್ನೇ ಕೇಬಲ್ ಶ್ರೀಧರನ ಜೊತೆ ಕೈ ಜೋಡಿಸಿದ್ದಾರೆಂದು ಆರೋಪಿಸಲಾಗಿತ್ತು. ಅದಕ್ಕೆ ಈಗ ಬಂಧಿತರಾದ ವೇಲು ಮತ್ತು ಮಣಿವಣ್ಣನ್ ಸಾಕ್ಷಿಗಳಾಗಿದ್ದರು. ಆ ಜಿದ್ದಿಗೆ ನಡೆದ ಪ್ರತೀಕಾರವಾ ಇದು? ಹಾಗಂತ ಬಿಎಸ್‌ಪಿ ನಾಯಕ ಮಾರಸಂದ್ರ ಮುನಿಯಪ್ಪ ಆರೋಪಿಸುತ್ತಿದ್ದಾರೆ. ಕೇಬಲ್ ಶ್ರೀಧರನ ಅಟ್ಟಹಾಸಕ್ಕೆ ಕೊನೆಯೇ ಇಲ್ಲವೆ?

ರಾ.ಸೋ.

ರಿವೇಂಜ್ ಕಿಲ್ಲಿಂಗ್ಸ್ 24

ರಾ. ಸೋಮನಾಥ್

ಅವನ ಸುತ್ತ ಸಾವಿನ ಹುತ್ತ

ಏನೆಲ್ಲಾ ಬಾಧೆ ಬಿದ್ದೂ ಸುಂಕದಕಟ್ಟೆ ಪಂಚಾಯ್ತಿ ಚೇರ್ಮನ್‌ಗಿರಿಯನ್ನು ಉಳಿಸಿಕೊಳ್ಳುವುದು ಕಡಬಗೆರೆಯ ಪಾಯ್ಸನ್ ರಾಮನಿಂದ ಆಗಲೇ ಇಲ್ಲ. ಆತನ ಅಣ್ಣ ಶೀನಿಯ ಬೆನ್ನಿಗೆ ನಿಂತಿದ್ದ ಮಚ್ಚನ ತಾಕತ್ತೇ ಆ ಮಟ್ಟಗಿತ್ತು. ಸುಂಕದ ಕಟ್ಟೆ, ಗೊಲ್ಲರಹಟ್ಟಿ, ಅಂಜನಾಪುರದ ಸುತ್ತಮುತ್ತ ಕಂಡಕಂಡ ಸೈಟುಗಳಿಗೆ ಬೇಲಿ ಹಾಕಿದ್ದ. ದುಡ್ಡು ಸಿಕ್ಕಾಪಟ್ಟೆ ಬರುತ್ತಿತ್ತು. ಜೊತೆಗೆ ಹುಡುಗರ ದಂಡೇ ಇತ್ತು.

ಹುಂಬ ಬುದ್ಧಿಯೋ ದುರಾಸೆಯೋ ಮಚ್ಚ ಒಂದರ ಮೇಲೊಂದು ಯುದ್ಧವನ್ನು ಮಾಡಿಕೊಂಡೇ ಬಂದ. ಯಾವತ್ತು ಕಡಬಗೆರೆಯ ಪಾಯ್ಸನ್ ರಾಮ ಮತ್ತು ಆತನ ಅಣ್ಣ ಡಾಬಾ ಸೀನರ ವಿರುದ್ಧ ಜಿದ್ದಿಗೆ ಬಿದ್ದನೋ; ಆತನಕ ಗೋಪಾಲಯ್ಯ ವಿರುದ್ಧವಿದ್ದ ರಾಮ-ಸೀನ ಬ್ರದರ್ಸ್ ಸದ್ದಿಲ್ಲದೇ ಕಾಮಾಕ್ಷಿಪಾಳ್ಯದ ಬಸವನಿಗೆ ಶರಣಾಗಿಬಿಟ್ಟರು.




ಮಚ್ಚ

ಸಾವು ಸದ್ದಿಲ್ಲದೇ ಸಮೀಪಿಸುತ್ತಿದೆ ಎಂಬುದು ಮಚ್ಚನಿಗೆಲ್ಲಿ ತೋಚಲು ಸಾಧ್ಯವಿತ್ತು?

ಒಂದೆಡೆ ಕಾಮಾಕ್ಷಿಪಾಳ್ಯದ ದುಷ್ಮನಿ, ಮತ್ತೊಂದೆಡೆ ಜೇಕೆ ಜೊತೆಗಿನ ಹಣಾಹಣಿ, ಮಗದೊಂದೆಡೆ ತಿಮ್ಮೇನಹಳ್ಳಿ ಗೋವಿಂದನೆಂಬ ಎನಿಮಿ, ಸಾಲದ್ದಕ್ಕೆ ಆತನಕ ಸಾಥ್ ಕೊಡುತ್ತಿದ್ದ ಮುಲಾಮನ ಗ್ಯಾಂಗಿನ ಜೊತೆ ಹೊಗೆಯಾಡುತ್ತಿದ್ದ ಜಿದ್ದಾಜಿದ್ದಿ. ಮಚ್ಚ ತನ್ನ ಹುಂಬತನ ಮತ್ತು ಹುಮ್ಮಸ್ಸಿನಿಂದಾಗಿ ದಿನಕ್ಕೊಬ್ಬ ಹೊಸ ಶತ್ರುವನ್ನು ಸೃಷ್ಟಿಸಿಕೊಳ್ಳುತ್ತಲೇ ಇದ್ದ.

ಯಾವತ್ತು ಮುಲಾಮ ಮತ್ತು ಜೇಕೆ ರಾಜಿಯಾದರೆಂಬುದು ಗೊತ್ತಾಯಿತೋ ಮುಲಾಮನ ಕಡುವೈರಿ ಕೊರಂಗುನನ್ನು ಸನ್‌ವ್ಯಾಲಿ ಕ್ಲಬ್ಬಿಗೆ ಕರೆಸಿ ಗ್ರ್ಯಾಂಡ್ ಪಾರ್ಟಿ ಕೊಟ್ಟ. ನೇರಾನೇರ ದುಷ್ಮನಿ ಇಲ್ಲದಿದ್ದರೂ ಎಲ್ಲೋ ಕುಣಿಗಲ್ ಹತ್ತಿರದ ಹಳ್ಳಿಯೊಂದರಲ್ಲಿ ಮಲಗಿದ್ದ ತನ್ನ ತಮ್ಮ ಪ್ರಸಾದಿಯನ್ನು ಕತ್ತರಿಸಲಿಕ್ಕೆ ದುಡ್ಡು ಗಾಡಿ ಎಲ್ಲ ಕೊಟ್ಟು ಲಕ್ಕಿಗೆ ಸಹಾಯ ಮಾಡಿದನಲ್ಲಾ ಎಂದು ಗಾಯತ್ರಿನಗರದ ಜಗ್ಗಿ ಮಚ್ಚನ ವಿರುದ್ಧ ಹಲ್ಲು ಕಡಿಯುತ್ತಿದ್ದ. ಇವರೆಲ್ಲರಿಗಿಂತ, ತಮ್ಮದೇ ಮನೆಯಲ್ಲಿದ್ದು ಉಂಡು-ತಿಂದು ತನ್ನ ಅಣ್ಣನನ್ನೇ ಕೊಂದನಲ್ಲ ಎಂದು ಬೈಲು ರವಿಯ ತಮ್ಮ ಕತ್ತಿ ಮಸೆಯುತ್ತಿದ್ದ. ಇದು ಸಾಲದೆಂಬಂತೆ ಮಚ್ಚ ಎಲ್ಲಿ ಓಡಾಡುತ್ತಿದ್ದಾನೆ? ಎಲ್ಲೆಲ್ಲಿ ಲ್ಯಾಂಡಿಗೆ ಬೇಲಿ ಹಾಕಿದ್ದಾನೆ? ಆತನ ಕೆಪಾಸಿಟಿ ಏನು? ಜೊತೆಗೆ ಯಾರ್‍ಯಾರಿದ್ದಾರೆ? ಎಷ್ಟು ದುಡ್ಡು ಮಾಡಿದ್ದಾನೆ? ಇತ್ಯಾದಿ 'ಪಿನ್ ಟು ಪಿನ್' ವರ್ತಮಾನ ತಂದು ಮುಲಾಮನಿಗೆ ಮುಟ್ಟಿಸುತ್ತಿದ್ದವನು ಕಡಬಗೆರೆಯ ಪಾಯ್ಸನ್ ರಾಮ!



ಬುಳ್ಳಾ ಅಲಿಯಾಸ್ ಗುರುಮೂರ್ತಿ


ತನ್ನ ಸುತ್ತ ಹರಡಿದ ಸಾವಿನ ಬಲೆಯ ಬಗ್ಗೆ ಮಚ್ಚನಿಗೆ ಯಾವ ಅರಿವೂ ಇರಲಿಲ್ಲವೆಂದಲ್ಲ. ಖಂಡಿತಾ ಇತ್ತು. ಆದರೆ ಇಷ್ಟು ಬೇಗ ಬರುತ್ತದೆ ಎಂದುಕೊಂಡಿರಲಿಲ್ಲ. ಅದಕ್ಕೆ ತಕ್ಕಂತೆ ಮಚ್ಚನ ಪರಮಾಪ್ತ ಗ್ಯಾಂಗುಗಳೆಲ್ಲ ಒಂದೊಂದಾಗಿ ಮುಗುಚಿಕೊಂಡಿದ್ದವು. ಆತನ ಜೀವದ ಗೆಳೆಯ ತಿಮ್ಮೇನಹಳ್ಳಿ ತಮ್ಮಯ್ಯ ಕೊಲೆಯಾಗಿದ್ದ, ಮತ್ತೊಬ್ಬ ದೋಸ್ತ್ ಕೊರಂಗು ಪಾಲಿಗಂತೂ ಪೊಲೀಸರ ಕಣ್ಣುತಪ್ಪಿಸಿ ಬದುಕುಳಿಯುವುದೇ ಹರಸಾಹಸವಾಗಿತ್ತು. ಚಿಕ್ಕಿನ್ ಕಣ್ಣು ರಾಜೇಂದ್ರನನ್ನು ಕೊಂದು ಜೈಲು ಪಾಲಾಗಿದ್ದ ಸೈಲೆಂಟ್ ಸುನೀಲ ಸದ್ಯ ಹೊರಬರುವಂತಿರಲಿಲ್ಲ. ಆತ ಹೊರಗಿದ್ದಿದ್ದರೆ ಆ ಮಾತೇ ಬೇರೆ; ಇನ್ನು ಲಕ್ಕಿ-ಕ್ಯಾಪ್ಟನ್ ರಾಜ ಸೇರಿಕೊಂಡು ಪ್ರಸಾದಿಯನ್ನು ಕೊಂದು ಜೈಲು ಸೇರಿಬಿಟ್ಟ ಮೇಲೆ ಮಚ್ಚ ಏಕಾಂಗಿಯಾಗಿಬಿಟ್ಟ.

Of course ಇವರ್‍ಯಾರೂ ಇಲ್ಲದೇಹೋದರೂ ತನ್ನ ಬಲಗೈ ಬಂಟರಾಗಿದ್ದ ಕೋತಿರಾಮ, ಕೋಳಿ ಶಿವಾ, ಜಾನಿ, ಕಲಗಚ್ಚು ಸೀನ, ಹಂಡೆ ಕುಮಾರ, ಪೆದ್ದಗುಂಡ ಮುಂತಾದವರನ್ನಿಟ್ಟುಕೊಂಡೇ ಫೀಲ್ಡು ಮಾಡುವ ತಾಕತ್ತು ಮಚ್ಚನಿಗಿತ್ತು. ದುಡ್ಡು ಮಚ್ಚನ ಕೈ ಹಿಡಿದಿತ್ತು. ಅದೇ ಕೆಲವೊಮ್ಮೆ ಪ್ರಾಣಕ್ಕೆ ಕುತ್ತಾಗುತ್ತದೆ ಎಂಬುದನ್ನು ಮಚ್ಚ ಮರೆತುಬಿಟ್ಟ. ಬರಿಗೈಲಿ ಓಡಾಡುವಾಗ ದುಷ್ಮನ್‌ಗಳ ಬಗ್ಗೆ ಇರುವ ಎಚ್ಚರವನ್ನು ಅನೇಕರು ದುಡ್ಡು ಬಂದಾಕ್ಷಣ ಕಳೆದುಕೊಳ್ಳುತ್ತಾರೆ. ಮಚ್ಚನ ವಿಷಯದಲ್ಲಾಗಿದ್ದೇ ಅದು. ಆತನಕ ಮಾಗಡಿ ಶಾಸಕ ಬಾಲಕೃಷ್ಣರ ಆಸರೆಯಲ್ಲಿದ್ದು ಮೆರೆದವನನ್ನು ಏಕಾಏಕಿ ಬಾಲಕೃಷ್ಣ ನಡುನೀರಿನಲ್ಲಿ ಕೈಬಿಟ್ಟದ್ದೇ ತಡ ಅನಾಥನಾಗಿಬಿಟ್ಟ.

ಇಂಥ ಕ್ಲಿಷ್ಟ ಕಾಲದಲ್ಲಿ ಮಚ್ಚನ ನೆರವಿಗೆ ಬಂದವನು ರಾಜರಾಜೇಶ್ವರಿ ಸಿಎಂಸಿಯ ಅಧ್ಯಕ್ಷ ಹನುಮಂತರಾಯಪ್ಪ. ಈತ ಡೀಕೆಯ ಬಲಗೈ ಬಂಟ. ಭಾರೀ ಗಾತ್ರದ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ ಮುಂದೊಮ್ಮೆ ವಿಭಜನೆಗೊಂಡರೆ ಆ ಪೈಕಿ ನಾಗರಬಾವಿ, ಮಾಗಡಿ ರಸ್ತೆಗಳುಳ್ಳ ಕ್ಷೇತ್ರಕ್ಕೆ ತಾನು ನಿಂತು ಎಮ್ಮೆಲ್ಲೆಯಾಗಬೇಕೆಂಬ ಮಹತ್ವಾಕಾಂಕ್ಷೆಯಿಟ್ಟುಕೊಂಡೇ ಆತ ಮಚ್ಚನನ್ನು ಬುಟ್ಟಿಗೆ ಹಾಕಿಕೊಂಡಿದ್ದ.

ಇವತ್ತಲ್ಲಾ ನಾಳೆ ತನ್ನ ಎಮ್ಮೆಲ್ಲೇಗಿರಿಗೆ ಕಾಮಾಕ್ಷಿಪಾಳ್ಯದ ಗೋಪಾಲಯ್ಯನೇ ಎದುರಾಳಿಯಾಗುತ್ತಾನೆಂದು ಆತನ ವೈರಿ ಮಚ್ಚನ ಮೇಲೆ ಹನುಮಂತರಾಯಪ್ಪ ಕಣ್ಣಿಟ್ಟೇ ಇದ್ದ. ಮಚ್ಚನನ್ನು ಕರೆದೊಯ್ದು ಕಾಂಗ್ರೆಸ್ ನಾಯಕ ಡೀಕೇಶಿಗೆ ಪರಿಚಯಿಸಿ ಕೊಟ್ಟ. ಆ ಮೂಲಕ ಕನಕಪುರದ ಲೋಕಸಭಾ ಸದಸ್ಯ ತೇಜಸ್ವಿನಿಗೂ ಮಚ್ಚ ಆತ್ಮೀಯನಾದ. ಅಲ್ಲಿಗೆ ಮಚ್ಚನ ಖದರ್ರೇ ಬದಲಾಗಿಬಿಟ್ಟಿತ್ತು. ಪಕ್ಕಾ ರಾಜಕಾರಣಿಯಂತೆ ಇಡೀ ಕಾಮಾಕ್ಷಿಪಾಳ್ಯದ ತುಂಬ ಡೀಕೆ ಜೊತೆಗೆ ತಾನು ನಿಂತು ಹೊಡೆಸಿಕೊಂಡಿದ್ದ ಫೋಟೋಗಳ ಕಟೌಟ್ ಮಾಡಿ ಹಾಕಿಸಿದ. ತನ್ನ ಮಗನ ಹುಟ್ಟುಹಬ್ಬಕ್ಕೆಂದು ಡೀಕೆಯನ್ನು ಕಾಮಾಕ್ಷಿಪಾಳ್ಯಕ್ಕೆ ಕರೆಸಿ ಸಾವಿರಾರು ಹುಡುಗರನ್ನು ಸೇರಿಸಿಬಿಟ್ಟ.


ಮಚ್ಚನ ಎದುರಾಳಿ ಕಡಬಗೆರೆಯ ಪಾಯ್ಸನ್ ರಾಮನಿಗೂ ಇದೇ ಬೇಕಿತ್ತು. ಈತನ ಅಣ್ಣ ಡಾಬಾಸೀನ ಹೇಳಿಕೇಳಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಆಪ್ತ ವಲಯದಲ್ಲಿದ್ದ. ಗೌಡರ ಕುಟುಂಬಕ್ಕೆ ಪರಮವೈರಿಯಾಗಿದ್ದ ಡೀಕೆ ಮಚ್ಚನಂಥ ರೌಡಿಯನ್ನು ಬೆಳೆಸುತ್ತಿದ್ದಾನೆಂದರೆ ಅದನ್ನು ಕುಮಾರಸ್ವಾಮಿ ನಂಬಲು ಎಷ್ಟು ಹೊತ್ತು? ಮಚ್ಚನ ದುರ್ವಿಧಿಗೆ ತಕ್ಕಂತೆ ಒಂದೊಂದೇ ಘಟನೆಗಳಾದವು.



ಕೊರಂಗು

ಇದೇ ಹೊತ್ತಿಗೆ ಅಂದರೆ 2005 ರ ಜುಲೈಗೆ ಸರಿಯಾಗಿ ರಾಜರಾಜೇಶ್ವರಿ ನಗರಸಭೆಯ ಚುನಾವಣೆಗಳು ಬಂದವು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗಾಗಿ ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ಒಪ್ಪಂದವಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಇಂದ್ರಾಣಿ ಕುಮಾರ್ ಎಂಬಾಕೆಯನ್ನು ತರಬಯಸಿದ್ದ ಗೋಪಾಲಯ್ಯ ಒಂದಷ್ಟು ಮಂದಿ ಕೌನ್ಸಿಲರ್‌ಗಳನ್ನು ತಮಿಳುನಾಡಿನ ತಿರುಚೆಂದೂರಿಗೆ ಕರೆದೊಯ್ದು ಇಟ್ಟಿದ್ದ. ಆದರೆ ಆತ ಅಡಗಿಸಿ ಇಟ್ಟವರ ಪೈಕಿ ಬಿಜೆಪಿಯ ರಾಮಣ್ಣ ಮತ್ತು ಪೂಜಮ್ಮ ಎಂಬುವವರನ್ನು ತನ್ನ ಹುಡುಗರ ಪಡೆ ಕಳಿಸಿ ಮಚ್ಚ ವಾಪಸ್ಸು ಹೊತ್ತು ತರಿಸಿಬಿಟ್ಟ. ಈ ಥರದ ಕಿಡ್ನಾಪ್ ಮತ್ತು ಮರು ಕಿಡ್ನಾಪ್‌ಗಳ ಬಗ್ಗೆ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದೂರು-ಪ್ರತಿ ದೂರುಗಳಾದವಾದರೂ ಅಂತಿಮವಾಗಿ ರಾಜರಾಜೇಶ್ವರಿ ಸಿಎಂಸಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಗಾದಿಗಳು ಜೆಡಿಎಸ್-ಬಿಜೆಪಿಗಳ ಪಾಲಾದವು. ಜಿದ್ದಿಗೆ ಬಿದ್ದ ಕಾಂಗ್ರೆಸ್ಸಿನ ಹನುಮಂತರಾಯಪ್ಪ ಗೋಪಾಲಯ್ಯನ ಮೇಲೆ ಕೆಂಡಾಮಂಡಲನಾದ. ಈ ಬಾರಿಯ ಕಾರ್ಪೊರೇಷನ್ ಚುನಾವಣೆಯಲ್ಲಿ ಗೋಪಾಲಯ್ಯನ ವಿರುದ್ಧ ಮಚ್ಚನನ್ನು ನಿಲ್ಲಿಸಿ ಕಾರ್ಪೊರೇಟರನ್ನಾಗಿ ಮಾಡುತ್ತೇನೆಂದು ಶಪಥಗೈದ.

ಪ್ರಾರಂಭದಲ್ಲಿ ಶಾಸಕ ಬಾಲುವಿನಿಂದಾಗಿ ಮಾಗಡಿಯಲ್ಲಿ ಜೆಡಿಎಸ್ ರೌಡಿಯಾಗಿದ್ದ ಮಚ್ಚ ಈಗ ಹನುಮಂತರಾಯಪ್ಪನಿಂದಾಗಿ ಕಾಂಗ್ರೆಸ್ ರೌಡಿಯಾಗಿದ್ದ. ಅದರಲ್ಲೂ ರಾಜರಾಜೇಶ್ವರಿ ಸಿಎಂಸಿ ವ್ಯವಹಾರದಲ್ಲಿ ಮಚ್ಚ ಕೈಹಾಕಿದ್ದರಿಂದಾಗಿ ಮಚ್ಚನ ವಿರುದ್ಧ ಮುಖ್ಯಮಂತ್ರಿ ಕುಮಾರಸ್ವಾಮಿಯೇ ತಲೆಬಿಸಿ ಮಾಡಿಕೊಳ್ಳುವಂತಾಯ್ತು. ಆಗ ಬೆಂಗಳೂರಿನ ಜಾಯಿಂಟ್ ಕಮೀಷನರ್ ಆಗಿದ್ದದ್ದು ಗೌಡರ ಕುಟುಂಬದ ಪರಮಾಪ್ತ ನಾರಾಯಣ ಗೌಡ. ಹೇಳಿಕೇಳಿ ಜೆಡಿಎಸ್ ಸರ್ಕಾರ ಬೇರೆ ಇತ್ತಲ್ಲ. ಮಚ್ಚನ ಸುತ್ತ ಹರಡಿಕೊಂಡಿದ್ದ ಸಾವಿನ ಬಲೆ ಮತ್ತಷ್ಟು ಬಿಗಿಯಾಗುತ್ತಲೇ ಹೋಯಿತು.



ಇನ್ಸ್‌ಪೆಕ್ಟರ್ ಸುಬ್ಬಣ್ಣ

ಅದು 2005ರ ಜೂನ್ ಇಪ್ಪತ್ತೊಂಭತ್ತು. ಗೊಲ್ಲರಹಟ್ಟಿ ಸಮೀಪದ ತನ್ನ ಅನಿಬೆಸೆಂಟ್ ಸ್ಕೂಲಿನಿಂದ ಹೊರಬಿದ್ದ ಮಚ್ಚನ ಪ್ರಾಣ ಸ್ನೇಹಿತ ಜಾನಿ ಇನ್ನೇನು ಕಾರು ಹತ್ತಬೇಕೆನ್ನುವಷ್ಟರಲ್ಲಿ ಎದುರಿನಿಂದ ಬಂದ ಟಾಟಾ ಸುಮೋ ಒಂದು ಜಾನಿಯ ಕಾರಿಗೆ ಡಿಕ್ಕಿ ಹೊಡೆಯಿತು. ಏನಾಗುತ್ತಿದೆ ಎಂದು ಜಾನಿಗೆ ಅರ್ಥವಾಗುವ ಮೊದಲೇ ಸುಮೋದಿಂದ ಹೊರಬಿದ್ದ ಐದಾರು ಮಂದಿ ಹುಡುಗರು ಲಾಂಗ್ ಎತ್ತಿಕೊಂಡಿದ್ದೇ ಜಾನಿಯತ್ತ ನುಗ್ಗುತ್ತಿದ್ದರು. ಬಹುಶಃ ಜಾನಿಯ ಆಯಸ್ಸಿನ್ನೂ ಗಟ್ಟಿ ಇತ್ತೇನೊ. ತನ್ನದೇ ಸ್ಕೂಲಿನ ಒಳಕ್ಕೆ ಓಡಿದ್ದೇ ಬದುಕುಳಿದುಬಿಟ್ಟ.

ಮಾಮೂಲಿನಂತೆ ಜಾನಿ ಕಡಬಗೆರೆಯ ಪಾಯ್ಸನ್ ರಾಮ ಮತ್ತು ಕಾಮಾಕ್ಷಿಪಾಳ್ಯದ ಗೋಪಾಲಯ್ಯನ ವಿರುದ್ಧ ದೂರು ಕೊಟ್ಟನಾದರೂ ಆವತ್ತು ತನ್ನತ್ತ ಮಚ್ಚು ಬೀಸಿದವನು ಕತ್ರಿಗುಪ್ಪೆ ಬ್ಯಾಂಕ್ ಕಾಲೋನಿಯ ನಟೋರಿಯಸ್ ಸುಪಾರಿ ಕಿಲ್ಲರ್ ಬುಳ್ಳಾ ಅಲಿಯಾಸ್ ಗುರುಮೂರ್ತಿ ಎಂದೂ, ಆತನಿಗೆ ತನ್ನನ್ನು ಮುಗಿಸಲು ಸುಪಾರಿ ಕೊಟ್ಟವನು ತಿಮ್ಮೇನಹಳ್ಳಿ ಸೂರಿ ಎಂದೂ ಜಾನಿಗಾಗಲಿ, ಮಚ್ಚನಿಗಾಗಲಿ ಗೊತ್ತೇ ಆಗಲಿಲ್ಲ.

ತಮ್ಮಯ್ಯನ ಕೊಲೆ ಕೇಸಿನಲ್ಲಿ ಗೋವಿಂದನ ಜೊತೆ ಜೈಲು ಪಾಲಾಗಿದ್ದ ಸೂರಿ ಜೈಲಲ್ಲೇ ಬಲಿತುಬಿಟ್ಟಿದ್ದ. ಕೊರಂಗು-ಸುನೀಲರ ಸಿಂಡಿಕೇಟಿನ ವಿರುದ್ಧ ಸೂರಿ ಜೈಲೊಳಗೆ ಕೂತೇ ಎಂಥಾ ಚಕ್ರವ್ಯೂಹ ರಚಿಸಿದ್ದನೆಂದರೆ, ಪೀಣ್ಯದ ಶಿವಮೊಗ್ಗ ನಾಗ, ಬನಶಂಕರಿ ಅರಸಯ್ಯ, ಸೈಕಲ್ ರವಿ, ಯಶವಂತಪುರದ ವೆಂಕಿ, ಇಟ್ಟಮಡು ಬಾಬು, ಕಿಲ್ಲರ್ ಬುಳ್ಳಾ, ಗೂಳಿ ಬಸವ, ಕಡಬಗೆರೆ ರಾಮ; ಹೀಗೆ ರಕ್ತಪಿಪಾಸುಗಳ ಹಿಂಡನ್ನೇ ಸೂರಿ ಸಂಘಟಿಸಿಬಿಟ್ಟಿದ್ದ. ಒಂದೆಡೆ ಸುನೀಲನನ್ನೂ ಮತ್ತೊಂದೆಡೆ ಕೊರಂಗುನನ್ನೂ ಮಗದೊಂದೆಡೆ ಮಚ್ಚನನ್ನು ಮುಗಿಸಲು ಹೊಂಚು ಹಾಕುತ್ತಿದ್ದ ಸೂರಿಗೆ ಸಲೀಸಾಗಿ ಸಿಗುವಂತಿದ್ದವನು ಜಾನಿ ಮಾತ್ರ. ಆತನನ್ನು ತೆಗೆದುಬಿಟ್ಟರೆ ಮಚ್ಚನ ಅರ್ಧ ತಾಕತ್ತು ಉಡುಗಿ ಹೋಗುತ್ತದೆ ಎಂಬುದು ಸೂರಿಯ ಲೆಕ್ಕಾಚಾರವಾಗಿತ್ತು. ಆದರೆ ಜಾನಿಯ ಆಯಸ್ಸಿನ್ನೂ ಗಟ್ಟಿಯಿತ್ತಲ್ಲ-

ಹಾಗಂತ ಜೆಡಿಎಸ್ ವಲಯದಲ್ಲಿ ಪ್ರಭಾವಿಯಾಗಿದ್ದ ಡಾಬಾ ಸೀನ ಸುಮ್ಮನಾಗಲಿಲ್ಲ. ಅದಕ್ಕೆ ಒತ್ತಾಸೆಯಾಗಿ ಮುಲಾಮನೂ ನಿಂತುಬಿಟ್ಟಿದ್ದ. ಇದ್ಯಾವುದರ ಕಿಂಚಿತ್ತೂ ಪರಿವೆಯಿಲ್ಲದೇ ಕಾಮಾಕ್ಷಿಪಾಳ್ಯದ ಕೌನ್ಸಿಲರ್ ಆಗುವ ಆಸೆ ಹೊತ್ತು ದಿನಕ್ಕೊಂದು ಆರ್ಕೆಸ್ಟ್ರಾ ಇತ್ಯಾದಿ ಕಾರ್ಯಕ್ರಮಗಳಲ್ಲಿ ಮಚ್ಚ ತಲ್ಲೀನನಾಗಿದ್ದ. ಆತನಿಗರಿವಿಲ್ಲದಂತೇ ಪೀಣ್ಯದ ಇನ್ಸ್‌ಪೆಕ್ಟರ್ ಸುಬ್ಬಣ್ಣ ಯಾವ ಪರಿ ಆತನ ಬೆನ್ನಿಗೆ ಬಿದ್ದರೆಂದರೆ ತನ್ನ ಪಾಡಿಗೆ ತಾನು ಮನೆಯಲ್ಲಿ ಮಲಗಿದ್ದ ಮಚ್ಚನನ್ನು ಎಳೆದೊಯ್ದು ಯಾವುದೋ ಸುಳ್ಳು ಕೇಸು ಹಾಕಿ ಬೆಳಗಾವಿ ಜೈಲಿಗೆ ಹಾಕಿಬಿಟ್ಟರು. ಅದರ ಬೆನ್ನಲ್ಲೇ ಬಸವೇಶ್ವರನಗರದ ಇನ್ಸ್‌ಪೆಕ್ಟರ್ ಶಿವಲಿಂಗೇಗೌಡರು ಒಂದಾನೊಂದು ಕಾಲಕ್ಕೆ ಮಚ್ಚನ ಕಾರಿಗೆ ಡ್ರೈವರ್ ಆಗಿದ್ದ ಎಂಬ ಒಂದೇ ಕಾರಣಕ್ಕೆ ಕಮಲಾನಗರದ ತೂತ್‌ರವಿ ಮತ್ತು ಆತನ ಕಡೆಯ ಹುಡುಗರನ್ನೊಯ್ದು ಲಾಕಪ್ಪಿಗೆ ದಬ್ಬಿದ್ದರು. ವಿಜಯನಗರದ ಎಸಿಪಿ ಭಂಡಾರಿ, ಸಿಸಿಬಿ, ಹೀಗೆ ಸಿಕ್ಕಸಿಕ್ಕ ಪೊಲೀಸರಿಗೆಲ್ಲ ಮಚ್ಚನ ವಿರುದ್ಧ ಪೆಟಿಷನ್ ಕೊಡಲಾಗಿತ್ತು. ಇದ್ಯಾವುದರ ಕಾಟವೇ ಬೇಡವೆಂದು ಮಚ್ಚ ತನ್ನ ಪತ್ನಿ ಗಿರಿಜಾಳ ಊರಾದ ಬಂಗಾರಪೇಟೆ ಸೇರಿಕೊಂಡರೆ ಅಲ್ಲೂ ಆತನ ಹತ್ಯೆಗೆ ಯತ್ನಗಳಾದವು.

ವಾಪಸ್ಸು ಬೆಂಗಳೂರಿಗೆ ಬಂದ ಮಚ್ಚ ಸಣ್ಣಕ್ಕಿ ಜೈಲಿನ ತನ್ನ ಮನೆ ಖಾಲಿ ಮಾಡಿಕೊಂಡು ಯಲಹಂಕದಲ್ಲೊಂದು ಮನೆ ಮಾಡಿದರೆ ಇನ್ಸ್‌ಪೆಕ್ಟರ್ ಸುಬ್ಬಣ್ಣ ಅಲ್ಲಿಗೂ ದಾಳಿಯಿಟ್ಟರು. ರೋಸತ್ತ ಮಚ್ಚ ಜೊತೆಗೆ ಹುಡುಗರನ್ನು ಕಟ್ಟಿಕೊಂಡು ಓಡಾಡುವುದನ್ನೇ ಬಿಟ್ಟುಬಿಟ್ಟ. ಒಂದಾನೊಂದು ಕಾಲಕ್ಕೆ ಯಾವ ಮುಖ್ಯಮಂತ್ರಿಯನ್ನೂ ಮೀರಿಸುವಂತೆ ಹತ್ತಾರು ಕಾರುಗಳಲ್ಲಿ ಹಿಂಡುಗಟ್ಟಲೇ ಹುಡುಗರ ಸಮೇತ ಬಂದಿಳಿಯುತ್ತಿದ್ದವನು ಒಂದೇ ಕಾರಲ್ಲಿ ಕೇವಲ ಮೂರ್‍ನಾಲ್ಕು ಮಂದಿ ಗೆಳೆಯರ ಜೊತೆ, ತನ್ನ ರಕ್ಷಣೆಗೆಂದು ಖರೀದಿಸಿ ಇಟ್ಟುಕೊಂಡಿದ್ದ ರಿವಾಲ್ವರ್ ಅನ್ನೂ ಕೊಂಡೊಯ್ಯದೇ ನಿರಾಯುಧನಾಗಿ ಓಡಾಡಲಾರಂಭಿಸಿದ. ಕಡಬಗೆರೆ ರಾಮ ಮತ್ತು ಮುಲಾಮರ ಜೊತೆ ತನ್ನ ವಿರುದ್ಧ ತಿಮ್ಮೇನಹಳ್ಳಿ ಸೂರಿಯೂ ಕೈಜೋಡಿಸಿದ್ದಾನೆಂಬ ಸುಳಿವು ಸಿಕ್ಕ ನಂತರವೂ ಅದನ್ನು ನಿರ್ಲಕ್ಷಿಸಿಬಿಟ್ಟ. ಯಲಹಂಕದ ಮನೆ ಮೇಲೆ ಇನ್ಸ್‌ಪೆಕ್ಟರ್ ಸುಬ್ಬಣ್ಣ ದಾಳಿ ನಡೆಸಿ ಊರು ಬಿಡುವಂತೆ ಧಮಕಿ ಹಾಕಿದ ನಂತರವೂ ಪಕ್ಕದ ಜ್ಯುಡಿಷಿಯಲ್ ಲೇಔಟಿನ ಹದಿನಾರನೇ ಮೇನ್‌ನಲ್ಲಿ 942 ನೇ ನಂಬರಿನ ಸಾಧಾರಣ ಮನೆಯೊಂದನ್ನು ಭೋಗ್ಯಕ್ಕೆ ಹಾಕಿಸಿಕೊಂಡನೇ ಹೊರತು ಊರು ಬಿಡಲಿಲ್ಲ. ತನ್ನ ಸುತ್ತ ಕವಿದ ಸಾವಿನ ಹುತ್ತದ ಪರಿವೆಯಿದ್ದೂ ಅದನ್ನು ನಿರ್ಲಕ್ಷಿಸಿಬಿಟ್ಟ.

ಮತ್ತು ಅದೇ ಕಾರಣಕ್ಕೆ, 2005 ರ ನವೆಂಬರ್ 1 ರ ಕನ್ನಡ ರಾಜ್ಯೋತ್ಸವದ ದಿನದಂದು ಅಂತಿಮವಾಗಿ ತಲೆದಂಡ ತೆತ್ತ. ಆತನ ಕೊಲೆಗೆಂದು ನಡೆದ ತಯಾರಿಯಿತ್ತಲ್ಲ, ಬಹುಶಃ ಅಂಥಾದೊಂದು ಸಂಘಟಿತ ಹತ್ಯಾಕಾಂಡವನ್ನು ಆತನಕ ಬೆಂಗಳೂರು ಭೂಗತಲೋಕ ಕಂಡೇ ಇರಲಿಲ್ಲ!

(ಮುಂದುವರೆಯುವುದು)

ಮಂಗಳೂರು ಮಹಾನಗರ ಪಾಲಿಕೆಯ ಐಲು-ಪೈಲುಗಳು

ಮಂಗಳೂರು ಮಹಾನಗರ ಪಾಲಿಕೆಯ ಐದು ವರ್ಷಗಳ ಆಡಳಿತ ಅವಧಿ ಇದೇ ಏಪ್ರಿಲ್ ತಿಂಗಳ ಅಂತ್ಯಕ್ಕೆ ಸಮಾಪ್ತಿಗೊಳ್ಳಲಿದೆ. ಕಾಂಗ್ರೆಸ್ ಆಡಳಿತ ಬಿ.ಜೆ.ಪಿ. ಪ್ರತಿಪಕ್ಷದ ಮಂಗಳೂರು ಮ.ನ.ಪಾ.ದಲ್ಲಿ ಮೇಯೋದರಲ್ಲಿ ಒಬ್ಬರಿಗೊಬ್ಬರು ಪೈಪೋಟಿ ನಡೆಸುತ್ತಾರೆಯೇ ಹೊರತು, ಯಾವುದೇ ಭಿನ್ನಾಭಿಪ್ರಾಯವಿಲ್ಲ. ಇದೀಗ ಅಧಿಕಾರ ಕಳೆದುಕೊಳ್ಳಲು ದಿನ ಹತ್ತಿರವಾಗುತ್ತಿದ್ದಂತೆಯೇ ಎಲ್ಲಿ ಎಷ್ಟು ಆಗುತ್ತದೆ ಎಂದು ಕಮಾಯಿಸುವುದರಲ್ಲಿ ಕಾರ್ಪೊರೇಟರ್‌ಗಳ ನಡುವೆ ಏರ್ಪಟ್ಟಿರುವ ಸ್ಪರ್ಧೆ ಹೇಸಿಗೆ ಹುಟ್ಟಿಸುತ್ತಿದೆ.

ಮಂಗಳೂರಿನಲ್ಲಿ ರಿಕ್ಷಾ ಓಡಿಸುತ್ತಾ ಹೊಟ್ಟೆ ಹೊರೆಯುತ್ತಿದ್ದ ಕಮಲಾಕ್ಷ ಕುಂದರ್‌ನ ಶನಿಕಾಟ ತೊಲಗಲು ಕಾರ್ಪೊರೇಟರ್ ಆಗಬೇಕಾಯಿತು. ವಿವಿಧ ಫೈನಾನ್ಸ್‌ಗಳಲ್ಲಿದ್ದ 20 ಲಕ್ಷ ರೂ. ಸಾಲವೆಲ್ಲಾ ಚುಕ್ತಾ ಆಗಿ, ಎರಡು ಅಂಬಾಸಿಡರ್ ಕಾರುಗಳನ್ನು ಖರೀದಿಸಿ ಮಗನ ಹೆಸರಲ್ಲಿ ಕಾರ್ಪೊರೇಶನ್ನಿಗೇ ಬಾಡಿಗೆಗೆ ಬಿಟ್ಟು ಬದುಕಿಗೊಂದು ನೆಲೆ ಕಲ್ಪಿಸಿಕೊಂಡವರು ಕುಂದರ್. ಮಾಡಲೊಂದು ಉದ್ಯೋಗವಿಲ್ಲದೇ ಬಚ್ಚಾಲಿಯಂತೆ ತಿರುಗುತ್ತಿದ್ದ ಕಮಲಾಕ್ಷ ಸಾಲ್ಯಾನ್ ಅದ್ಯಾವ ಮಾಯಕದಿಂದ ಕಾರ್ಪೊರೇಟರ್ ಆದರೋ ಮಂಗಳೂರು ಕೆ.ಎಸ್.ಆರ್.ಟಿ.ಸಿ.ಯ ಬಳಿಯ ಬಿಲ್ಡಿಂಗ್‌ವೊಂದಕ್ಕೆ ದಾರಿ ಮಾಡಿಕೊಟ್ಟು ಕೃತಾರ್ಥರಾದುದಕ್ಕೆ ಗಿಫ್ಟ್ ಆಗಿ ಒಂದು ಫ್ಲಾಟ್ ಅನ್ನೇ ಪಡೆದುಬಿಟ್ಟರು. ಜೊತೆಗೇ ಓಡಾಡಲೊಂದು ಜೆನ್ ಕಾರೂ ಬಂತು.

ಮಾಜಿ ಮೇಯರ್ ಅಶ್ರಫ್ ಒಂದು ಕಾಲಕ್ಕೆ ಬಂದರಿನಲ್ಲಿ ಮೀನು ಏಲಂ ಕರೆಯುತ್ತಿದ್ದ ಆಸಾಮಿ. ಅದ್ಯಾವ ಹೊತ್ತಿಗೆ ಪೂಜಾರಿಯ ಕಣ್ಣಿಗೆ ಬಿದ್ದು ಟಿಕೇಟು ಗಿಟ್ಟಿಸಿಕೊಂಡರೋ.... ಮುಸ್ಲಿಮರ ಭದ್ರಕೋಟೆ ಬಂದರಿನಲ್ಲಿ ಅದೃಷ್ಟದ ಬಾಗಿಲು ತೆರೆಯಿತು. ಒಂದಷ್ಟು ಕಸರತ್ತುಗಳ ನಡುವೆ ಮೇಯರ್ ಗಿರಿಯೂ ಲಭಿಸಿತು. ಮೇಯರ್ ಆದದ್ದೇ ಚೆನ್ನಾಗಿ ಮೇದ ಅಶ್ರಫ್ ಬಂದರು ಯತೀಂ ಖಾನದ ಬಳಿ 9.50 ಲಕ್ಷಕ್ಕೆ ಮನೆಯೊಂದನ್ನು ಖರೀದಿಸಿದರು. ಅದನ್ನು 25 ಲಕ್ಷ ಖರ್ಚು ಮಾಡಿ ಅರಮನೆಯಂತೆ ಶೃಂಗರಿಸಿದರು. ಇನ್ನು ಓಡಾಟಕ್ಕೆ ಒಂದು ಸಾಲದಕ್ಕೆ ಎರಡು ಕಾರುಗಳು! ಅಂತೆಯೇ ಕಾರ್ಪೊರೇಟರ್ ಆಗಿ ಬಡತನದಿಂದ ಮುಕ್ತಿ ಪಡೆದ ಇನ್ನೋರ್ವರೆಂದರೆ ಮಹಾಬಲ ಮಾರ್ಲ.

ಮೇರಿಹಿಲ್‌ನಲ್ಲಿ ಟೈಲರ್ ಆಗಿದ್ದ ಈತ ಆ ವೃತ್ತಿ ಮರೆತು ಕಾಲವಾಯಿತು. ಕಾರ್ಪೊರೇಟರ್ ಆದದ್ದೇ ಬಜ್ಜೈ ಮ್ಯೂಸಿಯಂ ಬಳಿ ಫ್ಲಾಟ್ ಖರೀದಿಸಿ ಜೆನ್ ಕಾರಲ್ಲಿ ಜುಂ ಆಗಿ ಓಡಾಡುತ್ತಾ ಇರೋದು ಹಲವರ ಕಣ್ಣು ಕುಕ್ಕುತ್ತಿದೆ. ಇನ್ನು ತಾನು ಮೇಯರ್ ಆಗಿ ಮಾಜಿ ಆದಬಳಿಕ ಕಾಲಕಾಲಕ್ಕೆ ಬಂದ ಮೇಯರ್‌ಗಳ ಬಾಲಂಗೋಚಿಯಂತೆ ತಿರುಗಿ ಕಮಾಯಿಸುವ ಶಶಿಧರ ಹೆಗ್ಡೆ ಮಾತಿನಲ್ಲೇ ರೈಲು ಹತ್ತಿಸುವ ದಿವಾಕರ್, ಕಾರ್ಪೊರೇಶನ್ನಿನಲ್ಲಿ ಇಂಜಿನಿಯರ್ ಆಗಿದ್ದ ತರುಣಿಯನ್ನೇ ಬುಟ್ಟಿಗೆ ಹಾಕಿ ಮದುವೆಯಾದ ಪುರಂದರ. ಹರಕು ಬಾಯಿಯ ಮೇರಿಯಮ್ಮ ಥಾಮಸ್ ಇವರದೆಲ್ಲ ಒಂದಲ್ಲ ಒಂದು ಕತೆ ಬರೆಯುತ್ತಾ ಹೋದರೆ ನೂರು ಪುಟ ಸಾಲದು.

ಅಂತೂ ಮುಂದಿನ ಸಲ ಕಾರ್ಪೊರೇಟರ್ ಆಗುವ ಕನಸು ಬಿಟ್ಟು ಸಿಕ್ಕಿದಷ್ಟನ್ನು ಬಾಚುವುದರಲ್ಲಿ ಬ್ಯುಸಿಯಾಗಿದ್ದಾರೆ. ಹಾಗಂತ ಇವರೆಲ್ಲರಿಗೂ ಅಪವಾದವೆಂಬಂತೆ ಒಂದೇ ಒಂದು ಚಿಕ್ಕಾಸು ಮುಟ್ಟದ ಪ್ರಾಮಾಣಿಕ ಕಾರ್ಪೊರೇಟರ್‌ಗಳು ಇದ್ದಾರೆ. ಉಪಮೇಯರ್ ಸಲೀಂ, ದೇವಾನಂದ ಪೈ, ವಿಶ್ವನಾಥ್ ಮತ್ತು ವೆಂಕಟೇಶ್ ಆಚಾರ್ ಈ ನಾಲ್ಕು ಮಂದಿ ಎಂಜಲು ಕಾಸಿಗೆ ಕೈಯೊಡ್ಡದೇ ಜನಾನುರಾಗಿಗಳಾಗಿ ಉಳಿದುಬಿಟ್ಟದ್ದಾರೆ.

ಕವಿತಾ ಸನಿಲ್ ಕಾರುಬಾರು

ಮ.ನ.ಪಾ.ದ ವರ್ಕ್ಸ್ ಕಮಿಟಿ ಎಂದರೆ ಮೇಯೋದಕ್ಕೆ ಹುಲುಸಾದ ಹುಲ್ಲುಗಾವಲು. ಈ ಬಾರಿ ಇದಕ್ಕೆ ಕಾಂಗ್ರೆಸ್‌ನ ಕಮಲಾಕ್ಷ ಸಾಲ್ಯಾನ್ ಹೆಸರು ಹೈಕಮಾಂಡ್‌ನಿಂದ ತೀರ್ಮಾನವಾಗಿತ್ತು. ಅದಕ್ಕೆ ಅಡ್ಡ ಬಂದಾಕೆ ಕವಿತಾ ಸನಿಲ್. "ಕಳೆದ ಸ್ಥಾಯಿ ಸಮಿತಿ ಅಧ್ಯಕ್ಷಗಿರಿ ಕೊಡುತ್ತೇನೆಂದು ಕೊಟ್ಟಿಲ್ಲ. ಈ ಬಾರಿ ನನಗೆ" ಎಂದು ಗಟ್ಟಿನಿಂತಳು. ಚುನಾವಣೆ ನಡೆಯಿತು. ಒಟ್ಟು ಏಳು ಮಂದಿ ಸದಸ್ಯರ ಈ ಕಮಿಟಿಯಲ್ಲಿ ಬಿಜೆಪಿಯ ಇಬ್ಬರನ್ನು ಮತ್ತು ಕಾಂಗ್ರೆಸ್‌ನ ಜೇಮ್ಸ್ ಡಿಸೋಜರನ್ನು ಬುಟ್ಟಿಗೆ ಹಾಕಿಕೊಂಡ ಕವಿತಾ ಸನಿಲ್ 43 ಮತಗಳ ಅಂತರದಿಂದ ಗೆದ್ದು ಅಧ್ಯಕ್ಷೆಯಾದಳು.

ಮಂಗಳೂರು ಮ.ನ.ಪಾ ಯಾವುದೇ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಿ ಅದು ಓ.ಕೆ. ಆಗಬೇಕೆಂದರೆ ಅದಕ್ಕೆ ವರ್ಕ್ಸ್ ಕಮಿಟಿಯ ಹಸಿರು ನಿಶಾನೆ ಬೇಕು. ಅದು ಆಗಬೇಕಾದರೆ ಆಯಾ ವಾರ್ಡ್ ವ್ಯಾಪ್ತಿಯ ಗುತ್ತಿಗೆದಾರ ಕಡ್ಡಾಯವಾಗಿ ಕಾಣಿಕೆ ಕಕ್ಕಬೇಕು. ಆನಂತರವೇ ಸದರಿ ಅಂದಾಜು ಪಟ್ಟಿಗೆ ಸಹಿ ಜಡಿದು ಪರಿಷತ್ ವಿಭಾಗಕ್ಕೆ ಕಳುಹಿಸಲಾಗುತ್ತದೆ. ಅಲ್ಲಿಂದ ಕಮಿಟಿಗೆ ಬಂದು ಓ.ಕೆ. ಆಗುತ್ತದೆ. ತಿಂಗಳೊಂದರಲ್ಲಿ ಸರಾಸರಿ 500 ಫೈಲುಗಳು ಈ ರೀತಿ ವಿಲೇವಾರಿಯಾಗುತ್ತದೆ. ಪ್ರತಿ ಫೈಲ್‌ಗೆ ರೂ. 500 ಹಳೆಯ ಮಾಮೂಲಾಗಿತ್ತು. ಕಳೆದ ಸಾಲಿನಲ್ಲಿ ವರ್ಕ್ಸ್ ಸಮಿತಿ ಅಧ್ಯಕ್ಷ ಭಾಸ್ಕರ ಮೊಯಿಲಿ ಅದನ್ನು ರೂ. 1000ಕ್ಕೆ ಏರಿಸಿದ್ದರು. ಕವಿತಾ ಸನಿಲ್ ಅದನ್ನೀಗ ರೂ. 1,500ಕ್ಕೆ ಏರಿಸಿದ್ದಾರೆ. ಇದ್ಯಾಕೆಂದು ಕೇಳಿದರೆ "ನನಗೆ ಓಟುಕೊಟ್ಟ ಬಿಜೆಪಿ ಕಾರ್ಪೊರೇಟರ್‌ಗಳಾದ ಪ್ರೇಮಾನಂದ ಮತ್ತು ಮುರಳೀಧರರಿಗೆ ತಲಾ 500 ಪಾಲು ಕೊಡಬೇಕು" ಅನ್ನುವುದು ಕವಿತಾಳ ಸಮರ್ಥನೆ. 1976 ಕೆ.ಎಂ.ಸಿ. ಕಾಯಿದೆ 183ರ ಪ್ರಕಾರ ರೂ. 10,000ಕ್ಕೆ ಮೇಲ್ಪಟ್ಟ ಕಾಮಗಾರಿಗಳಿಗೆ ಟೆಂಡರು ಕರೆಯಬೇಕು. ಆದರೆ ಕೆಲವೊಂದು ತುರ್ತು ಸಂದರ್ಭದಲ್ಲಿ ಮತ್ತು ಆಪತ್ಕಾಲದಲ್ಲಿ ಅದನ್ನು ಬಿಟ್ಟು ನೇರ ಗುತ್ತಿಗೆ ನೀಡಬಹುದು. ಆದರೆ ಮುಕ್ಕುವುದಕ್ಕೆಂದೇ ಎಲೆ ಹಾಸಿ ಕೂತಿರುವ ಕವಿತಾ ಸನಿಲ್, ಎಲ್ಲಾ ಕಾಮಗಾರಿಗಳನ್ನು ಕಂಡ ಕಂಡ ಗುತ್ತಿಗೆದಾರರಿಗೆ ನೇರ ಗುತ್ತಿಗೆ ನೀಡಿ ಕಮಾಯಿ ಮಾಡುತ್ತಿದ್ದಾಳೆ. ಆದರೆ ಇದನ್ನು ಯಾರೂ ಪ್ರಶ್ನಿಸುವವರೇ ಇಲ್ಲ, ಯಾಕೆಂದರೆ ಈ ಕಾಮಗಾರಿಗಳಲ್ಲಿ ಹಳೆಯ ಕಾಮಗಾರಿಗಳಿಗೆ 20%, ಹೊಸ ಕಾಮಗಾರಿಗೆ 10%, ಕಾರ್ಪೊರೇಟರ್‌ಗಳಿಗೆ ಆಯಾಚಿತವಾಗಿ ಸಂದಾಯವಾಗುತ್ತದೆ.

ಕಾಣೆಯಾದ ಫೈಲು

ನವೀನ್‌ಚಂದ್ರ, ಬಿಜೆಪಿ ಕಾರ್ಪೊರೇಟರ್, ಭವಾನಿ ಬಿಜೆಪಿ ಕಾರ್ಯಕರ್ತ ಕಂ ಕಂಟ್ರಾಕ್ಟರ್. ಈತ ನವೀನ್ ಚಂದ್ರ ವಾರ್ಡ್‌ನಲ್ಲಿ 3 ಲಕ್ಷದ ಕಾಮಗಾರಿ ಮಾಡಿಸಿದ್ದ, ಅಂತೆಯೇ ಆತನ ವಾರ್ಡ್‌ನಲ್ಲಿನ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ 3 ಫೈಲುಗಳು ವರ್ಕ್ಸ್ ಕಮಿಟಿ ಅಧ್ಯಕ್ಷೆ ಕವಿತಾ ಸನಿಲ್ ಬಳಿ ಬಂತು. ಭವಾನಿ ಆಕೆಗೆ ಫೈಲ್ ಒಂದಕ್ಕೆ ತಲಾ 500 ರಂತೆ ರೂ. 1500 ಕೊಟ್ಟ. ಆಕೆ ಇನ್ನೂ 3000 ಕೊಡುವಂತೆ ಪ್ರಸ್ತಾಪವಿಟ್ಟಳು. ಇದು ಗೊತ್ತಾಗಿ ಕಾರ್ಪೊರೇಟರ್ ನವೀನ್ ಕವಿತಾಳನ್ನು ತರಾಟೆಗೆ ತೆಗೆದುಕೊಂಡರೆ ಆಕೆ ಬಿಜೆಪಿಯ ಕಾರ್ಪೊರೇಟರ್‌ಗಳಿಗೆ ತಲಾ 500 ಕೊಡಬೇಕೆಂದು ಹೇಳಿ ಬಾಯಿ ಮುಚ್ಚಿಸಿದ್ದಳು. ದೂರು ಬಿಜೆಪಿ ಅಧ್ಯಕ್ಷ ಮೋನಪ್ಪ ಭಂಡಾರಿಗೆ ಹೋಯಿತು. ಆತ ಮುರಳೀಧರನನ್ನು ಕರೆದು ಇದು ಪಕ್ಷದ ವಿಷಯ, ತಕ್ಷಣ ಆ ಮೂರು ಫೈಲುಗಳನ್ನು ಕಮಿಟಿಗೆ ಇಡುವುದು ನಿಮ್ಮ ಜವಾಬ್ದಾರಿ ಅಂದರು. ಆಯ್ತು ಅಂತ ತಲೆಯಾಡಿಸಿ ಮುರಳೀಧರ ಈಚೆ ಬರುವುದಕ್ಕೂ ಆ ಮೂರು ಫೈಲುಗಳು ಕಚೇರಿಯಿಂದ ಮಾಯವಾಗುವುದಕ್ಕೂ ಸರಿಯಾಯಿತು. ಸಹಜವಾಗಿ ಈ ಮಾಯದ ಹಿಂದೆ ಮುರಳೀಧರನ ಹೆಸರು ಕೇಳಿಬಂದು, ಅವರೊಳಗೆ ಜಗಳವೂ ಆಯಿತು. ಇದಾಗಿ 15 ದಿವಸ ಆಯಿತು. ಕವಿತಾ ಸನಿಲ್ ಸಹಿ ಹಾಕಿ ಕಳುಹಿಸಿದ ಆ ಮೂರು ಫೈಲುಗಳು ಇನ್ನೂ ಪತ್ತೆಯಾಗಿಲ್ಲ.


ಸಾಕ್ಷಾತ್ ಮಾರ್ಕೆಟ್ಟೇ ಆಗಿಹೋಗಿರುವ ಮ.ನ.ಪಾದಲ್ಲಿ ರೂಲ್ಸ್-ರೆಗ್ಯುಲೇಷನ್ ಗಳೆಲ್ಲಾ ಸತ್ತಿವೆ. ಇಂತಹ ಐಲು ಪೈಲುಗಳು ಮಾಮೂಲು ಎನ್ನುವಂತೆ ನಡೆಯುತ್ತವೆ. ಬೇಲಿಯೇ ಎದ್ದು ಹೊಲ ಮೇಯುವಾಗ ಇಲ್ಲಿ ಕೇಳುವವರ್ಯಾರು?

-ಪ್ರಕಾಶ್ ಪಿಂಟೋ

ಶ್ರೀರಾಮುಲು ರಾಜೀನಾಮೆ

'ಮಂತ್ರಿ ಶ್ರೀರಾಮುಲು ರಾಜೀನಾಮೆ' ಅನ್ನುವ ಸುದ್ದಿಯನ್ನು ಪತ್ರಿಕೆಯಲ್ಲಿ ನೋಡಿದಾಗ ಆ ಹೆಸರಿನವನೂ ಒಬ್ಬ ಮಂತ್ರಿಯಾಗಿದ್ದ ಅಂತ ತಿಳೀತು. ಅರೆರೆ ಅಧಿಕಾರ ಅಂತ ಒಂದು ಬಂದಿರುವಾಗ ಮಜಾ ಉಡಾಯಿಸದೆ ಈ ರೀತಿ ಮಂಕು ಮಂಕಾಗಿ ರಾಜೀನಾಮೆ ಕೆರೆದು ಬಿಸಾಕೋದು ತರವಲ್ಲ ಅನ್ನಿಸಿತು. ಹೀಗೆ ಮಾಡಬೇಕಾದರೆ ಬಲವತ್ತರವಾದ ಕಾರಣಾನೂ ಇರಬೇಕು ಅಂದುಕೊಂಡೆ. ಅದೇನು ನೋಡೋಣ ಅಂತ ಪತ್ರಿಕೆ ಓದತೊಡಗಿದೆ.

ಅವರು ರಾಜೀನಾಮೆ ನೀಡಿದ್ದು ನ್ಯಾಯಸಮ್ಮತ ಆಗಿತ್ತು. ಅಲ್ಪಸಂಖ್ಯಾತರ ನಾಯಕನೊಬ್ಬನನ್ನು ಜೆಡಿಎಸ್ ದುರುಳರು ಕೊಲೆ ಮಾಡಿದ್ದರಂತೆ. ಅದಕ್ಕೇ ಅವರನ್ನ ಬಂಧಿಸಿ ಅಂತ ಪೊಲೀಸ್ ಠಾಣೆ ಎದುರು ಧರಣಿ ಕೂತರಂತೆ. ಅಲ್ಲಿ ಸೇರಿದ್ದ ಜನರ ಮುಂದೆ ಮಾಧ್ಯಮ ಪ್ರತಿನಿಧಿಗಳಿಗೆ ನಾನು ರಾಜೀನಾಮೆ ನೀಡಿದ್ದೇನೆ ಅಂತ ದೃಢೀಕರಿಸಿದರಂತೆ.



ತನ್ನ ಪಕ್ಷದ ಕಾರ್ಯಕರ್ತನೊಬ್ಬನ ಸಾವಿಗಾಗಿ ಮಂತ್ರಿ ಪದವಿಯನ್ನೇ ತೊರೆದ ಶ್ರೀರಾಮುಲು ನೀನು ಆ ಶ್ರೀರಾಮನಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಅಂದುಕೊಂಡೆ. ಈ ಶ್ರೀರಾಮುಲುಡು ಧರಣಿ ಕುಂತಿದ್ದು ಇದೇ ಮೊದಲಲ್ಲವಂತೆ. ಬಳ್ಳಾರಿ ವೈದ್ಯಕೀಯ ಕಾಲೇಜಿನ ವೈದ್ಯರು ಮಹಿಳಾ ರೋಗಿಗಳಿಗೆ ಹಿಂಸೆ ಕೊಡುತ್ತಾರೆ ಅಂತಾನೂ ಧರಣಿ ಕುಳಿತಿದ್ದರಂತೆ. ಬಳ್ಳಾರಿ ಜಿಲ್ಲೆಯ ಉಸ್ತುವಾರಿ ಮಂತ್ರಿಯನ್ನು ಕಿತ್ತಾಕಿದಾಗಲೂ ಹೀಗೇ ಮಾಡಿದ್ದರಂತೆ. ಇವೆಲ್ಲ ಸರ್ಕಾರಕ್ಕೆ ಮುಜುಗರ ತಂದಿರಬಹುದು. ಆದರೆ ತನಗೇ ಆಗಲಿ ಇತರರಿಗೇ ಆಗಲಿ ಅನ್ಯಾಯವಾದಾಗ ಪ್ರತಿಭಟನೆಯ ಮಾರ್ಗ ಹಿಡಿದ ಈ ಮಂತ್ರಿ ಚಳವಳಿಗಾರನೇ ಇರಬೇಕು ಅಂದುಕೊಂಡೆ.

ಆದರೇನಂತೀರಿ, ಅವರು ರಾಜೀನಾಮೆ ಪತ್ರ ನೀಡಿದ್ದು ಮುಖ್ಯಮಂತ್ರಿಗಳಿಗಲ್ಲ! ಯಡಿಯೂರಪ್ಪ ಹಾಗೂ ಸದಾನಂದಗೌಡ ಅವರಿಗೆ! ಅವರು ಸೋಮೇಶ್ವರ ಶತಕ ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. 'ಕೆಲವಂ ಬಲ್ಲವರಿಂದ ಕಲ್ತು' ಎಂಬ ಮಾತನ್ನು ಅಕ್ಷರಶಃ ಪರಿಪಾಲಿಸಿದಂತಿದೆ. ಅಂಬರೀಷ್ ತರಹಾನೆ ಇವರೂ ರಾಜೀನಾಮೆ ನೀಡಿದ್ದಾರೆ!

ಶ್ರೀರಾಮುಲು ಏನೋ ಒಬ್ಬ ರಾಜಕಾರಣಿ. ಈ ತರಹದ ಆಟಗಳೆಲ್ಲ ಅವರಿಗೆ ಮಾಮೂಲು. ನಮ್ಮ ಮೇಧಾವಿ ಪತ್ರಕರ್ತರಿದ್ದಾರಲ್ಲ.... ಅವರಿಗಾದರೂ ಇದು ಸುದ್ದಿಗಾಗಿ ನೀಡಿರುವ ರಾಜೀನಾಮೆ ಅಂತ ಹೊಳೆಯಲಿಲ್ಲವೆ? ಹಾಗೆ ಹೊಳೆದಿದ್ದರೆ ಯಾಕೆ ಮೊದಲ ಪುಟದ ಶೀರ್ಷಿಕೆ ಸುದ್ದಿ ಮಾಡಬೇಕಿತ್ತು? ಅಥವಾ ಈ ಸುದ್ದಿಪ್ರಿಯ ಸುದ್ದಿ ಮಾಧ್ಯಮದವರಿಗೂ 'ಸಂತಿಂಗ್' ತಿನ್ನಿಸಿದ್ದಾರಾ ಅಂತ....

* * * * * * * *

ಜ್ಞಾನೋದಯ ಆಯಿತೆ?

ಯಡ್ಡಿ ಕೈ ಎಂದರೆ ಸಾಕ್ಷಾತ್ ದಾನಶೂರ ಕರ್ಣನದ್ದೇ ಸೈ. ಅದಕ್ಕಿಂತ ಮಿಗಿಲು ಅಂದರೂ ಅತಿಶಯವಿಲ್ಲ. ಇವರ ಕೈ ಬೇಕು, ಅವನ ಕೈ ಬೇಡ ಅಂದರೂ ಸರಿ.

ಅನುಮಾನವೆ? ಬಜೆಟ್ ನೋಡಿ. ಹೇಗೆ ಹರಿದಿದೆ ಹಣ- ಧಾರ್ಮಿಕ ಸಂಸ್ಥೆಗಳಿಗೇ ನಾಚಿಕೆಯಾಗುವಷ್ಟು!

ಬದುಕುವ ಕಲೆ ಗೊತ್ತೆ ನಿಮಗೆ? ಇಲ್ಲವೆ, ಆಚಾರ್ಯ ರವಿಶಂಕರ ಗುರೂಜಿ ಮಠ ಸೇರಿ. ಕಲಿಯಿರಿ: ಬಡವರ ಭೂಮಿ ಕಬಳಿಸುವುದನ್ನ; ಜನರಿಗೆ ಮಂಕುಬೂದಿ ಎರಚುವುದನ್ನ!

ಈ ಕಲೆ ಅವರಿಗೆ ಸಿದ್ಧಿಸಿದ್ದು ಯಾವಾಗ?

ಗೊತ್ತಿಲ್ಲ, ಆದರೆ ಅವರಿಗೆ ಜ್ಞಾನೋದಯ ಆದದ್ದು ಭದ್ರಾ ಜಲಾಶಯದ ಬಳಿಯಂತೆ!

ಅಂದಮೇಲೆ ಅದು ಪರಮಪವಿತ್ರ ಪುಣ್ಯಕ್ಷೇತ್ರ. ಆದರ ಅಭಿವೃದ್ಧಿಗೆ ಯಡ್ಡಿ ಬಜೆಟ್‌ನಲ್ಲಿ ಹಣ!

ಅಲ್ಲ, ಈ ಗುರೂಜಿ ಭದ್ರಾ ಜಲಾಶಯ ಸುತ್ತಲಿನ ಪ್ರದೇಶಗಳಿಗೆ ಬರುವ ಮುನ್ನ ಜ್ಞಾನವೇ ಇರಲಿಲ್ಲವೆ? ಅಥವಾ ಆಗ ಅದು ಇದ್ದು ಈಗ.....!?

-ಎಚ್.ಎಲ್.ಕೆ

ಸಿಟಿ ಕಾಂಗ್ರೆಸ್ಸಿನ ಗಾರ್ಬೇಜ್ ಪಾಲಿಟಿಕ್ಸ್!


ಬೆಂಗಳೂರು ನಗರ ಕಾಂಗ್ರೆಸ್ ಅಧ್ಯಕ್ಷಗಿರಿಯ ಜಿದ್ದಾಜಿದ್ದಿಗೂ ಕಸದ ತೊಟ್ಟಿಗೂ ಏನು ಸಂಬಂಧ?



ದಿನೇಶ್ ಗುಂಡೂರಾವ್

ಇಲ್ಲದೆ ಹೋಗಿದ್ದರೆ ಮಾಜಿ ಮೇಯರ್ ರಾಮಚಂದ್ರಪ್ಪ ಈ ಹೊತ್ತಿಗಾಗಲೇ ಬೆಂಗಳೂರು ನಗರ ಕಾಂಗ್ರೆಸ್ ಗಾದಿಯನ್ನಲಂಕರಿಸಬೇಕಿತ್ತು. ಆದರೆ ಗಾರ್ಬೇಜ್ ಲಾಬಿಗೆ ಮಾತ್ರ ಗಾಂಧಿನಗರದ ಶಾಸಕ ಮತ್ತು ರಾಜ್ಯ ಯೂತ್ ಕಾಂಗ್ರೆಸ್ ಅಧ್ಯಕ್ಷ ದಿನೇಶ್ ಗುಂಡೂರಾಯರೇ ಬೇಕಂತೆ. ಕಳೆದೊಂದು ದಶಕದಿಂದ ನಗರ ಕಾಂಗ್ರೆಸ್ಸನ್ನಾಳಿದ ರಾಮಲಿಂಗಾರೆಡ್ಡಿಯ ಅಧಿಕಾರಾವಧಿ ಮುಗಿದು ಆರು ತಿಂಗಳಾಯಿತಾದರೂ ಆ ಜಾಗಕ್ಕೆ ಹೊಸ ಅಧ್ಯಕ್ಷನ ನೇಮಕವಾಗಲೇ ಇಲ್ಲ.

ಹಕೀಕತ್ತಿಷ್ಟೇ ; ಲೇಜೌಟ್ ಕೃಷ್ಣಪ್ಪ ಅಥವಾ ಮಾಜಿ ಮೇಯರ್ ರಾಮಚಂದ್ರಪ್ಪನವರನ್ನು ಆ ಜಾಗಕ್ಕೆ ತರಲು ಬಿ.ಕೆ.ಹರಿಪ್ರಸಾದ್ ಗುಂಪೂ, ಶತಗತಾಯ ದಿನೇಶ್ ಗುಂಡೂರಾಯರನ್ನೇ ನೇಮಿಸಬೇಕೆಂದು ರಾಮಲಿಂಗರೆಡ್ಡಿ ಗುಂಪೂ ತಿಕ್ಕಾಟಕ್ಕಿಳಿದು ಬಿಟ್ಟಿವೆ. ಈ ಪೈಕಿ ಮಾಜಿ ಮೇಯರ್ ರಾಮಚಂದ್ರಪ್ಪ ಸಭ್ಯ ಮತ್ತು ಶುದ್ಧ ಹಸ್ತ ನಿಜ. ಜಾತಿಯಲ್ಲಿ ಹಿಂದುಳಿದ ಕುರುಬರ ಪೈಕಿ ಎಂಬುದೂ ಅಷ್ಟೇ ಸತ್ಯ. ಹಿಂದಿನಿಂದಲೂ ಬೆಂಗಳೂರು ಸಿಟಿ ಕಾಂಗ್ರೆಸ್ಸನ್ನಾಳುತ್ತಾ ಬಂದವರೆಲ್ಲ ಒಂದೋ ಒಕ್ಕಲಿಗರು ಅಥವಾ ಬ್ರಾಹ್ಮಣರೆಂಬುದೂ ಅಷ್ಟೇ ಸತ್ಯ.



ಹರಿಪ್ರಸಾದ್

ಈಗ ರಾಮಲಿಂಗಾರೆಡ್ಡಿಗೆ ತನ್ನ ಬದಲು ತನ್ನ ಪ್ರತಿರೂಪದಂತಿರುವ ದಿನೇಶ್ ಗುಂಡೂರಾಯರನ್ನು ಸಿಟಿ ಕಾಂಗ್ರೆಸ್ ಅಧ್ಯಕ್ಷಗಿರಿಗೇರಿಸಿಬಿಟ್ಟರೆ ಅದು ಒಂದಲ್ಲ ಒಂದು ರೀತಿಯಲ್ಲಿ ತನ್ನ ಹಿತಾಸಕ್ತಿಯನ್ನು ಕಾಪಾಡುತ್ತದೆ ಎಂಬ ದೂರಾಲೋಚನೆ ಹುಟ್ಟಿಕೊಂಡಿದೆ. ಆ ಕಾಲದಿಂದಲೂ ಬೆಂಗಳೂರು ಮಹಾನಗರ ಪಾಲಿಕೆಯನ್ನು ನಿಯಂತ್ರಿಸುತ್ತಿರುವುದೇ ರಾಮಲಿಂಗಾರೆಡ್ಡಿಯ ಎಂಬುದರಲ್ಲಿ ಎರಡು ಮಾತಿಲ್ಲ. ರಾಮಲಿಂಗಾರೆಡ್ಡಿ ಬೆನ್ನಿಗಿರುವುದು ಗೋಪಿನಾಥ್‌ರೆಡ್ಡಿ ನೇತೃತ್ವದ ಕಾರ್ಪೊರೇಷನ್ ಗಾರ್ಬೇಜ್ ಮಾಫಿಯಾ ಎಂಬುದು ಕೂಡ ಅಷ್ಟೇ ಸತ್ಯ.

ಆ ಕಾರಣಕ್ಕೆ ವರ್ತೂರು ಶಾಸಕ ಎ.ಕೃಷ್ಣಪ್ಪ, ಬಸವನಗುಡಿ ಶಾಸಕ ಚಂದ್ರಶೇಖರ್, ರಾಜಾಜಿನಗರದ ಶಾಸಕ ನೆ.ಲ. ನರೇಂದ್ರ ಬಾಬು, ಗಾಂಧೀನಗರದ ದಿನೇಶ್ ಗುಂಡೂರಾವ್, ಯಲಹಂಕದ ಪ್ರಸನ್ನ ಕುಮಾರ್ ಇತ್ಯಾದಿ ಶಾಸಕರೆಲ್ಲ ರೆಡ್ಡಿಯನ್ನೇ ಬೆಂಬಲಿಸುತ್ತಾ ಬಂದರು. ಈ ಪೈಕಿ ಬಿನ್ನಿಪೇಟೆ ಶಾಸಕ ಸೋಮಣ್ಣ ಮಾತ್ರ ಅತ್ತ ಬಿ.ಕೆ. ಹರಿಪ್ರಸಾದ್ ಬಣದಲ್ಲೂ ಇತ್ತ ರೆಡ್ಡಿ ಬಣದಲ್ಲೂ ಒಂದೊಂದು ಕಾಲಿಟ್ಟು ಇಬ್ಬರನ್ನೂ ಸರಿದೂಗಿಸಬಲ್ಲರು.

ಈಗ ರಾಮಚಂದ್ರಪ್ಪ ಅಧ್ಯಕ್ಷನಾಗಿಬಿಟ್ಟರೆ ಇಡೀ ನಗರ ಕಾಂಗ್ರೆಸ್ ಉಸಾಬರಿ ಬಿ.ಕೆ. ಹರಿಪ್ರಸಾದ್ ಕೈಸೇರಿ ತಮ್ಮ ಗತಿಯೇನೆಂದು ರೆಡ್ಡಿ ಪಟಾಲಂ ಆತಂಕಗೊಂಡಿದೆ. ಅದಕ್ಕೇ ದಿನೇಶ್ ಗುಂಡೂರಾಯರನ್ನು ದಾಳವಾಗಿ ಬಳಸುತ್ತಿದೆ. ಇಲ್ಲಿ ರಾಮಲಿಂಗಾರೆಡ್ಡಿ ಕೈ ಮೇಲಾದರೆ ಹಿಂದುಳಿದವರ ಲಾಬಿಗೂ ಜಯ ಸಿಕ್ಕಂತಾಗುತ್ತದೆ.

ಗುಂಡೂದಿನೇಶನಾ, ಕುರುಬರ ರಾಮಚಂದ್ರಪ್ಪನಾ?

ಮೂಡಿಗೆರೆ ಪೋಸ್ಟ್

(3 ನೇ ಪುಟದಿಂದ)

ಓಮ್ಮೆ ಆರು ತಿಂಗಳ ಕಾಲ ಅಮೆರಿಕಾದಲ್ಲಿ ವಾಸ್ತವ್ಯ ಹೂಡಲು ಹೊರಟಿದ್ದಾಗ 'ಜುಗಾರಿ ಕ್ರಾಸ್' ಕಾದಂಬರಿಯನ್ನು ಅರ್ಧ ಓದಿದ್ದೆ. ಮಾರನೆ ದಿನ ಹಾರಿ ಹೋಗಬೇಕು, ಆಗ ಇದ್ದಕ್ಕಿದ್ದಂತೆ "ಈ ಕಾದಂಬರಿಯನ್ನು ಯಾಕೆ ಇಂಗ್ಲಿಷ್‌ಗೆ ಅನುವಾದಿಸಬಾರದು" ಅನ್ನಿಸಿತು. ಕೂಡಲೇ ಕನ್ನಡ-ಇಂಗ್ಲಿಷ್ ನಿಘಂಟನ್ನೂ ಪ್ಯಾಕ್ ಮಾಡಿಕೊಂಡು ಹೊರಟೆ. ಅಲ್ಲಿದ್ದಾಗಲೇ ಅದನ್ನು ಸಂಪೂರ್ಣವಾಗಿ ಅನುವಾದಿಸಿದೆ.

ಭಾರತಕ್ಕೆ ವಾಪಸ್ಸು ಬಂದಾಗ ಅಪ್ಪ ಮತ್ತು ತೇಜಸ್ವಿ ಜಗಳವಾಡಿಕೊಂಡು ಒಬ್ಬರನ್ನೊಬ್ಬರು ಮಾತನಾಡಿಸುವುದನ್ನೇ ನಿಲ್ಲಿಸಿದ್ದರು. ಆಗ ತುಂಬಾ ಹಿಂಜರಿಕೆಯಿಂದಲೇ ಅವರಿಗೆ ಫೋನ್ ಮಾಡಿ ಜುಗಾರಿ ಕ್ರಾಸ್‌ಅನ್ನು ಇಂಗ್ಲಿಷ್‌ಗೆ ಅನುವಾದಿಸಿರುವುದಾಗಿ ಹೇಳಿದೆ. ಅಪ್ಪನ ಮತ್ತು ಅವರ ಜಗಳ ಏನೇ ಇದ್ದರೂ ನನ್ನನ್ನು ಎಂದಿನಂತೆ ಪ್ರೀತಿಯಿಂದಲೇ ಮಾತನಾಡಿಸಿದ ತೇಜಸ್ವಿಯವರು "ನಿನ್ನ ಅನುವಾದ ಚೆನ್ನಾಗಿದೆಯೋ ಇಲ್ಲವೋ ಎಂದು ಹೇಳುವಷ್ಟು ನನ್ನ ಇಂಗ್ಲಿಷ್ ಚೆನ್ನಾಗಿಲ್ಲ, ಆದ್ರೂ ಅದನ್ನು ಕಳುಹಿಸು, ನೋಡಿ ಹೇಳ್ತೇನೆ" ಅಂದಿದ್ದರು. ಹಾಗೆಯೇ ಅದನ್ನು ಹಲವು ದಿನಗಳಲ್ಲೇ ಓದಿ, "ಚೆನ್ನಾಗಿ ಅನುವಾದ ಮಾಡಿದ್ದೀಯ. ಅಲ್ಲಲ್ಲಿ ಸ್ವಲ್ಪ ರಿಪೇರಿ ಮಾಡಬೇಕಷ್ಟೇ" ಎಂದು ಹೇಳಿ ನನ್ನನ್ನು ಪ್ರೋತ್ಸಾಹಿಸಿದ್ದರು.

* * * * * * * * * * * *

ಅಪ್ಪ ಮತ್ತು ತೇಜಸ್ವಿ ಜಗಳವಾಡಿಕೊಂಡಿದ್ದರೂ ಅವರನ್ನು ಬೆಸೆಯುವಂತಹ ಘಟನೆಗಳೂ ನಡೆಯುತ್ತಿದ್ದವು. ಅದಕ್ಕೊಂದು ಉದಾಹರಣೆ ನೀಡುತ್ತೇನೆ. ಒಂದು ದಿನ ಯಾವುದೋ ಕೆಲಸದ ಮೇಲೆ ಬೇಬಿ ಮತ್ತು ನಾನು ಮೈಸೂರಿಗೆ ಹೋಗಿದ್ದೆವು. ಅಲ್ಲಿ ನೋಡಿದರೆ ಅದೇ ಸಂಜೆ ರಂಗಾಯಣದ ಒಂದು ಕೊಠಡಿಗೆ 'ಲಂಕೇಶ್ ಸಭಾಂಗಣ' ಎಂದು ಹೆಸರಿಟ್ಟು ಉದ್ಘಾಟಿಸಲಾಗುತ್ತಿತ್ತು, ಅಷ್ಟೇ ಅಲ್ಲ, ಅದೇ ಕೊಠಡಿಯಲ್ಲಿ ಅಂದೇ ತೇಜಸ್ವಿಯವರು ತೆಗೆದಿದ್ದ ಪಕ್ಷಿಗಳ ಛಾಯಾಚಿತ್ರಗಳ ಪ್ರದರ್ಶನವೂ ಉದ್ಘಾಟನೆಯಾಗಲಿತ್ತು. ಇದರ ರೂವಾರಿ ಅಂದು ರಂಗಾಯಣದ ನಿರ್ದೇಶಕರಾಗಿದ್ದ ಪ್ರಸನ್ನ!

ಆಗ ಕಟ್ಟಾ ವೈರಿಗಳಂತೆ ಆಡುತ್ತಿದ್ದ ಅಪ್ಪ ಮತ್ತು ತೇಜಸ್ವಿಯವರ ಈ ಸಮ್ಮಿಲನ ನನಗೆ ಅಚ್ಚರಿಗೊಳಿಸಿತ್ತು. ಅಪ್ಪ ಮತ್ತು ತೇಜಸ್ವಿಯವರಿಗೆ ಆಪ್ತಮಿತ್ರರಾಗಿದ್ದ ಪ್ರೊ. ರಾಮದಾಸ್‌ರವರೊಂದಿಗೆ ಅಪ್ಪನ ಹೆಸರಿನ ಸಭಾಂಗಣವನ್ನೂ, ತೇಜಸ್ವಿಯವರ ಛಾಯಾಚಿತ್ರಗಳ ಉದ್ಘಾಟನೆಯನ್ನೂ ನೋಡಲು ಹೋದೆವು.

ಅಪ್ಪನ ಹೆಸರಿನ ಸಭಾಂಗಣವನ್ನು ನೋಡಿ ಆದ ಸಂತೋಷದಷ್ಟೇ ತೇಜಸ್ವಿಯವರು ಸೆರೆಹಿಡಿದಿದ್ದ ಚಿತ್ರಗಳನ್ನೂ ಕಂಡು ಸಂತೋಷವಾಗಿತ್ತು. ಉದ್ಘಾಟನೆಗೆಂದು ಬಂದಿದ್ದ ತೇಜಸ್ವಿಯವರೊಂದಿಗೆ ರಂಗಾಯಣದ ಬಯಲುರಂಗಮಂದಿರದಲ್ಲಿ ಕೂತ ನಾವಿಬ್ಬರೂ ಮಾತನಾಡಿಸಿದ್ದೆವು. ಆನಂತರ ತೇಜಸ್ವಿಯವರು ತಮ್ಮ ಹಲವು ಚಿತ್ರಗಳನ್ನು ನನಗೆ ಇಮೇಲ್ ಮಾಡಿದ್ದರು.

* * * * * * * * * * * *


ಅಪ್ಪ ಹೋದ ನಂತರ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ಹೊತ್ತ ನಾನು ಹಲವಾರು ಬಾರಿ ಅವರಿಗೆ ಬರೆಯಲು ಕೋರಿದ್ದೆ. ಆಗೆಲ್ಲಾ "ನೋಡು, ನಿನ್ನ ಮೇಲೆ ಪ್ರೀತಿ ಇದೆ. ಆದರೆ ನಿನ್ನಪ್ಪ ನನಗೆ ತುಂಬಾ ನೋವು ಮಾಡಿದ. ನಾನು ಯಾವತ್ತೂ ಆ ಪತ್ರಿಕೆಗೆ ಬರೆಯಲ್ಲ, ನೀನು ನನ್ನ ತಲೆ ತಿನ್ನಬೇಡ" ಎಂದು ಪ್ರೀತಿಯಿಂದಲೇ ಬೈಯ್ದಿದ್ದರು.

ಆದರೆ ನಾನು ಬಿಡಬೇಕಲ್ಲಾ, ಒಮ್ಮೆ ನಾನು ಮತ್ತು ನನ್ನ ಸ್ನೇಹಿತ ಚಂದನ್ ಗೌಡ ಮೂಡಿಗೆರೆಯ ಅವರ ಮನೆಗೆ ಹೋಗಿ ಸಂದರ್ಶಿಸಿದ್ದೆವು. ಅವತ್ತು ನಾವಿಬ್ಬರೂ ಕಾರಿನಿಂದ ಇಳಿದು ಹೂ ತೋಟದಲ್ಲಿದ್ದ ರಾಜೇಶ್ವರಿಯವರನ್ನು ಮಾತನಾಡಿಸುತ್ತಿದ್ದಾಗ ತೋಟಕ್ಕೆ ಹೋಗಿದ್ದ ತೇಜಸ್ವಿ ಮನೆ ಬಾಗಿಲಲ್ಲಿ ಪ್ರತ್ಯಕ್ಷರಾದರು. ಆ ಚಿತ್ರ ಇವತ್ತೂ ನನ್ನ ಕಣ್ಣ ಮುಂದಿದೆ. ಅಗಲವಾದ ಭುಜ, ಕಟ್ಟುಮಸ್ತಾದ ಕೈಕಾಲುಗಳನ್ನು ಹೊಂದಿದ್ದ ತೇಜಸ್ವಿಯವರು ದಪ್ಪಗೇನಿರಲಿಲ್ಲ, ಆದರೆ ದೈತ್ಯ ದೇಹದವರಂತೆ ಕಾಣುತ್ತಿದ್ದರು. ಅವರಿಗಿಂತಲೂ ಕುಳ್ಳಗಿದ್ದ ಅಪ್ಪನನ್ನೇ ನೋಡಿ. ಅಪ್ಪ ಕೂಡ ಅಗಲವಾದ ಭುಜಗಳನ್ನು ಹೊಂದಿದ್ದು ಹಿಂದಿನಿಂದ ಅವರು ದುಮ್ಮನಂತೆ ಕಾಣುತ್ತಿರಲಿಲ್ಲ, ಆದರೆ ಮುಂದೆ ಹೊಟ್ಟೆ ಇದ್ದಿದ್ದರಿಂದ ದಪ್ಪನೆ ಆಸಾಮಿ ತರಹ ಕಾಣುತ್ತಿದ್ದರು!

ಅವತ್ತು ಇಂತಹ ದೈತ್ಯ ದೇಹದ ತೇಜಸ್ವಿಯವರು ತಮ್ಮ ಎಂದಿನ ಕಾಟನ್ ಶರ್ಟ್, ನೀಲಿ ಜೀನ್ಸ್ ತೊಟ್ಟು ಕೈಯಲ್ಲಿ ಬಂದೂಕನ್ನು ಹಿಡಿದು ಬಾಗಲಲ್ಲಿ ನಿಂತು "ಇವರಿಬ್ಬರೂ ಬಂದ್ರಾ, ಯಾಕೆ ಲೇಟ್ ಆಯ್ತು?" ಎಂದು ಗದರಿಸಿದ್ದರು; ಚಕಾರವೆತ್ತಿದರೆ ನಮ್ಮನ್ನೇ ಶೂಟ್ ಮಾಡುವವರ ಗತ್ತಿನಲ್ಲಿ! ಆ ದೃಶ್ಯವನ್ನು ಹೇಗೆ ಮರೆಯಲಾದೀತು?

ಅವತ್ತು ಅವರೊಂದಿಗೆ ನಡೆಸಿದ ಸಂದರ್ಶನವನ್ನು ಪ್ರಕಟಿಸಿದ ನಾನು, ಅವರೇ ಬರೆಯುವಂತಾಗಬೇಕೆಂಬ ಹಂಬಲದಿಂದ ಅವರ ಬೆನ್ನು ಹತ್ತುವುದನ್ನು ಮಾತ್ರ ನಿಲ್ಲಿಸಲಿಲ್ಲ. ಆದರೆ ಅದ್ಯಾವುದಕ್ಕೂ ಅವರು ಜಗ್ಗದಿದ್ದಾಗ ಒಂದು ಉಪಾಯ ಮಾಡಿದೆ. ಒಂದು ದಿನ ಅವರಿಗೆ ಫೋನ್ ಮಾಡಿ "ಸಮಕಾಲೀನ ವಿಷಯಗಳ ಕುರಿತು ನಿಮಗೆ ಹತ್ತು ಪ್ರಶ್ನೆಗಳನ್ನು ಕಳುಹಿಸುತ್ತೇನೆ. ಅವುಗಳಿಗೆ ನಿಮ್ಮ ಉತ್ತರಗಳನ್ನು ಕಳುಹಿಸುತ್ತೀರಾ?"ಎಂದೆ. ಅದಕ್ಕೆ ಅವರು ಒಪ್ಪಿಕೊಂಡಿದ್ದೇ ತಡ, ನಮ್ಮ ಶಿವಸುಂದರ್, ಬಳಿದಾಳೆ ಈಶ, ವಿ.ಎಸ್. ಶ್ರೀಧರ್ ಮತ್ತು ನಾನು ಜೊತೆಗೂಡಿ ಹತ್ತು ವಿಷಯಗಳನ್ನು ಆಯ್ಕೆ ಮಾಡಿ ಅವುಗಳನ್ನು ಕುರಿತಂತೆ ಪ್ರಶ್ನೆಗಳನ್ನು ಹೇಗೆ ರೂಪಿಸಿದೆವು ಎಂದರೆ ಅವುಗಳನ್ನು ಓದಿದ ಕೂಡಲೇ ತೇಜಸ್ವಿಯವರು ಫೋನ್ ಮಾಡಿದರು.

"ಈ ಪ್ರಶ್ನೆಗಳು ತುಂಬಾ ಚೆನ್ನಾಗಿವೆ. ಯಾರು ಬರೆದಿದ್ದು?" ಅಂದರು.



ತೇಜಸ್ವಿಯವರ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾದ ನಾನು ಮತ್ತು ಅಪ್ಪ









ನಮ್ಮ ಗುಟ್ಟನ್ನು ಹೇಳಲು ಇಚ್ಛಿಸದೆ "ನಾನೇ ಬರದೆ, ಯಾಕೆ?" ಎಂದೆ.

"ಸುಳ್ಳು ಹೇಳ್ತೀಯಾ ನೀನು. ಆದರೆ ಈ ಪ್ರಶ್ನೆಗಳಿಗೆ ನಾನು ಮೂರ್‍ನಾಲ್ಕು ಸಾಲುಗಳಲ್ಲಿ ಉತ್ತರಿಸಕ್ಕಾಗಲ್ಲ, ಪ್ರತಿಯೊಂದು ಪ್ರಶ್ನೆಗೂ ಡಿಟೈಲಾಗಿ ಉತ್ತರ ಬರೆದು ಕಳುಹಿಸುತ್ತೇನೆ" ಎಂದು ಅವರು ಹೇಳಿದಾಗ ನನಗೆ ಖುಷಿಯೋ ಖುಷಿ.

ಜಾಗತೀಕರಣ, ತಂತ್ರಾಂಶ, ಕನ್ನಡ ಸಾಹಿತ್ಯ-ಸಂಸ್ಕೃತಿ, ಕಾಫಿ ಬೆಲೆ... ಹೀಗೆ ಹಲವಾರು ಸಮಕಾಲೀನ ಬಿಕ್ಕಟ್ಟುಗಳ ಬಗ್ಗೆ ತೇಜಸ್ವಿಯವರು ನೀಡಿದ ಉತ್ತರಗಳನ್ನು ಹದಿನೇಳು ವಾರ ಪ್ರಕಟಿಸಿದೆವು. ಅಂದಹಾಗೆ, ಪ್ರಸ್ತುತ ಸಮಸ್ಯೆ ಹಾಗು ಸವಾಲುಗಳನ್ನು ಕುರಿತು ತೇಜಸ್ವಿಯವರು ಅಷ್ಟು ಸುದೀರ್ಘವಾಗಿ ಚರ್ಚಿಸಿದ್ದು ಅಂದೊಂದೇ ಸಲ ಅನ್ನಿಸುತ್ತೆ.

ಎಂದೂ ಪತ್ರಿಕೆಗೆ ಬರೆಯುವುದಿಲ್ಲ ಎಂದಿದ್ದ ತೇಜಸ್ವಿ ಮತ್ತೆ ಬರೆಯಲಾರಂಭಿಸಿದರು. ಅದರೊಂದಿಗೆ ಪ್ರತಿವಾರ ಅವರಿಂದ ಉತ್ತರಗಳನ್ನು ತರಿಸಿಕೊಳ್ಳುವ ಕೆಲಸವೂ ನನಗೆ ಶುರುವಾಯಿತು! "ಇದೊಂದು ತಲೆನೋವು ಕಣೆ. ಈಗ ತಾನೇ ಬರೆದಿದ್ದೇನೆ ಅನ್ನಿಸುತ್ತೆ, ಆದರೆ ಮುಂದಿನ ವಾರ ಬಂದೇ ಬಿಟ್ಟಿರುತ್ತೆ. ನನ್ನಿಂದ ಹೀಗೆ ಪ್ರತಿವಾರ ಬರೆಯಕ್ಕಾಗಲ್ಲ ಅಂತಾನೇ ನಾನು ಸುಮ್ಮನಾಗಿದ್ದೆ. ಈಗ ನೋಡಿದ್ರೆ ಮತ್ತೆ ಈ ತಲೆನೋವು ನನಗೆ ಹಚ್ಚಿದ್ದೀಯಾ" ಎಂದು ಅವರು ಗೊಣಗಾಡುತ್ತಲೇ ಪ್ರತಿವಾರ ತಮ್ಮ ಉತ್ತರವನ್ನು ಕಳುಹಿಸುತ್ತಿದ್ದರು. ಈ ಪ್ರಶ್ನೆ-ಉತ್ತರ ಸರಣಿಗೆ ನಾನು 'ಮೂಡಿಗೆರೆ ಪೋಸ್ಟ್' ಎಂದು ಹೆಸರಿಟ್ಟಿದ್ದರೂ, "ನಿನ್ನ ಕಿರುಕುಳ ಸಾಕಾಯಿತು" ಎನ್ನುತ್ತಿದ್ದ ಅವರು ಪ್ರತಿವಾರ ಇ-ಮೇಲ್ ಮಾಡುತ್ತಿದ್ದ ಲೇಖನಗಳಿಗೆ 'ಕಿರುಕುಳ' ಎಂದೇ ಟೈಟಲ್ ಇಟ್ಟಿದ್ದರು! ಹೀಗೆ ತೇಜಸ್ವಿಯವರು ಮತ್ತೆ ಬರೆದದ್ದು ನನ್ನ ಮೇಲೆ ಅವರಿಗಿದ್ದ ಪ್ರೀತಿಯಿಂದಲೇ.

ಇವೆಲ್ಲದರ ನಡುವೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಶಾಂತಿಗಾಗಿ ನಾಗರೀಕರ ವೇದಿಕೆಯಲ್ಲಿ ನನ್ನ ಭಾಗವಹಿಸುವಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಆಗಾಗ್ಗೆ ಫೋನ್ ಮಾಡಿ ಏನಾಗುತ್ತಿದೆ ಎಂದು ವಿಚಾರಿಸುತ್ತಿದ್ದರು. "ಮುಂದಿನ ಬಾರಿ ಚಿಕ್ಕಮಗಳೂರಿಗೆ ಬಂದಾಗ ಮೂಡಿಗೆರೆಗೆ ಬಂದು ನಿಮ್ಮನ್ನು ಭೇಟಿ ಆಗುತ್ತೇನೆ" ಎಂದು ನಾನು ಹೇಳುತ್ತಿದ್ದೆ -ಅವರನ್ನು ಭೇಟಿ ಆಗಬೇಕೆಂಬ ಆಶಯದಿಂದ. ಆದರೆ ಅವರು ಮಾತ್ರ "ಬರ್‍ತೀನಿ ಅಂತ ಹೆದರಿಸುತ್ತಿರುತ್ತೀಯಾ ನೀನು" ಎಂದು ಹೇಳಿ ನನ್ನನ್ನು ನಗಿಸುತ್ತಿದ್ದರು. ಹಾಗೆಯೇ ಅಷ್ಟೇ ಕಾಳಜಿಯಿಂದ "ಕಾಡಿನಲ್ಲಿ ಗನ್ ಹಿಡಿದಿರೋ ಆ ಹುಡುಗ್ರಿಗೆ ಹೊರಗೆ ಬರಕ್ಕೆ ಹೇಳೆ. ಸರ್ಕಾರ ಸುಮ್ಮನೆ ಅವರನ್ನೆಲ್ಲ ಕೊಂದುಹಾಕಿಬಿಡುತ್ತೆ. ಅವರ ಲೀಡರ್‌ಗಳು ನಿನಗೆ ಗೊತ್ತಿದ್ರೆ ಅವರಿಗೆ ಗನ್ ಬಿಡೋದಕ್ಕೆ ಹೇಳು" ಎಂದು ಹಲವುಬಾರಿ ಹೇಳಿದ್ದರು. ತೇಜಸ್ವಿಯವರ ಅಭಿಪ್ರಾಯವನ್ನು ಸಾಕೇತ್ ರಾಜನ್‌ಗೆ ತಿಳಿಸಿದಾಗ "ನಾನೇ ಅವರಿಗೆ ಸುದೀರ್ಘವಾದ ಪತ್ರ ಬರೆಯುತ್ತೇನೆ. ಇದೇ ಚಿಕ್ಕಮಗಳೂರಿನಲ್ಲಿ ಆದಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿರುವುದು ಸರಿಯೋ ಎಂದು ಕೇಳುತ್ತೇನೆ. ಅವರೊಂದಿಗೆ ಚರ್ಚಿಸಬೇಕಿರುವ ಬಹಳಷ್ಟು ವಿಷಯ ಇದೆ" ಎಂದಿದ್ದರು ಸಾಕೇತ್. ತೇಜಸ್ವಿಯವರಿಗೆ ಸಾಕೇತ್ ಪತ್ರ ಬರೆದರೋ ಇಲ್ಲವೋ ಗೊತ್ತಿಲ್ಲ, ಆದರೆ ಇದಾದ ಎರಡು ತಿಂಗಳಲ್ಲಿ ಪೊಲೀಸ್ ಎನ್‌ಕೌಂಟರ್‌ನಲ್ಲಿ ಸಾಕೇತ್ ಹತ್ಯೆಯಾದರು.

* * * * * * * * * * * *

ನಾನು ತೇಜಸ್ವಿಯವರನ್ನು ಕೊನೆ ಬಾರಿಗೆ ಭೇಟಿ ಆಗಿದ್ದು ಕಳೆದ ಅಕ್ಟೋಬರ್ ತಿಂಗಳಲ್ಲಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕೆಲಸ ನಿಮಿತ್ತ ಚಿಕ್ಕಮಗಳೂರಿಗೆ ಹೋಗಿದ್ದ ನಾನು, ಬಳಿದಾಳೆ ಈಶ ಮತ್ತು ಯುವರಾಜ್ ಮೂಡಿಗೆರೆಗೆ ಹೋಗಿ ಅವರನ್ನು ಭೇಟಿ ಆಗಿದ್ದೆವು. ಅವತ್ತು ಜಾಗತೀಕರಣದಿಂದಾಗಿರುವ ಬದಲಾವಣೆಗಳನ್ನು ಚರ್ಚಿಸುತ್ತಾ ಕುಡಿಯುವ ನೀರನ್ನೂ ಖಾಸಗಿಕರಣಗೊಳಿಸಲು ಸರ್ಕಾರ ಮುಂದಾಗಿದ್ದರ ಬಗ್ಗೆ ಪ್ರಸ್ತಾಪ ಬಂತು. "ಸರ್ಕಾರ ಎಲ್ಲವನ್ನೂ ಖಾಸಗಿಯವರಿಗೆ ನೀಡಬೇಕು ಕಣೆ. ಆಗಲೇ ಉದ್ಧಾರ ಆಗೋದು" ಎಂದು ಅವರು ಹೇಳಿದಾಗ ನನಗೆ ಶಾಕ್ ಆಯಿತು. "ಕುಡಿಯುವ ನೀರನ್ನೂ ಖಾಸಗೀಕರಿಸಿದರೆ ಬೆಂಗಳೂರಿನ ಮತ್ತು ಇತರಡೆಯ ಬಡ ಜನರಿಗೆ ನೀರೆ ಇಲ್ಲದಂತಾಗುತ್ತದೆ. ಅದೆಂತಹ ಸಮಾಜವಾದ?" ಎಂದು ಪ್ರಶ್ನಿಸಿದಾಗ "ನೀನು ಹೇಳೋದು ಸರಿ. ಎಲ್ಲ ದರಿದ್ರ ಆಗಿದೆ ಕಣೆ" ಎಂದು ಅವರು ಉತ್ತರಿಸಿದ್ದರು.

ಅವತ್ತು ನಮ್ಮ ಪುಟ್ಟ ಇಶಾಳ ಬಗ್ಗೆ ರಾಜೇಶ್ವರಿಯವರು ವಿಚಾರಿಸಿದರು. ನಾನು ಇಶಾಳ ಬಗ್ಗೆ ಹೆಮ್ಮೆಯಿಂದ ಹೇಳುತ್ತಿದ್ದಾಗ, ತೇಜಸ್ವಿ ಮುಗುಳ್ನಗುತ್ತಾ ಕೇಳಿಸಿಕೊಳ್ಳುತ್ತಿದ್ದರು. ಅವರ ಮೊಮ್ಮಗಳು ಏವಾ ನಮ್ಮ ಇಶಾಳಿಗಿಂತ ಮೂರು ತಿಂಗಳು ಚಿಕ್ಕವಳು. ಹೀಗೆ ಮಕ್ಕಳ ಬಗ್ಗೆ ಮಾತನಾಡುತ್ತಾ ಏವಾ ಕೂಡ ಹೇಗೆ ಚೇಷ್ಟೆ ಮಾಡುತ್ತಾಳೆ, ಡೈನಿಂಗ್ ಟೇಬಲ್ ಅಡಿ ಹೊಕ್ಕು ಹೇಗೆ ಕಣ್ಣಾಮುಚ್ಚಾಲೆ ಆಡುತ್ತಾಳೆ ಎಂದು ತೇಜಸ್ವಿ ತಾತನ ಸಹಜ ಹೆಮ್ಮೆಯೊಂದಿಗೆ ವಿವರಿಸಿದರು.



ನಾವು ಹೊರಡುವ ಮುನ್ನ ತಾವು ಇತ್ತೀಚೆಗೆ ತೆಗೆದಿದ್ದ ಮೊಮ್ಮಗಳ ಚಿತ್ರಗಳನ್ನು ತೋರಿಸಿದರು. ಆ ಚಿತ್ರಗಳೊಂದಿಗೆ ಅವರೇ ತೆಗೆದಿದ್ದ ಪಕ್ಷಿಗಳ ಕಪ್ಪು-ಬಿಳಿಪು ಪ್ರಿಂಟ್‌ಔಟ್‌ಗಳೂ ಇದ್ದವು.

ಹಿಂದೆಲ್ಲ ಅವರು ತೆಗೆದಿದ್ದ ಪಕ್ಷಿಗಳ ಬಣ್ಣ ಬಣ್ಣದ ಫೋಟೋಗಳನ್ನು ನೋಡಿದ್ದ ನನಗೆ ಅವರೇ ಪ್ರಿಂಟ್‌ಔಟ್ ತೆಗೆದಿದ್ದ ಆ ಕಪ್ಪು-ಬಿಳಿಪು ಚಿತ್ರಗಳು ಇವತ್ತು ನೆನಪಾಗುತ್ತಿವೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಬಣ್ಣ ಬಣ್ಣದ ವೈವಿಧ್ಯಮಯ ಜಗತ್ತನ್ನು ತಾವು ಬದುಕಿದ್ದಾಗ ನಮ್ಮೆಲ್ಲರಿಗೂ ತೆರೆದಿಟ್ಟಿದ್ದ ತೇಜಸ್ವಿಯವರು ಇವತ್ತು ನಮ್ಮನ್ನೆಲ್ಲ ಅಗಲಿ ನೆನಪಿನಲ್ಲಿನ ಕಪ್ಪು-ಬಿಳಿಪಿನ ಜಗತ್ತಿಗೆ ಸರಿದಿದ್ದಾರೆ.

ಮೊನ್ನೆ ಅವರನ್ನು ಕವಿಶೈಲದಲ್ಲಿ ನೋಡಿದಾಗ ಹಲವಾರು ನೆನಪುಗಳು ನುಗ್ಗಿ ಬಂದವು. ಅವುಗಳಲ್ಲಿ ಹಲವನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಂಡು, ಪ್ರೀತಿಯ ತೇಜಸ್ವಿಯವರಿಗೆ ನನ್ನ ನಮನವನ್ನು ಸಲ್ಲಿಸುತ್ತಿದ್ದೇನೆ....

-ಗೌರಿ ಲಂಕೇಶ್

ಬಾಯಿಬಿಟ್ಟರೆ ಬಸವಣ್ಣನ ವಚನ. ಮಾತಿಗಿಳಿದರ ರಾಣ-ಭಾಗವತ. ಕರ್ನಾಟಕ ಕಂಡ ಅದ್ಭುತ ವಾಗ್ಮಿ, ಕ್ಷಾತ್ ಹರಿಕಥಾ ವಿದ್ವಾನ್. ಮಹಾನ್ ಜಾತ್ಯತೀತ ಯಕ: ಸಿ.ಎಂ. ಇಬ್ರಾಹಿಂ ಸಾಹೇಬರ ಬೇರೆಲ್ಲಾ ಖವಾಡಗಳೂ ಒಂದೊಂದಾಗಿ ಕಳಚಿ ಬಿದ್ದಾಗಲೂ ವರ ಜಾತ್ಯತೀತ ಸೋಗು ಮಾತ್ರ ಬಯಲಾಗದೇ ಳಿದಿತ್ತಲ್ಲವೇ? ಈಗ ಅದೂ ಕಳಚಿ ಬಿದ್ದಿದೆ. ಬ್ರಾಹಿಂ ಮಾರ್ವಾಡಿ ಸೊಸೆ ಪ್ರೇರಣಾ ಮೆಹತಾ ಎಂಬಾಕೆ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಮಾವನ ವಿರುದ್ಧ ಕೊಟ್ಟ ದೂರು, ಕಳೆದೊಂದು ರ್ಷದಿಂದ ಇಬ್ರಾಹಿಂ ದಂಪತಿಗಳು ತಮ್ಮ ಸೊಸೆಗೆ ಟ್ಟ ಹಿಂಸೆ ಮತ್ತು ಇಬ್ರಾಹಿಂ ಪುತ್ರ ಫಯಾಜ್ ಹಿಂದೂ ಪತ್ನಿಯ ಜೊತೆ ನಡಕೊಂಡ ರೀತಿಯನ್ನು ಡ ಯಾರಿಗಾದರೂ ಇಬ್ರಾಹಿಂ ಬಗ್ಗೆ ಅಚ್ಚರಿ ಟ್ಟದೇ ಇರದು.

ಇಬ್ರಾಹಿಂ ಮಾಜಿ ಕೇಂದ್ರ ವಿಮಾನಯಾನ ಮಂತ್ರಿ. ನ್ಯ ಕೋಮುವಾದಿ ಬಿಜೆಪಿಯ ಜೊತೆ ಕೈ ಲಾಯಿಸಿದ ಕಾರಣಕ್ಕೇ ದೇವೇಗೌಡರ ವಿರುದ್ಧ ನು ತಿರುಗಿಬಿದ್ದೆನೆಂದು ಭಾಷಣ ಕುಟ್ಟುವುದು ತ್ತಟ್ಟಗಿರಲಿ. ಇಂಥಾ ಮಹಾನ್ ಸೆಕ್ಯೂಲರ್ ನಾಯಕನ ಗ ಫಯಾಜ್‌ನನ್ನು ಹಿಂದೂ ಹೆಣ್ಣು ಮಗಳೊಬ್ಬಳು ತಿಸಿದ್ದರಲ್ಲಿ ಯಾವ ತಪ್ಪು ತಾನೆ ಇದ್ದೀತು?

ಸಿ.ಎಂ. ಇಬ್ರಾಹಿಂ ಯಾನೇ ಚಂಗ ಮಂಗ ಬ್ರಾಹಿಂ ಮತ್ತು ಶಹೀಲಾ ದಂಪತಿಗಳ ಏಳು ಮಂದಿ ಕ್ಕಳ ಪೈಕಿ ಒಬ್ಬನೇ ಒಬ್ಬ ಗಂಡು ಮಗನೇ ಫಯಾಜ್. ಂದರನಲ್ಲ, ಇಬ್ರಾಹಿಂ ಮಗ ಎಂಬುದನ್ನು ಬಿಟ್ಟರೆ ರಾವುದೇ ಯೋಗ್ಯತೆಯಿಲ್ಲ. ಸುಖಕ್ಕೆ ಬಿದ್ದೇ ಜಾಫರ್ ರೀಫ್ ಮಗ ಮುನ್ನಾನ ತಮ್ಮನ ಗಾತ್ರಕ್ಕೆ ಬೆಳೆದ ಯಾಜ್ ಇಂಜಿನಿಯರಿಂಗ್ ಓದುವುದಕ್ಕೆಂದು ೀವಾಕ್ಕೆ ಕಾಲಿಟ್ಟದ್ದೇ ಉಂಡಾಡಿ ಯಾಗಿಬಿಟ್ಟ.

ಅಲ್ಲಿ ಫಯಾಜ್‌ಗೆ ಜೊತೆಯಾದವಳು ಪ್ರೇರಣಾ ಹತಾ ಎಂಬ ಗುಜರಾತಿ ಯುವತಿ. ಫಯಾಜ್ ದಮೊದಲು ತಾನು ಹಿಂದೂ ಎಂದು ಆಕೆಯನ್ನು ಬಿಸಿದ್ದ. ಆತ ಮುಸ್ಲಿಂ ಎಂದು ಗೊತ್ತಾದ ಮೇಲೂ ೆಯ ಪ್ರೀತಿ ಕುಂದಲಿಲ್ಲ. ಸರಿಸುಮಾರು ಎರಡು ರ್ಷಗಳ ಕಾಲ ಜೊತೆ ಜೊತೆಯಲ್ಲೇ ಓಡಾಡಿದ ೇರಣಾ ಮತ್ತು ಫಯಾಜ್ ಅಂತಿಮವಾಗಿ 2005ರ

ಹಿಂದೂ ಸೊಸೆಗೆ ಇಬ್ರಾಹಿಂ ಕಾಟ

ಅಕ್ಟೋಬರ್ 11 ರಂದು ಗೋವಾದ ಬಾರ್ದೇಜ್‌ನ ಸಿವಿಲ್ ಕೋರ್ಟಿನಲ್ಲಿ ಕಾನೂನುಬದ್ಧವಾಗೇ ಮದುವೆಯಾಗಿದ್ದಾರೆ. ತಾನು ಮದುವೆಯಾದ ವಿಷಯವನ್ನು ತಂದೆ ಇಬ್ರಾಹಿಂಗೆ ಎರಡು ತಿಂಗಳ ನಂತರವೇ ಫಯಾಜ್ ತಿಳಿಸಿದ್ದಾನೆ. ನಡೆದ ಮದುವೆಗೆ ತಂದೆಯಾದವನು ಆಶೀರ್ವಾದದ ಹೊರತಾಗಿ ಇನ್ನೇನು ತಾನೇ ಮಾಡಲು ಸಾಧ್ಯ? ಆದರೆ ಇಬ್ರಾಹಿಂ ಜಾಯಮಾನವೇ ಬೇರೆ. ತಕ್ಷಣವೇ ಮಗ ಫಯಾಜ್‌ನನ್ನು ವಿದ್ಯಾಭ್ಯಾಸದ ನೆಪದಲ್ಲಿ ಲಂಡನ್ನಿಗೆ ಸಾಗ ಹಾಕಿದ್ದಾರೆ. ಹಾಗಾದರೂ ಮದುವೆ ಮುರಿಯಲಿ ಎಂಬ ಹುನ್ನಾರವಿತ್ತೇನೊ!

ಆದರೆ ಫಯಾಜ್ ಒಬ್ಬನೇ ಹೋಗಲಿಲ್ಲ, ಹೋಗುವಾಗ ಪತ್ನಿ ಪ್ರೇರಣಾಳನ್ನೂ ಜೊತೆಗೇ ಕರೆದೊಯ್ದ. ಅಲ್ಲಿ ಸರಿಸುಮಾರು ಒಂದು ವರ್ಷ ಪ್ರೇರಣಾ ಮತ್ತು ಫಯಾಜ್ ಜೊತೆಯಾಗೇ ಇದ್ದಾರೆ. ಬಹುಶಃ ಮದುವೆಗೆ ಮೊದಲೇ ಪ್ರೇರಣಾ ಗರ್ಭಿಣಿಯಾಗಿದ್ದಳೇನೊ. 2006ರ ಮೇ ತಿಂಗಳಲ್ಲಿ ಆಕೆಗೆ ಗಂಡು ಮಗುವಾಗಿದೆ. ಮಗುವಿಗೆ ಫಯಾಜ್ 'ಆಯಮಾನ್' ಎಂಬ ಹೆಸರಿಟ್ಟಿದ್ದಾನೆ. ಇಷ್ಟಾಗಿದ್ದೇ ಫಯಾಜ್ ತನ್ನ ಓದಿಗೆ ಗುಡ್‌ಬೈ ಹೇಳಿ ಮಗ ಮತ್ತು ಪತ್ನಿಯ ಜೊತೆ ಬೆಂಗಳೂರಿನ ವಿಮಾನ ಹತ್ತಿದ್ದಾನೆ.

ಯಾವತ್ತು ಪ್ರೇರಣಾ ಬೆಂಗಳೂರಿನ ಇಬ್ರಾಹಿಂ ಮನೆಗೆ ಕಾಲಿಟ್ಟಳೋ ವಾಸ್ತವದ ಕಠೋರ ಒಂದೊಂದಾಗಿ ಅಪ್ಪಳಿಸಿದೆ. "ಗಂಡ ಫಯಾಜ್‌ಗೆ ಪತ್ನಿ ಮತ್ತು ಮಗನ ಬಗ್ಗೆ ಸಹಜ ಪ್ರೀತಿಯಿತ್ತಾದರೂ ಇಬ್ರಾಹಿಂ ಸೊಸೆಯನ್ನು ಕಂಡರೆ ಸಾಕು ಸಿಡಿಮಿಡಿಗೊಳ್ಳುತ್ತಿದ್ದರು. ಇಬ್ರಾಹಿಂರ ಪತ್ನಿ ಶಹೀಲಾ ಸೊಸೆಯನ್ನು ಮಾತಾಡಿಸುವುದಿರಲಿ, ಅಪ್ಪಿತಪ್ಪಿಯೂ ತನ್ನ ಮೊಮ್ಮಗನ ಮುಖ ನೋಡುತ್ತಿರಲಿಲ್ಲ. ಫಯಾಜ್ ಓರ್ವ ಮುಸ್ಲಿಂ ಎಂಬುದನ್ನೂ ಲೆಕ್ಕಿಸದೇ ಮಗನನ್ನು ಪ್ರೀತಿಸಿ ಮದುವೆಯಾದ ಸೊಸೆಯನ್ನು ಮಾತು ಮಾತಿಗೆ ಹಿಂದೂ ಎಂದು ಹೀಯಾಳಿಸುತ್ತಿದ್ದ ಅತ್ತೆ ಶಹೀಲಾ ತನ್ನ ಮೊಮ್ಮಗ 'ಆಯಮಾನ್'ನನ್ನು ಕಂಡಿದ್ದೇ ತಡ 'ಅವನ ಮೈಯಲ್ಲಿರೋದು ಹಿಂದೂ ರಕ್ತ, ಹಿಂದೂ ರಕ್ತ' ಎಂದು ಬಡಬಡಿಸುತ್ತಿದ್ದಳು.



"ಹಾಗಂಥ ಫಯಾಜ್ ಯಾವತ್ತಿಗೂ ಪ್ರೇರಣಾಳನ್ನಾಗಲಿ, ಮಗುವನ್ನಾಗಲಿ ತಾತ್ಸಾರ ಕ್ಕೀಡು ಮಾಡಲಿಲ್ಲ. ತಾನೂ ಮುಸ್ಲಿಂ ಆಗಿ ಮತಾಂತರಗೊಂಡು ಬಿಡುತ್ತೇನೆ ಎಂದು ಪ್ರೇರಣಾ ಪದೇ ಪದೇ ಕೇಳಿದಾಗಲೂ ಅದಕ್ಕೆ ಫಯಾಜ್ ತಡೆ ಹಾಕಿ, "ಬೇಡ; ನಿನ್ನ ಮನಸ್ಸು ಒಪ್ಪದೇ ಯಾವುದೇ ಮುಲಾಜಿಗೆ **convert** ಆಗಬೇಡ" ಎಂದೇ ಹೇಳಿದ್ದ. ಫಯಾಜ್ ದಿನಕ್ಕೆ ಐದು ಬಾರಿ ಮನೆಯಲ್ಲೇ ನಮಾಜ್ ಮಾಡುತ್ತಿದ್ದನಾದರೂ ಪ್ರೇರಣಾ ದೇವಸ್ಥಾನಕ್ಕೆ ಹೋಗುವುದಕ್ಕೆ ಯಾವತ್ತೂ ಅಡ್ಡಿ ಮಾಡಿದವನಲ್ಲ. ಆ ಮಟ್ಟಿಗೆ ಫಯಾಜ್ ಅಪ್ಪನ ಜಾತ್ಯತೀತವಾದವನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡಿದ್ದ.



ಇಬ್ರಾಹಿಂ ಮಗ ಮತ್ತು ಸೊಸೆ

"ಆದರೆ ಇಬ್ರಾಹಿಂ ದಂಪತಿ ಗಳು ಇದಕ್ಕೆ ತದ್ವಿರುದ್ಧ. ಇದನ್ನು ಮನಗಂಡೇ ರೋಸತ್ತ ಫಯಾಜ್ ಅಪ್ಪನ ಮನೆ ತೊರೆದು ಹಚ್ಚಿನ್ಸ್ ರಸ್ತೆಯ ಅಪಾರ್ಟ್‌ಮೆಂಟ್ ಒಂದಕ್ಕೆ ಸಂಸಾರ ಶಿಫ್ಟ್ ಮಾಡಿದರೆ, ಇಬ್ರಾಹಿಂ ಅಲ್ಲಿಗೂ ಹಾವಳಿಯಿಟ್ಟರು. ಮಗನ ತಲೆಗೆ ಇಲ್ಲದ ವೈಷಮ್ಯ ತುಂಬಿ ಧಮಕಿಕೊಟ್ಟು ಕರೆದೊಯ್ದೇ ಬಿಟ್ಟರು...." ಇದಿಷ್ಟು ಪ್ರೇರಣಾ ನೀಡಿರುವ ದೂರಿನ ಸಾರಾಂಶ.

ಇದಾಗಿ ಎರಡು ತಿಂಗಳುಗಳೇ ಸಂದಿವೆ. ಅವತ್ತು ಅಪ್ಪನ ಜೊತೆ ಹೋದ ಫಯಾಜ್ ಈತನಕ ವಾಪಸ್ಸಾಗಿಲ್ಲ. ಪ್ರೇರಣಾ ಮತ್ತು ಮಗ ಆಯಮಾನ್ ಏಕಾಂಗಿಯಾಗಿ ಹಚ್ಚಿನ್ಸ್ ರಸ್ತೆಯ ಅಪಾರ್ಟ್‌ಮೆಂಟ್‌ನಲ್ಲಿ ಕೊಳೆಯುತ್ತಿದ್ದರೆ ಇತ್ತ ಫಯಾಜ್‌ನನ್ನು ದುಬೈಗೆ ಸಾಗಹಾಕಿ ಮತ್ತೊಂದು ಮದುವೆ ಮಾಡಲು ಇಬ್ರಾಹಿಂ ಯತ್ನಿಸುತ್ತಿದ್ದಾರಂತೆ.

ಇಷ್ಟೆಲ್ಲಕ್ಕೂ ಇಬ್ರಾಹಿಂ ದಂಪತಿಗಳ ಧರ್ಮಾಂಧತೆ ಮತ್ತು ದುಡ್ಡಿನ ದಾಹವೇ ಕಾರಣ ಎಂದು ಪ್ರೇರಣಾ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ದೂರು ಕೊಟ್ಟಿದ್ದಾರೆ. ಪ್ರೇರಣಾಳ ತಂದೆತಾಯಿಗಳು ಇಬ್ರಾಹಿಂ ದಂಪತಿ ಗಳ ಮುಂದೆ ಕಣ್ಣೀರಿಟ್ಟಿದ್ದಾರೆ. ಮಗಳ ಬಾಳು ಹಾಳು ಮಾಡದಂತೆ ಬೇಡಿಕೊಂಡಿದ್ದಾರೆ. ದುರಂತವೆಂದರೆ ಭಾಷಣ ಬಿಗಿದು ಚಪ್ಪಾಳೆ ಗಿಟ್ಟಿಸುವ ಇಬ್ರಾಹಿಂ ಹೃದಯ ಮಾತ್ರ ಕರಗಲೇ ಇಲ್ಲ.

ಇಬ್ರಾಹಿಂ ಖ್ಯಾತಿ ಕುಖ್ಯಾತಿಗಳೇನೇ ಇರಲಿ. ತನ್ನ ಮಗನೇ ಮೆಚ್ಚಿ ಮದುವೆಯಾದ ಹೆಣ್ಣುಮಗಳ ವಿಷಯದಲ್ಲಿ ಅವರು ಕಟುಕರಾದರೆಂದರೆ ಅವರ ಭಾಷಣಕ್ಕೆ ಏನಾದರೂ ಅರ್ಥವುಂಟೆ? ಕನಿಷ್ಠ ಅವರದೇ ವಂಶದ ಕುಡಿಯನ್ನು ನೋಡಿಯೂ ಮನಸ್ಸು ಕರಗಲಿಲ್ಲ ಅಂದರೆ ಅವರನ್ನು ಮನುಷ್ಯ ಎನ್ನಬೇಕೆ?

ಡಿಯರ್ ಇಬ್ರಾಹಿಂ ನಿಮಗಿದು ಶೋಭೆಯೆ? ದಯವಿಟ್ಟು ನಿಮ್ಮೊಳಗಿನ ಮನುಷ್ಯನನ್ನು ಕೊಲ್ಲಬೇಡಿ. ಈಗಲಾದರೂ ಮನುಷ್ಯರಾಗಿ! ನಿಜವಾಗಿಯೂ ನಿಮ್ಮ ಜಾತ್ಯತೀತ ಸಿದ್ಧಾಂತಕ್ಕೆ ಬದ್ಧರಾಗಿ ತಮ್ಮ ಹಿಂದೂ ಸೊಸೆಯನ್ನು ಮನೆಗೆ ಆಹ್ವಾನಿಸಿ.

-ರಾ. ಸೋಮನಾಥ್

ಒಂದೆಡೆ ಮಹಿಳಾ ವೀವಿಯ ಭ್ರಷ್ಟಾಚಾರ, ಮತ್ತೊಂದೆಡೆ ಆರೋಗ್ಯ ವೀವಿಯ ಕರ್ಮಕಾಂಡಗಳ ದ್ಧ ಬೀದಿಗಿಳಿದು ಬೊಬ್ಬೆ ಹೊಡೆಯುತ್ತಿರುವ ವಿಪಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕು ಮಾತ್ರ ಏಕೆ ಕಾಣಿಸುತ್ತಿಲ್ಲ?

ಅದು ಬಲವೀರ ರೆಡ್ಡಿ ಉರ್ಫ್ ಬಲ್‌ರೆಡ್ಡಿಯ ದದ ಫಲ. ಕೇವಲ ಎಬಿವಿಪಿಗಷ್ಟೇ ಏಕೆ, ಅಂಥಾ ಪಾಲರಿಗೇ ಮಂಕುಬೂದಿ ಎರಚಬಲ್ಲ ಕಿಲಾಡಿ ಬಲವೀರರೆಡ್ಡಿ! ಅದ್ಯಾವ ಗಳಿಗೆಯಲ್ಲಿ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವೀವಿ ಸ್ಥಾಪನೆಯಾಯಿತೊ? ದ ಬಹುಪಾಲು ಇಂಜನಿಯರಿಂಗ್ ಕಾಲೇಜು ಸರ್ಪಯಾಗಕ್ಕೆ ಸಿಲುಕಿದ ಹಾವುಗಳಂತೆ ಬಂದು ವೀವಿಯೆಂಬ ಯಜ್ಞ ಕುಂಡಕ್ಕೆ ಬಿದ್ದವು.


ಇದರ ಮೊದಲ ಉಪಕುಲಪತಿ ರಾಜಶೇಖರಯ್ಯ ಗೆದ್ದು ಕಣ್ಣುಜ್ಜುವಷ್ಟರಲ್ಲೇ ಮೂರು ವರ್ಷ ದು ಹೋಗಿತ್ತು. ಎರಡನೇ ಉಪಕುಲಪತಿಯಾಗಿ ಸಿದವನೇ ಈ ಬಲವೀರರೆಡ್ಡಿ. ಅಲ್ಲಿಯ ತನಕ ತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕನಾಗಿದ್ದ ಬಲ್ ನೆಟ್ಟಗೆ ಕನ್ನಡವೂ ಗೊತ್ತಿಲ್ಲ, ಇಂಗ್ಲಿಷೂ ಕಷ್ಟ. ಲತಃ ಆಂಧ್ರದ ತಿರುಪತಿಯ ಈತ ಯಾವುದೋ ಸುರತ್ಕಲ್‌ನ ಸರ್ಕಾರಿ ಇಂಜನಿಯರಿಂಗ್ ಕಾಲೇಜಿ ಮೆಕ್ಯಾನಿಕಲ್ ಲಕ್ಚರರ್ ಆಗಿದ್ದ ಎಂಬುದು ಬಿಟ್ಟರೆ ಪ್ರಿನ್ಸಿಪಾಲ್ ಹುದ್ದೆಯ ಅನುಭವವೂ ಇಲ್ಲ. ಬ್ರಸ್ ಇಂಗ್ಲಿಷ್, ಹರುಕಲು ಕನ್ನಡದಲ್ಲಿ ಮಾತು ವಿಟ್ಟನೆಂದರೆ ವಾಕ್ಯ ಮುಗಿಸುವ ಹೊತ್ತಿಗೆ ತೆಲುಗು ಬೇಕು. ನೆಟ್ಟಗೆ ಕನ್ನಡ ಗೊತ್ತಿಲ್ಲದ, ಇಂಗ್ಲಿಷೂ ದ, ತೆಲುಗು ಬಿಟ್ಟರೆ ಬೇರಾವ ಭಾಷೆಯನ್ನೂ ದ ಬಲ್‌ರೆಡ್ಡಿಯನ್ನು ಅದ್ಯಾವ ಯೋಗ್ಯತೆಯ ಗೆ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕನನ್ನಾಗಿ ಸಲಾಯ್ತೋ ಇವತ್ತಿಗೂ ನಿಗೂಢ.

ಇಂಥವನನ್ನು ತಂದು ಬೆಳಗಾವಿಯ ವಿಶ್ವೇಶ್ವರಯ್ಯ ಕ ವಿಶ್ವವಿದ್ಯಾಲಯದ ಉಪಕುಲಪತಿಯನ್ನಾಗಿ ದುವಲ್ಲಿ ಕಾಂಚಾಣದ ಜೊತೆ ಬೆಂಗಳೂರು ಯ ಮಾಜಿ ಉಪಕುಲಪತಿ ಎನ್ನಾರ್ ಶೆಟ್ಟಿಯ ಬುದ್ಧಿಯೂ ಕೆಲಸ ಮಾಡಿತ್ತು. ಹಾಳಾಗಲಿ, ಶ್ವರಯ್ಯ ತಾಂತ್ರಿಕ ವೀವಿಯ ಉಪಕುಲಪತಿ ಸ್ಥಾನಕ್ಕೆ ಮೇಲಾದರೂ ಈತ ಸುಧಾರಿಸಿದನಾ? ಬಂದು ವನೇ ಬಾಲಾಜಿ ಮತ್ತು ಮಲೆಯಾಳಿ ಕುಟ್ಟಿ ಇಂಜಿನಿಯರಿಂಗ್ ಸೀಟು ಬ್ರೋಕರುಗಳ ಕೈಗೆ ಪತಿ ಹುದ್ದೆಯನ್ನಿಟ್ಟ. ಯಾವ್ಯಾವ ಇಂಜನಿ ರಿಂಗ್ ಕಾಲೇಜುಗಳಿಗೆ ದಿಮ್ಮೂರಿದೆಯೋ ಅವರೆಲ್ಲ

ತಾಂತ್ರಿಕ ವೀವಿಗೆ ವಕ್ರ ಬಲವೀರರೆಡ್ಡಿಯ ಕಳ್ಳಾಟ

ವರ್ಷಕ್ಕೊಂದು ಸೀಟು ಬಿಟ್ಟು ಕೊಡಲೇಬೇಕು. ಅದಕ್ಕೆ ಬಾಲಾಜಿ ಮತ್ತು ಮಲೆಯಾಳಿ ಕುಟ್ಟಿಗಳೇ ಬ್ರೋಕರುಗಳು!

ಇದಕ್ಕಿಂತಲೂ ಅಪಾಯಕಾರಿ ದಂಧೆಯೊಂದಕ್ಕೆ ಬಲ್‌ರೆಡ್ಡಿ ಕೈಯಿಟ್ಟ. ಅದು ಆಂಧ್ರದ ನೆಲಗಳ್ಳರು ಮತ್ತು ಲಿಕ್ಕರ್ ಖದೀಮರನ್ನು ಹಿಡಿದು ಅವರಿಗೆಲ್ಲ ಒಂದೊಂದು ಇಂಜಿನಿಯರಿಂಗ್ ಕಾಲೇಜು ಮಂಜೂರು ಮಾಡುವುದು. ಸಾಮಾನ್ಯವಾಗಿ ಮಠಾಧೀಶರಿಗೆ ವಿದ್ಯೆಯ ಹಿನ್ನೆಲೆಯಿರುತ್ತದೆ. ಎಂ.ಎಸ್. ರಾಮಯ್ಯ, ಪ್ರೇಮ್‌ಚಂದ್ರ ಸಾಗರ್, ದೊರೆಸ್ವಾಮಿ ನಾಯ್ಡು ಇತ್ಯಾದಿಗಳೆಲ್ಲ ವ್ಯವಹಾರಕ್ಕೆ ಕಾಲೇಜು ತೆರೆದರೂ ಉದ್ದೇಶ ಮಾತ್ರ ಶಿಕ್ಷಣವಾಗೇ ಇರುತ್ತದೆ. ಆದರೆ ಏಟ್ರಿಯಾ ಹೋಟೆಲ್ ಧಣಿ ಚಿನ್ನಸ್ವಾಮಿರಾಜುಗೆ ಯಾವ ವಿದ್ಯೆಯ ಗಂಧವಿದೆ! ಸಪ್ತಗಿರಿ ಲಿಕ್ಕರ್ ಖದೀಮ ಗಿರಿಯಪ್ಪ ಇವತ್ತಿಗೂ ಹೆಬ್ಬೆಟ್ಟು ಗಿರಾಕಿಯೆ.



ಬಲಬೀರ್ ರೆಡ್ಡಿ

ಇಂಥವರನ್ನೆಲ್ಲ ಹಿಡಿದು ತಂದು ಒಂದೊಂದು ಇಂಜನಿಯರಿಂಗ್ ಕಾಲೇಜು ಮಂಜೂರು ಮಾಡಿಸಿದ ಕೀರ್ತಿ ಈ ಬಲ್‌ರೆಡ್ಡಿಗೇ ಸಲ್ಲಬೇಕು. ಮತ್ತೊಬ್ಬ ಲಿಕ್ಕರ್ ಕುಳ ಆದಿಕೇಶವುಲುಗೊಂದು, ಕಳ್ಳ ಕಂಟ್ರಾಕ್ಟರ್ ಶಾಮರಾಜುಗೆ ರೇವಾ ಹೆಸರಲ್ಲಿ ಮತ್ತೊಂದು, ಇನ್ನೊಬ್ಬ ಕಂಟ್ರಾಕ್ಟರ್ ಚಾಮರಾಜುವಿಗೆ ವಿಶ್ವೇಶ್ವರಯ್ಯ ಐಟಿಯ ಹೆಸರಲ್ಲಿ ಮಗದೊಂದು; ಹೀಗೆ ಕಳ್ಳ ಕಂಟ್ರಾಕ್ಟರುಗಳು, ಸಾರಾಯಿ ದೊರೆಗಳು, ನೆಲಗಳ್ಳ ರೆಡ್ಡಿಗಳನ್ನೆಲ್ಲ ಕರೆಕರೆದು ಇಂಜಿನಿಯರಿಂಗ್ ಕಾಲೇಜು ಮಾಡಿಸಿಕೊಟ್ಟವನೇ ಖದೀಮ ಬಲವೀರರೆಡ್ಡಿ. ಹೋಗಲಿ ಕಾಲೇಜು ತೆರೆದ ಮೇಲಾದರೂ ಇವರಿಗೆ ಶಿಕ್ಷಣದ ಬಗ್ಗೆ ಕಾಳಜಿ ಹುಟ್ಟುತ್ತಾ? ಇವರ ಅಸಲೀ ಉದ್ದೇಶವೇ ಇಂಜಿನಿಯರಿಂಗ್ ಕಾಲೇಜಿನ ಹೆಸರಲ್ಲಿ ಲ್ಯಾಂಡ್ ಗ್ರ್ಯಾಬಿಂಗ್!

ಶಿಕ್ಷಣ ಸಂಸ್ಥೆಗಳ ಹೆಸರಲ್ಲಿ ಬೆಂಗಳೂರು ಸುತ್ತಮುತ್ತ ಬೇಕಾಬಿಟ್ಟಿ ಲ್ಯಾಂಡ್ ಖರೀದಿಸಿ ಇಟ್ಟುಕೊಳ್ಳಬಹುದು. ಅದನ್ನು ಕನ್ವರ್ಷನ್ ಮಾಡುವುದೂ ಬೇಕಿಲ್ಲ. ಸರ್ಕಾರ ಅದರ ತಂಟೆಗೇ ಬರುವುದಿಲ್ಲ. ಒಳ್ಳೇ ರೇಟು ಬಂದಿದ್ದೇ ಕಾಲೇಜನ್ನು ಬೇರೆ ಅಡ್ರೆಸ್ಸಿಗೆ ಸಾಗ ಹಾಕಿ ಜಮೀನನ್ನು ಮಾರಿಕೊಳ್ಳಬಹುದು. ಇದು ಏಟ್ರಿಯಾ ಖದೀಮ ಚಿನ್ನಸ್ವಾಮಿ ರಾಜು, ಕಳ್ಳ ಕಂಟ್ರಾಕ್ಟರ್ ಶಾಮರಾಜು, ಆಕ್ಸ್‌ಫರ್ಡ್ ನರಸರಾಜು, ಸಪ್ತಗಿರಿ ಗಿರಿಯಪ್ಪ, ಆದಿಕೇಶವುಲು, ರೇವಾ ಶಾಮರಾಜು ಮುಂತಾದವರ ಹುನ್ನಾರ. ಇದಕ್ಕೆ ಏನೇನು ಬೇಕೋ ಎಲ್ಲವನ್ನೂ ಮಾಡುತ್ತಾ ಬಂದ ಬಲ್‌ರೆಡ್ಡಿಗೆ ತಾಂತ್ರಿಕ ವೀವಿ ಉಪಕುಲಪತಿ ಹುದ್ದೆ ಸಿಕ್ಕರೆ ಇನ್ನೇನಾಗುತ್ತದೆ?

ಒಂದೆರಡು ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ ಹೊರತಾಗಿ ಕರ್ನಾಟಕದ ಸರಿಸುಮಾರು ನೂರಿಪ್ಪತ್ತು ಇಂಜನಿಯರಿಂಗ್ ಕಾಲೇಜುಗಳ ತಾಂತ್ರಿಕ ವೀವಿಯ ಅಧೀನಕ್ಕೊಳಪಡುತ್ತವೆ. ಈ ಪೈಕಿ ಅರ್ಧದಷ್ಟನ್ನು ಮಠಾಧೀಪತಿಗಳು ಮತ್ತು ರಾಜಕಾರಣಿಗಳು ನಡೆಸುತ್ತಾರೆ. ಬಲ್‌ರೆಡ್ಡಿ ಎಂಥಾ ಪ್ರಚಂಡನೆಂದರೆ ಇಂಥ ಪ್ರಭಾವಿಗಳ ಕಾಲೇಜುಗಳ ತಂಟೆಗೇ ಹೋಗುವುದಿಲ್ಲ. ಯಾವ್ಯಾವ ಕಾಲೇಜುಗಳಿಗೆ ಪ್ರಭಾವವಿಲ್ಲವೋ, ಯಾರು ಕಾಸು ಬಿಚ್ಚುತ್ತಾರೋ ಅಂಥಲ್ಲಿಗೆಲ್ಲ ತನ್ನ ಅಳಿಯ ಪ್ರಭಾಕರ್ ರೆಡ್ಡಿಯನ್ನು ಇನ್ಸ್‌ಪೆಕ್ಷನ್ನಿಗೆ ಕಳಿಸುತ್ತಾನೆ. ಈ ಪ್ರಭಾಕರ್ ರೆಡ್ಡಿ ಕೋಲಾರದ ಮುನಿಯಪ್ಪನವರ ಶ್ರೀಕೃಷ್ಣ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್. ಈತನನ್ನೇ ಕರೆಕರೆದು ಎಲ್‌ಐಸಿ ಕಮಿಟಿಗೆ ನೇಮಿಸುತ್ತಾ ಬಂದ ಬಲ್‌ರೆಡ್ಡಿ ಖಾಸಗಿ ಇಂಜನಿಯರಿಂಗ್ ಕಾಲೇಜುಗಳ ಸುಲಿಗೆ ಮಾಡುತ್ತಲೇ ಬಂದಿದ್ದಾನೆ. ರೆಡ್ಡಿಯ ದುರಾಚಾರವನ್ನು ಪ್ರಶ್ನಿಸುವ ಅಧಿಕಾರ ಇರುವುದು ವೀವಿಯ ಎಕ್ಸಿಕ್ಯೂಟಿವ್ ಕೌನ್ಸಿಲ್ಗೆ (EC) ಮಾತ್ರ. ಆದರೆ ಇಸಿಗೆ ನೇಮಕಗೊಂಡವರೆಲ್ಲ ರೆಡ್ಡಿಯ ಛೇಲಾಗಳೇ.

ಹೀಗೆ ಸತತ ಆರು ವರ್ಷಗಳಿಂದ ವಿಶ್ವೇಶ್ವರಯ್ಯ ತಾಂತ್ರಿಕ ವೀವಿಯನ್ನು ಮುಕ್ಕುತ್ತಲೇ ಬಂದ ಬಲವೀರ ರೆಡ್ಡಿಯ ಅಧಿಕಾರಾವಧಿ ಇದೇ ಮಾರ್ಚ್ 30 ಕ್ಕೆ ಮುಗಿಯಬೇಕಿತ್ತು. ಏಪ್ರಿಲ್ ಒಂದಕ್ಕೆ ಹೊಸ ಉಪಕುಲಪತಿಯ ನೇಮಕವಾಗುತ್ತದೆಯೆಂದೇ ಎಲ್ಲರೂ ಲೆಕ್ಕ ಹಾಕಿದ್ದರು. ದುರಂತವೆಂದರೆ ಬಲ್‌ರೆಡ್ಡಿ ಗವರ್ನರ್ ಟಿ.ಎನ್. ಚತುರ್ವೇದಿಯವರಿಗೆ ಮಂಕುಬೂದಿ ಎರಚಿದ್ದ. ಈಗಾಗಲೇ ವೀಸಿ ಗಾದಿಯ ಎರಡನೇ ಅವಧಿಯನ್ನೂ ಪೂರೈಸಿರುವ ರೆಡ್ಡಿಗೆ ಮೂರನೇ ಅವಧಿಗೂ ತಾನೇ ಮುಂದುವರಿಯುವ ದುರಾಶೆ. ಅದಾಗದಿದ್ದರೆ ಕನಿಷ್ಠ ಇನ್ನೊಂದು ವರ್ಷಕ್ಕಾದರೂ ವೀಸಿಯಾಗೇ ಚಾಲ್ತಿಯಲ್ಲಿರಬೇಕಾದ ಅನಿವಾರ್ಯತೆ. ಏಕೆ ಗೊತ್ತೆ? ಮುಂಬರುವ ಅಡ್ಮಿಷನ್ ಹೊತ್ತಿಗೆ ಬರೇ ಸೀಟು ದಂಧೆಯಿಂದಲೇ ಕಮ್ಮಿಯೆಂದರೂ ಐದು ಕೋಟಿ ದೋಚಬಹುದಲ್ಲ? ಇದು ಬಲ್‌ರೆಡ್ಡಿಯ ಹುನ್ನಾರ.

ಈಗಾಗಲೇ ಗುಲ್ಬರ್ಗಾದ ಕ್ಯಾಂಪಸ್ ಕಟ್ಟಡದ ಕಾಮಗಾರಿಯನ್ನು ತನ್ನ ಆಂಧ್ರದ ಸಂಬಂಧಿ ತಿರುಪತಿಯ ರಾಮ್ಕಿ ಕನ್ಸ್‌ಟ್ರಕ್ಷನ್‌ಗೆ ಮಾರಿಕೊಂಡಿದ್ದಾನೆ. ತನಗೆ ಪ್ರಸಾದ ತಿನ್ನಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಇಂಪ್ಯಾಕ್ಟ್, ನಾಡಗೀರ್, ಎಸ್‌ಇಟಿ, ಬಾಗಲಕೋಟೆಯ SECAB ಮುಂತಾದ ಇಂಜನಿಯರಿಂಗ್ ಕಾಲೇಜುಗಳ ಪರವಾನಗಿ ರದ್ದುಪಡಿಸಿದ ಇದೇ ರೆಡ್ಡಿ ಯಾವುದೇ ಯೋಗ್ಯತೆಯಿಲ್ಲದ ಆಲ್ಫಾ ಮತ್ತು ಏಟ್ರಿಯಾ ಥರದ ಕಳಪೆ ಇಂಜನಿಯರಿಂಗ್ ಕಾಲೇಜುಗಳನ್ನು ಪೋಷಿಸುತ್ತಲೇ ಬಂದಿದ್ದಾನೆ.

ದುಡ್ಡು ಹುಟ್ಟುತ್ತದೆ ಎಂದರೆ ಎಲ್ಲಿಗೆ ಬೇಕಾದರೂ ರೆಡ್ಡಿ ಬಾಯಿಹಾಕಬಲ್ಲ. ಕರ್ನಾಟಕದ ತಾಂತ್ರಿಕ ಶಿಕ್ಷಣವನ್ನು ದೋಚಿಯೇ ಮಗನ ಹೆಸರಲ್ಲಿ ವೈಟ್‌ಫೀಲ್ಡ್‌ನಲ್ಲಿ ನಲವತ್ತು ಕೋಟಿಯ ಕೋಚ್ ಬಿಲ್ಡಿಂಗ್ ಘಟಕ, ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಮೂರು ಕೋಟಿಯ ಬಂಗಲೆ ಮತ್ತು ಬೆಂಗಳೂರೊಂದರಲ್ಲೇ ಇಪ್ಪತ್ತೆರಡು ಸೈಟು ಖರೀದಿಸಿ ಮಡಗಿದ್ದಾನೆ. ಇಷ್ಟಾಗ್ಯೂ ಮತ್ತೆ ತಾಂತ್ರಿಕ ವೀವಿಗೇ ವಕ್ಕರಿಸುತ್ತಿದ್ದಾನಲ್ಲ, ಗತಿಯೇನು?

ಯಾವ ಲೆಕ್ಕಾಚಾರದಲ್ಲೂ ಮತ್ತೆ ರೆಡ್ಡಿಗೆ ವೀಸಿ ಗಿರಿ ಸಿಗುವಂತಿಲ್ಲ. ಆದರೆ ರಾಜ್ಯಪಾಲರ ಕೃಪೆಯೋ ಏನೋ. ಇದೇ ಏಪ್ರಿಲ್ 1 ಕ್ಕೆ ಹೊಸ ವೀಸಿಯನ್ನು ನೇಮಿಸಬೇಕಿತ್ತು. ರಾಜ್ಯಪಾಲರು ಈತನಕ ನೇಮಕಾತಿ ಆದೇಶವನ್ನೇ ಕೊಟ್ಟಿಲ್ಲ. ನೇಮಕಾತಿಗೆಂದು ಶೋಧನಾ ಸಮಿತಿ ಇದ್ದಾಗ್ಯೂ ಸಾಕಷ್ಟು ಅರ್ಹರು ಕರ್ನಾಟಕದಲ್ಲೇ ಕೊಳೆಯುತ್ತಿದ್ದರೂ ವೀಸಿ ಹುದ್ದೆಗೆ ಜಾಹೀರಾತು ಕೊಟ್ಟು ಅರ್ಜಿ ಕರೆಯುವುದು ಯಾವ ನ್ಯಾಯ? ಬಲ್‌ರೆಡ್ಡಿಯ ಬಲೆ ಬುದ್ಧಿಗೆ ರಾಜ್ಯಪಾಲರೇ ಬಲಿಯಾಗಿರಬಹುದೇ? ಕರ್ನಾಟಕದ ತಾಂತ್ರಿಕ ಶಿಕ್ಷಣದ ದುರಂತ ಹೀಗೂ ಇರುತ್ತಾ?

-ರಾ.ಸೋ



ಮಂಡ್ಯ: ದಲಿತರ ಭೂಮಿಗೆ ಕೈಯಿಟ್ಟ ಚೆಡ್ಡಿ ದಾದಾ

ಸಂಘ ಪರಿವಾರದ ಚೆಡ್ಡಿಗಳು ಜಪಿಸುವ 'ಹಿಂದೂ-ಹಿಂದೂ ಭಾಯಿ-ಭಾಯಿ' ಮಂತ್ರದ ಅಸಲಿ ಅರ್ಥ ಬೇಕಾದರೆ ಮಂಡ್ಯಕ್ಕೆ ಒಮ್ಮೆ ಬಂದು ಹೋಗಿ. ಈ ಮಂತ್ರವನ್ನು ಜಪಿಸುತ್ತಲೇ ದಲಿತರೂ ನಮ್ಮವರೇ, ಅವರೂ ನಮ್ಮ ಭಾಯಿಗಳೇ ಎನ್ನುತ್ತಲೇ ಅವರ ಸೂರು, ನೆಲವನ್ನು ಕಿತ್ತುಕೊಂಡು ದಲಿತ ಭಾಯಿಗಳನ್ನು ನಿರಾಶ್ರಿತರನ್ನಾಗಿ ಮಾಡುವ ಕೆಲಸವನ್ನು ಚೆಡ್ಡಿಗಳು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ, ಬಾಯಲ್ಲಿ ಭಾಯಿ-ಭಾಯಿ ಬೆಣ್ಣೆ ಬಗಲಲ್ಲಿ ಬಗಣಿಯ ದೊಣ್ಣೆ-ಹೇಗಿದೆ ಜನಿವಾರದ ಚೆಡ್ಡಿಗಳ ಮಂತ್ರದ ಅಸಲೀ ತಿರುಳು.

ಮಂಡ್ಯದಲ್ಲಿ ಅಭಿನವ ಭಾರತಿ ಶಿಕ್ಷಣ ಸಂಸ್ಥೆ ಅಂತ ಸಂಘ ಪರಿವಾರದ ಚೆಡ್ಡಿಗಳ ಅಡ್ಡೆಯೊಂದಿದೆ. ಅದಕ್ಕೆ ಅನಂತಕುಮಾರ್ ದಾದಾ ಎಂಬ ಅಡ್ನಾಡಿ ಚೆಡ್ಡಿ ಮುಖ್ಯಸ್ಥನೊಬ್ಬನಿದ್ದಾನೆ. ಇವನು ದಲಿತರೇ ವಾಸಿಸುವ ಆರ್‌ಟಿಓ ಸ್ಲಂನ್ನು ಖಾಲಿ ಮಾಡಿಸಿ ಆ ಜಾಗವನ್ನು ನುಂಗಿ ನೀರು ಕುಡಿಯುವ ಯೋಜನೆ ರೂಪಿಸಿ ಅವನಿಂದಲೇ ಒದೆಸಿಕೊಳ್ಳುವ ಕೆಲಸವನ್ನು ಎಲ್ಲ ಸ್ಲಮ್ಮುಗಳ ಜನರಂತೆಯೇ ಆರ್‌ಟಿಓ ಸ್ಲಮ್ಮಿನ ದಲಿತರೂ ಮಾಡುತ್ತಲೇ ಬಂದಿದ್ದಾರೆ. ಆದ್ದರಿಂದಲೇ ಆತ್ಮಾನಂದನ ಕುಟುಂಬವು ಕಳೆದ 30-40 ವರ್ಷಗಳಿಂದ ಮಂಡ್ಯದಲ್ಲಿ ಪಾಳೆಗಾರಿಕೆ ನಡೆಸಲು ಸಾಧ್ಯವಾಗಿರುವುದು. ಸ್ವತಃ ಆತ್ಮಾನಂದನ ಸಹೋದರ ಸತ್ಯಾನಂದನೇ ಖುದ್ದಾಗಿ ಆರ್‌ಟಿಓ ಸ್ಲಮ್ಮಿಗೆ ಬಂದು ತನಗೆ ಓಟು ಹಾಕಿದ ದಲಿತರಿಗೆ ಸ್ಲಮ್ ಜಾಗವನ್ನು ಖಾಲಿ ಮಾಡಿ ಅಂತ ಅಪ್ಪಣೆ ಕೊಟ್ಟ. ರಾಜಕಾರಣಿಗಳು ಸ್ಲಮ್‌ನಲ್ಲಿ ಸರಿಯಾದ ಸೂರಿಲ್ಲದೇ ಬದುಕುವ ಜನರಿಗೆ ಮನೆ ಕಟ್ಟಿಸಿ ಕೊಡುತ್ತೇವೆ ಅಂತ ಸೌಜನ್ಯಕ್ಕಾದರೂ ಬೊಗಳೆ ಬಿಡುತ್ತಾರೆ. ಆದರೆ ಸತ್ಯಾನಂದ ಜನರಿಗೆ ಹೇಳಿದ್ದು ಜಾಗ ಖಾಲಿ ಮಾಡಿ ಅಂತ. ಇದು ಓಟು ಹಾಕಿದ ತಪ್ಪಿಗೆ ಜನರಿಗೆ ಆತ ಕೊಟ್ಟ ಬಳುವಳಿ. ಇನ್ನು ಸ್ವತಃ ದಲಿತನೇ ಆಗಿರುವ ಚಂದ್ರಪ್ರಸಾದ್ ತ್ಯಾಗಿ ಸ್ಲಂ ಬೋರ್ಡ್‌ನ ಅಧ್ಯಕ್ಷನಾಗಿ ಎರಡೆರಡು ಬಾರಿ ಈ ಸ್ಲಂಗೆ ಬಂದು ಪೋಸು ಕೊಟ್ಟು ಹೋದ. ಅವನು ದಲಿತರಿಗೆ ಮನೆ ಕಟ್ಟಿ ಕೊಡುವುದಿರಲಿ, ಕನಿಷ್ಠ ಆ ಪ್ರದೇಶವನ್ನು ಕಾಯಿದೆ ಪ್ರಕಾರ 'ಕೊಳಚೆ ಪ್ರದೇಶ' ಅಂತ ಘೋಷಣೆ ಮಾಡಲಿಲ್ಲ. ಪ್ರಾಯಶಃ ಈ ಪ್ರಸಾದನಿಗೆ ಸ್ಲಂ ಮೇಲೆ ಕಣ್ಣಿಟ್ಟಿರುವ ಜನರಿಂದ 'ಪ್ರಸಾದ' ಸಿಕ್ಕಿರಬೇಕು. ಹೀಗೆ ಅತಂತ್ರ ಸ್ಥಿತಿಯಲ್ಲಿ ದಲಿತರು ಬದುಕುತ್ತಿರುವುದನ್ನೇ ಬಂಡವಾಳ ಮಾಡಿಕೊಂಡು ಇಡೀ ಆರ್‌ಟಿಓ ಸ್ಲಮ್ ಭೂಮಿಯನ್ನು ಕಬಳಿಸುವ ಕಂತ್ರಿ ಪ್ಲಾನ್ ರೆಡಿ ಮಾಡಿಕೊಂಡು ಬಂದವನೇ ಸಂಘ ಪರಿವಾರದ ಚೆಡ್ಡಿ ಅನಂತಕುಮಾರ್ ದಾದಾ.



ಸ್ಲಂ ಜನರ ಜಾಗದಲ್ಲಿ ನಡೆಯುತ್ತಿರುವ ಕಾಮಗಾರಿ

ಬಿಹಾರದಿಂದ ಓಡಿ ಬಂದ

ಕಳ್ಳ ಸನ್ಯಾಸಿಯ ಗೆಟಪ್ಪಿನಲ್ಲಿರುವ ಈ ದಾದಾ ಭೂಕಬಳಿಕೆಯಲ್ಲಿ ಯಾವ ರಾಜಕಾರಣಿ, ರಿಯಲ್ ಎಸ್ಟೇಟ್ ಖದೀಮರಿಗಿಂತ ಏನೂ ಕಡಿಮೆ ಇಲ್ಲ. ಮೊದಮೊದಲು ಬಿಹಾರದ ದೇವಾಲಯಗಳಲ್ಲಿ ಬರುವ ಭಕ್ತಾದಿಗಳಿಗೆ ಮೂರು ನಾಮ ಬಳಿದು ನಾಲ್ಕಾಣೆ, ಎಂಟಾಣೆ ಗಿಟ್ಟಿಸುತ್ತಿದ್ದ. ಅಲ್ಲಿ ಅವನಿಗೆ ಏನು ಕೊರತೆಯಾಯಿತೋ ಗೊತ್ತಿಲ್ಲ, ಸೀದಾ ಮಂಡ್ಯಕ್ಕೆ ಓಡಿ ಬಂದ. ಓಡಿಬಂದನೋ ಅಥವಾ ಓಡಿಸಿದರೋ ಗೊತ್ತಿಲ್ಲ, ಮಂಡ್ಯಕ್ಕೆ ಬಂದ ಹೊಸತರಲ್ಲಿ ತಾನು ಆನಂದ ಮಾರ್ಗಿ ಎಂದು ಹೇಳುತ್ತಾ ಸಿಕ್ಕಸಿಕ್ಕವರ ಬಳಿ ಕಾಸು ಕೀಳಲಾರಂಭಿಸಿದ. ಯಾವಾಗ ಪೊಲೀಸರ ಒದೆ ಕುಂಡೆಯ ಮೇಲೆ ಬಿದ್ದು ಬಾಸುಂಡೆ ಏಳಲಾರಂಭಿಸಿದವೋ ರಕ್ಷಣೆಗಾಗಿ ಸಂಘಪರಿವಾರ ಸೇರಿ ಆಶ್ರಯ ಪಡೆದ. ಸಂಘ ಪರಿವಾರದ ಚೆಡ್ಡಿಗಳಿಗೂ ಇಂತಹ ಖದೀಮ ಭಾಯಿ ಬೇಕಾಗಿತ್ತು, ಆಶ್ರಯ ಕೊಟ್ಟು ಭಾಯಿ-ಭಾಯಿ ಆದರು.

ಸಂಘಪರಿವಾರದ ಪಾಳೆಯದಲ್ಲಿ ಗಟ್ಟಿಯಾಗಿ ತಳವೂರುತ್ತಿದ್ದಂತೆಯೇ ಆಗಿನ ಸಚಿವ ಎಸ್.ಡಿ. ಜಯರಾಮ್‌ನ ತಲೆ ತಿಕ್ಕಿ ಅಭಿನವ ಭಾರತ ಶಿಕ್ಷಣ ಸಂಸ್ಥೆ ಸ್ಥಾಪನೆಗೆಂದು ಡಿ.ಸಿ. ಕಛೇರಿಯ ಹಿಂಭಾಗದಲ್ಲಿಯೇ ಸರ್ಕಾರಿ ಜಮೀನನ್ನು ಮಂಜೂರು ಮಾಡಿಸಿಕೊಂಡ. ಹೀಗೇನೇ ಮಂಡ್ಯ ಜಿಲ್ಲೆಯ ಅಧಿಕಾರಸ್ಥ ರಾಜಕಾರಣಿಗಳನ್ನೆಲ್ಲಾ ಎಳೆತಂದು, ತನ್ನ ತಿಕ್ಕಲುತನದ ಧ್ಯಾನ (ಅಧ್ಯಾನ) ಕಾರ್ಯಕ್ರಮಗಳನ್ನೂ ಮಾಡಿ, ಹಾರ-ತುರಾಯಿಗಳಿಗೆ ಕೊರಳೊಡ್ಡಿಸಿ ಕನಿಷ್ಠ ಹದಿನೈದು ಕಡೆ ಶಿಕ್ಷಣ ಸಂಸ್ಥೆಗಳೆಂಬ ಬಿಸಿನೆಸ್ ಸೆಂಟರ್‌ಗಳನ್ನು ತೆರೆದ. ಈ ಎಲ್ಲಾ ಸ್ಕೂಲುಗಳೂ ಭರ್ತಿ ಆದಾಯ ತರುವ ಸೆಂಟರ್‌ಗಳೇ. ಶಾಲಾ ಮಕ್ಕಳಿಗಾಗಿ ಕ್ರೀಡಾ ಸಾಮಗ್ರಿ, ಅದೂ ಇದೂ ಅಂತ ಸರ್ಕಾರ ಮಂಜೂರು ಮಾಡುವ ಎಲ್ಲಾ ಹಣವನ್ನು ತಾನೇ ನುಂಗಿ ನೀರು ಕುಡಿದು ಸುಳ್ಳು ಲೆಕ್ಕ ಬರೆದ. ತಿಂದೂ ತಿಂದೂ ಗುಂಡಗಾಗಿ ಬೆಳೆದ. ಬಿಸಿನೆಸ್ ಹೆಚ್ಚಾಗುತ್ತಿದ್ದಂತೆ ಭರ್ಜರಿ ಕಾರು ಖರೀದಿಸಿ ಆದಿಚುಂಚನಗಿರಿ ಸ್ವಾಮಿ ತನಗೆ ಗಿಫ್ಟ್ ಕೊಟ್ಟಿದ್ದಾರೆ ಎಂದು ಪೋಜು ಕೊಡುತ್ತಾ ತಿರುಗಾಡಿದ.

ಮತ್ತೆ ವಿದ್ಯಾಶಂಕರ್ ಎಂಬ ಬೊಮ್ಮನ್ ಮಂಡ್ಯದ ಜಿಲ್ಲಾಧಿಕಾರಿಯಾಗಿ ಬರುತ್ತಿದ್ದಂತೆಯೇ ಇವರಿಬ್ಬರ 'ಭಾಯಿ-ಭಾಯಿ' ಶುರುವಾಯಿತು. ವಿದ್ಯಾಶಂಕರ ಭಾಯಿ ಅನಂತಕುಮಾರ್ ಭಾಯಿಗೆ ದಲಿತರು ವಾಸಿಸುವ ಆರ್‌ಟಿಓ ಸ್ಲಮ್‌ನಲ್ಲಿ ಆರೂವರೆ ಗುಂಟೆ ಭೂಮಿ ಮಂಜೂರು ಮಾಡಿ ಕೊಟ್ಟ. ಸರಿ ಸುಮಾರು ಒಂದು ಕೋಟಿಗೆ ಬಾಳುವ ಆರ್‌ಟಿಓ ಸ್ಲಂನ ಭೂಮಿಯಿಂದ ದಲಿತರನ್ನು ಓಡಿಸುವ ಕೆಲಸ ಆಗ ಶುರುವಾಯಿತು. ಈ ಇಬ್ಬರೂ ಭಾಯಿಗಳು ಆ ಜಾಗವನ್ನು ಕಬಳಿಸಿದ್ದು ಅಲ್ಲಿ ವಾಸಿಸುವ ದಲಿತ ಬಡಪಾಯಿಗಳಿಗೆ ಗೊತ್ತೇ ಇರಲಿಲ್ಲ.



ಮಂಡ್ಯದ ಡಿಸಿ ರವಿಶಂಕರ್

ದೇವೇಗೌಡರಿಂದಲೂ ಲೆಟರ್ ತಂದ

ಕೋಟಿ ಬೆಲೆ ಬಾಳುವ ಜಮೀನು ಅನಂತಕುಮಾರನ ತೆಕ್ಕೆಗೆ ಬಿದ್ದ ಮೇಲೆ ಅಲ್ಲಿ ವಾಸಿಸುವ ದಲಿತರನ್ನು ಓಡಿಸುವುದಕ್ಕೆ ಅವನು ಭಾರಿ ಚುರುಕಾಗಿ ಕೆಲಸ ಮಾಡಿದ. ಎಚ್.ಡಿ. ದೇವೇಗೌಡ, ಎಸ್.ಎಂ. ಕೃಷ್ಣ ಧರ್ಮಸಿಂಗ್‌ರಂತಹ ದೊಡ್ಡ ದೊಡ್ಡ ರಾಜಕೀಯ ಕುಳಗಳ ಮನೆಬಾಗಿಲು ಕಾದು ಸ್ಲಮ್ ಡಿಮೋಲಿಷನ್‌ಗೆ ಶಿಫಾರಸ್ಸು ಪತ್ರಗಳನ್ನು ತಂದ. ಇವನು ತಂದ ಅನ್ನುವುದಕ್ಕಿಂತ ಆ ಮಹಾಶಯರು ಕೊಟ್ಟರು ಎಂದು ಹೇಳುವುದೇ ಸೂಕ್ತ. ಆದರೆ ತಮ್ಮ ಸೂರಿಗೂ ಕುತ್ತು ತಂದಿಡುತ್ತಿರುವ ಅನಂತ ದಾದಾನ ಚೆಡ್ಡಿ ತಂತ್ರ ಗೊತ್ತಾಗುತ್ತಿದ್ದಂತೆಯೇ ಸ್ಲಮ್‌ನ ಜನ ಸ್ಲಮ್ ಒಕ್ಕೂಟ ಹೋರಾಟ ಸಮಿತಿ ರಚಿಸಿಕೊಂಡು ಬೀದಿಗಿಳಿದಿದ್ದರು. ಸಿಡಿದ ದಲಿತ ಶಕ್ತಿಯ ಎದುರು ಮಹಾಶಯರು ಕೊಟ್ಟ ಶಿಫಾರಸ್ಸು ಲೆಟರ್‌ಗಳು ಮಣ್ಣು ಮುಕ್ಕಿದವು.



ಎಂ. ಶ್ರೀನಿವಾಸ್

ಈಗಾಗಲೇ ಕುತಂತ್ರಗಳನ್ನು ಶುರುವಿಟ್ಟುಕೊಂಡಿದ್ದಾನೆ. ಸ್ಲಂನ ನಿವಾಸಿಗಳೆಲ್ಲರೂ ಒಗ್ಗಟ್ಟಾಗಿ ಸ್ಲಮ್ ಒಕ್ಕೂಟ ರಚಿಸಿಕೊಂಡು ಸತತವಾಗಿ ಹೋರಾಟ ನಡೆಸಿದ ಪ್ರತಿಫಲವಾಗಿ ತಲೆಯ ಮೇಲೆ ಸೂರು ಕಾಣುವ ಕನಸು ನನಸಾಗುತ್ತಿರುವ ಬೆನ್ನಲ್ಲೆ ಈ ಚೆಡ್ಡಿ ದಾದ ದಲಿತರ ನೆಲಕ್ಕೆ ಗಂಟುಬಿದ್ದಿದ್ದಾನೆ. ಈ ಬಾರಿ ಅನಂತಕುಮಾರ್ ದಾದಾಗೆ ಕೇವಲ ಸಂಘಪರಿವಾರ ಚೆಡ್ಡಿಗಳು ಮಾತ್ರವಲ್ಲ, ಶಾಸಕ ಶ್ರೀನಿವಾಸ್‌ರ ರಾಜಕೀಯ ವಿರೋಧಿಗಳೂ ಬೆನ್ನು ತಟ್ಟುತ್ತಿವುದರಿಂದ ಅವನ ದಲಿತ ವಿರೋಧಿ ಕಸುಬಿಗೆ ಕಸುವು ಬಂದಿದೆ.

ಸ್ಲಮ್ ದಲಿತರ ನೆತ್ತಿಯ ಮೇಲೆ ತೂಗುಕತ್ತಿ

ಹೆಚ್ಚುಕಡಿಮೆ ಅರ್ಧಶತಮಾನ ಮಂಡ್ಯವನ್ನು ಆಳಿದ ಮಾಜಿ ಶಾಸಕ ಆತ್ಮಾನಂದನ ಕುಟುಂಬ ಮಂಡ್ಯವನ್ನೆಲ್ಲಾ ಹಿಂಡಿ, ಹೀರಿ ಕೊಬ್ಬಿ ಹೋಯಿತು. ಮಂಡ್ಯ ಅವನತಿಯತ್ತ ಸಾಗಿದರೆ ಆತ್ಮಾನಂದನ ಕುಟುಂಬ ಅಭಿವೃದ್ಧಿಯತ್ತ ಸಾಗಿತು-ಇದು ಅವೆರಡರ ನಡುವಿರುವ ತಾರ್ಕಿಕ ಸಂಬಂಧ. ಈ ಕುಟುಂಬವು ತಮ್ಮ ಆಳ್ವಿಕೆಯ ಅವಧಿಯಲ್ಲಿ ಬರೋಬ್ಬರಿ 35 ಸ್ಲಮ್‌ಗಳನ್ನು ಮಂಡ್ಯಕ್ಕೆ ಕೊಡುಗೆಯಾಗಿ ನೀಡಿತು! ಅಂತಹ ಕೊಳಗೇರಿಗಳಲ್ಲಿ ಆರ್‌ಟಿಓ ಕಚೇರಿ ಎದುರಿನ ದಲಿತರ ಸ್ಲಮ್ಮೂ ಒಂದು. ಆತ್ಮಾನಂದನ ಕುಟುಂಬಕ್ಕೆ ಓಟು ಹಾಕಿ ಕೊನೆಗೆ

ಖುದ್ದು ಯಡ್ಡಿಯೂ ಒದ್ದ... ದ!

ರಾಜ್ಯದ ಉಪಮುಖ್ಯಮಂತ್ರಿ ಯಡಿಯೂರಪ್ಪ... ಮತ್ತೊಬ್ಬ ಭಾಯಿ ಎದ್ದು ನಿಂತ. ಯಾರಾದ... ಸಹಜವಾಗಿ ಊಹಿಸುವಂತೆ ಅವನು ನಿಂತ... ಅನಂತಕುಮಾರ್ ಭಾಯಿಯ ಬೆಂಬಲಕ್ಕೇ ಹೊ... ಬಡಪಾಯಿ ದಲಿತ ಭಾಯಿಗಳ ಬೆಂಬಲಕ್ಕಿಲ್ಲ.

ಅನಂತಕುಮಾರನಿಗೆ ಮಂಜೂರಾದ ಸ್ಲಮ್‌ನ ಸ... ನಂಬರ್ 162/3 ರಲ್ಲಿ ಹೈಟೆನ್‌ಷನ್ ವಿದ್ಯುತ್ ತ... ಹಾದು ಹೋಗಿದೆ. ಅದರ ಕೆಳಗಡೆಯೇ ಮ... ಆಟದ ಮೈದಾನಕ್ಕೆಂದು ಭೂ... ಮಂಜೂರು ಮಾಡಿಸಿಕೊಂಡಿದ... ಹಾದು ಹೋಗಿರುವ ತಂತಿಗ... ಒಂದು ಬಿದ್ದರೂ ಮಕ್ಕಳ ಮಾ... ಹೋಮವೇ ಜರುಗಿ ಹೋಗುತ್ತ... ಕರ್ನಾಟಕದಲ್ಲಿ ಒಂದು ಕುಂಭಕೋ... ಮರುಕಳಿಸಿಬಿಡುತ್ತದೆ. ಅ... ಭೂಮಿ ಮಂಜೂರು ಮಾ... ಕೊಂಡಿರುವುದು ಆಟದ ಮೈದಾ... ದರೂ ಅಸಲಿಗೆ ಆ ಸ್ಥಳದಲ್ಲಿ ಶಾ... ಮಕ್ಕಳ ಸೈಕಲ್ ಪಾರ್ಕಿಂಗ್ ಮ... ತಿಂಗಳಿಗೆ 10-20 ಸಾವಿರ ಕಮಾ... ಸುವ ದುಷ್ಟ ಯೋಚನೆ ಇದೆ.

ಸ್ಲಮ್ ಜನರ ಹೋರಾಟದ ಫ... ಫಲವಾಗಿ ಒಂದು ಎಕರೆ ಪ್ರದೇಶದ... (ದಾದಾನಿಗೆ ಮಂಜೂರಾದ ಭೂ... ಯನ್ನು ಒಳಗೊಂಡಂತೆ) ಸುಮಾರು 85 ಮನೆಗ... ನಿರ್ಮಾಣವಾಗುತ್ತಿವೆ. ಹಾಗಾಗಿ ಕೋರ್ಟಿಗೆ ಹೋ... ದಾದ ಈಗ ತಡೆಯಾಜ್ಞೆ ತಂದಿದ್ದಾ... ಈಗಿನ ಜಿಲ್ಲಾಧಿಕಾರಿ ಜನಪರವಾ... ದ್ದರೂ ಕೋರ್ಟ್ ಆದೇಶದ ಪಾ... ಮಾಡುವ ಇಕ್ಕಟ್ಟಿನಲ್ಲಿದ್ದಾರೆ. ಅ... ಕ್ಕಿಂತಲೂ ಮಿಗಿಲಾಗಿ ಉಪಮು... ಮಂತ್ರಿ ಯಡ್ಡಿಯು ಅನಂತಕುಮಾ... ಬೆಂಗಾವಲಿಗೆ ನಿಂತಿರುವುದೂ ಇ... ಇನ್ನೊಂದು ಕಾರಣ. ಸ್ಥಳೀಯ... ಸಂಸ್ಥೆಗಳ ಚುನಾವಣೆ ಎದುರಾ... ತ್ತಿರುವ ಈ ಸಂದರ್ಭದಲ್ಲಿ ದಲಿ... ಗಾಗಿ ಮನೆಗಳು ನಿರ್ಮಾಣವ... ಬಿಟ್ಟರೆ ಕ್ರೆಡಿಟ್ ಎಲ್ಲಾ ಶಾ... ಶ್ರೀನಿವಾಸ್‌ಗೆ ಹೋಗಿಬಿಡು... ನಮಗೆ ಮುಳುವಾಗುತ್ತೆ ಅಂತ ... ಹಾಕಿದ ಚೆಡ್ಡಿ ಯಡ್ಡಿ ಮನೆಗ... ನಿರ್ಮಾಣವಾಗದಂತೆ ತಡೆಯುತ್ತಿದ್ದಾನೆ. ಇವರ ... ಹೀಗೇ ಮುಂದುವರೆದರೆ ದಲಿತರು ಈ ಭಾಯಿ... ಚೆಡ್ಡಿ ಬಿಚ್ಚಿ ನೀರಿಳಿಸುವುದು ಗ್ಯಾರಂಟಿ.


-ಎಂ.ಬಿ. ನಾಗ...

ಮುಸ್ಲಿಂ ಚೆಡ್ಡಿ ಅಬ್ಬಾಸ್ ಅಲಿಯನ್ನು ಬೆಂಗಳೂರಿಗೆ ಅಟ್ಟಿ

ಸಂಘ ಪರಿವಾರದ ಚೆಡ್ಡಿಗಳು ಹಿಂದೂ-ಮುಸ್ಲಿಮ್ ಕೋಮು ದ್ವೇಷ ಬಿತ್ತಿ, ಮುಸಲ್ಮಾನರ ಮೇಲೆ ಅವ್ಯಾಹತವಾಗಿ ದೇಶದಾದ್ಯಂತ ದಾಳಿ ನಡೆಸುತ್ತಿರುವಾಗ ಮುಸ್ಲಿಂ ನಾಯಕರೆಂಬ ಅಪವಾದ ಅಂಟಿಸಿಕೊಂಡಿರುವ. ಕೆಲವರು ಸಂಘ ಪರಿವಾರದ ಗೂಂಡಾಗಳೊಂದಿಗೆ ಕೈಮಿಲಾಯಿಸಿ ಖುದ್ದು ತಮ್ಮ ಜನಾಂಗದ ಜನರನ್ನು ಕೊಲ್ಲುವುದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂದರೆ ನಂಬುತ್ತೀರಾ? ನಂಬಿದ್ರೆ ನಂಬಿ ಬಿಟ್ಟರೆ ಬಿಡಿ. ಮಂಡ್ಯದಲ್ಲಿ ನಡೀತೀರೋದು ಮಾತ್ರ ಇದೇ.

ಅವನ ಹೆಸರು ಅಬ್ಬಾಸ್ ಅಲಿ. ಹಿಂದೆ ಕಾಂಗ್ರೆಸ್, ಜನತಾ ಅಂತ ಸುತ್ತಿಸುತ್ತಿ ಒಮ್ಮೆ ರೋಷನ್‌ಬೇಗ್ ಎದುರು ಬೆಂಗಳೂರಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತು ಈಗ ಮಂಡ್ಯಕ್ಕೆ ವಕ್ಕರಿಸಿ ಬಿಜೆಪಿ ಸೇರಿಕೊಂಡಿದ್ದಾನೆ. ಮೊದಲೇ ಸಂಘಪರಿವಾರದ ಚೆಡ್ಡಿಗಳು ಮುಸ್ಲಿಮರೆಂದರೆ ಉರಿದು ಕಂಡಕಂಡಲ್ಲಿ ಬೆಂಕಿ ಹಚ್ಚುವ ಹುಚ್ಚ ಮಂಗಗಳಂತಾಗಿರುವಾಗ ಈ ಅಬ್ಬಾಸ್ ಅಲಿ ಅವರಿಗೆ ಕಾಸು ಕೊಟ್ಟು ಮುಸ್ಲಿಮರ ವಿರುದ್ಧ ಗಲಭೆ ಎಬ್ಬಿಸುವಂತೆ ಪ್ರೇರೇಪಿಸುತ್ತಾನೆ. ರೈತರ ಸಂತೆ ಮೈದಾನದಲ್ಲಿ ಅಕ್ರಮವಾಗಿ ವಿಗ್ರಹಗಳನ್ನು ಸ್ಥಾಪಿಸಿ ಗಲಭೆ ಎಬ್ಬಿಸಲು ಸಂಘಪರಿವಾರದ ಜನ... ಈತ ಹಣ ಕೊಟ್ಟಿದ್ದಾನೆ. ಕೊನೆಗೆ ಕೋಮು ಸೌಹಾ... ವೇದಿಕೆಯ ಮಧ್ಯ ಪ್ರವೇಶದಿಂದ ಪರಿಸ್ಥಿತಿ ಒಂದ... ತಿಳಿಗೊಂಡಿತು ಎಂಬುದು ಬೇರೆ ಮಾತು.

ಈತನಕ ಸಾರಾಯಿ ಮತ್ತು ರಿಯಲ್ ಎಸ್ಟೇ... ವಲಯದ ದುಡ್ಡು ಮಂಡ್ಯದ ನೆಮ್ಮದಿಯನ್ನು ಹಾಳುಗೆಡವಿದೆ. ಸಾರಾಯಿ ಈಗ ತಾತ್ಕಾಲಿಕವಾಗಿ ನಿಂತಂತೆ ಕಂಡರೂ ರಿಯಲ್ ಎಸ್ಟೇಟ್ ಯಾವ ಎಗ್ಗಿಲ್ಲದೆ ಮುಂದುವರೆಯುತ್ತಿದೆ. ಆಗೊಮ್ಮೆ ಈಗೊಮ್ಮೆ ನಡೆಯುವ ಗುದ್ದಾಟಕ್ಕೆ ಸೀಮಿತವಾಗಿದ್ದ ಇಲ್ಲಿನ ರೌಡಿಸಂಗೆ ಕಸುವು ತಂದುಕೊಟ್ಟದ್ದೇ ಸಾರಾಯಿ-ರಿಯಲ್ ಎಸ್ಟೇ... ದುಡ್ಡು. ರಿಯಲ್ ಎಸ್ಟೇಟ್ ಕುಳವಾದ ಅಬ್ಬಾಸ್ ಅಲಿ ತನ್ನ ಬಿಸಿನೆಸ್ ಬಲಪಡಿಸಲು ಚೆಡ್ಡಿ ಪರಿವಾರ... ಗೂಂಡಾಗಳನ್ನು ಆಶ್ರಯಿಸಿರುವುದು ಅನಾವರಣಗೊ... ಲಿರುವ ಅನಾಹುತಗಳ ಮುನ್ಸೂಚನೆ. ಮಂಡ್ಯ... ಮುಸ್ಲಿಮರು ಈಗಲೇ ಅವನ್ನು ವಾಪಸ್ಸು ಬೆಂಗಳೂರಿ... ಓಡಿಸದಿದ್ದರೆ ಹಾವಿಗೆ ಹಾಲೆರೆದಂತಾಗುತ್ತದೆ.




ಈ ಮೊದಲು ಬಾಗಲಕೋಟೆಯಲ್ಲಿ ಕೆ.ಎಸ್. ...ಕರ್ ಎಂಬ ಡಿ.ಸಿ. ಇದ್ದ. ಜಿಲ್ಲೆಯಲ್ಲಿ ಅವನು ...ು ಮೇದು ಸಾಕಾಗದೇ ಇಡೀ ಜಿಲ್ಲೆಯನ್ನೇ ...ಾಟ ಮಾಡಲು ಟೆಂಡರ್ ಕರೆಯಲು ಮುಂದಾ...ನೋ ಏನೋ. ಅಷ್ಟರಲ್ಲಿ 'ಲಂಕೇಶ್'ನಿಂದ ಸಲಾತಾ... ಹೊಡೆತ ತಾಳಲಾರದೇ ಅವನು ತುರಿಸಿಕೊಳ್ಳುತ್ತಾ...ೋ ಸತ್ತೆನೋ ಅಂತ ಓಡಿಹೋಗಿಬಿಟ್ಟ.

...ಕಳ್ಳನಿಂದ ಬಚಾವ್ ಆಗಿದ್ದಾಯಿತು ಎಂದು ...ಲಕೋಟೆಯ ಜನ ನಿಟ್ಟುಸಿರು ಬಿಡುತ್ತಿದ್ದಂತೆ ಆ ...ಕ್ಕೆ ಕುಳ್ಳನೊಬ್ಬ ಬಂದ. ಅವನೇ ಜಿ.ಎನ್. ನಾಯಕ್. ...ಗೆ ಕೃಪಾಕಟಾಕ್ಷ ತೋರಿ ಆಶ್ರಯ ನೀಡುತ್ತಿರುವವನು ಸಂಸದ ಪಿ.ಸಿ. ಗದ್ದಿಗೌಡ. ಜನಿವಾರದ ಬ್ರಾಹ್ಮಣ ...ನ್. ನಾಯಕನಿಗೆ ಚೆಡ್ಡಿ ಸಂಸದನ ಆಶ್ರಯ. ಹೇಗಿದೆ ...-ಚೆಡ್ಡಿ ಭಾಯಿಭಾಯಿ? ಅಸಲಿಗೆ ಇವನನ್ನು ...ಲಕೋಟೆಗೆ ಕಪ್ಪ ತಿಂದು ಕರೆದುಕೊಂಡು ಬಂದವನು ... ಉಸ್ತುವಾರಿ ಸಚಿವ ಗೋವಿಂದ ಕಾರಜೋಳ್.

ಈ ಜಿ.ಎನ್. ನಾಯಕ್ ಡಿಸಿಯಾಗಿ ಬಂದ ಒಂದು ...ಳಲ್ಲಿ ಮಹಾರಾಷ್ಟ್ರದಲ್ಲಿ ವಿಪರೀತ ಮಳೆ ಸುರಿದು, ...-ಘಟಪ್ರಭಾ ನದಿಗಳು ತುಂಬಿ ನದಿ ತೀರದ ಜನ ಪ್ರವಾಹದಿಂದ ಹೇಳತೀರದಷ್ಟು ಹಾನಿ ಅನುಭವಿಸಿ...ರು.

...ರೆಯಿಂದ ಹಾನಿಗೆ ಒಳಗಾದ ಜಮಖಂಡಿ, ...ೋಳ, ಬಾದಾಮಿ, ಹುನಗುಂದ, ಬೀಳಗಿ ಮತ್ತು ...ಲಕೋಟೆ ತಾಲ್ಲೂಕುಗಳಿಗೆ ಪರಿಹಾರಕ್ಕೆಂದು 6 ...ಟಿ ರೂಪಾಯಿಗಳನ್ನು ಕೊಟ್ಟರೆ ಅದರಲ್ಲಿ ...ಖಂಡಿ ಒಂದಕ್ಕೇ ಸುಮಾರು 4 ಕೋಟಿ ನೀಡಿದ. ...ದರೆ ಜಮಖಂಡಿಯ ತಹಶೀಲ್ದಾರ್ ಕಾಳಗಿ 4 ...ಟಿ ಬೇಕೇ ಬೇಕು ಅಂತ ಪಟ್ಟು ಹಿಡಿದಿದ್ದನಂತೆ. ... ಪರಿಹಾರದ ಹಣ ಪ್ರವಾಹಕ್ಕೆ ...ಶುಗಳಾದ ಜನರಿಗೆ ಮಾತ್ರ ...ಪಲೇ ಇಲ್ಲ, ಹಾಗಂತ ಸಿಕ್ಕಾಪಟ್ಟೆ ...ಗಳು ಬಂದಾಗ ಡಿ.ಸಿ. ಸಾಹೇಬ ... ಬೋಳು ತಲೆಯನ್ನು ಸವರಿ ...ತ್ತಾ 'ತನಿಖೆ ಮಾಡುತ್ತೇನೆ' ಅಂತ ... ಕೈ ಒರೆಸಿಕೊಂಡ. ಆದರೆ ತನಿ...ೂ ಇಲ್ಲ, ಏನೂ ಇಲ್ಲ. ತಹಶೀ...ಕಾಳಗಿ ಮತ್ತು ಜಿ.ಎನ್.ನಾಯಕ್ ...ನು ರಾಜಿ ಕಬುಲಾತಿ ನಡೆಸಿದರು ...ದು ಮಾತ್ರ ಹೊರಗೆ ಬರಲೇ




ಬಸವರಾಜ್ ಬಂಟನೂರ್

...ಪ್ರವಾಹ ಬಾಗಲಕೋಟೆ ಜಿಲ್ಲೆಗೆ ...ಯೇ ಮತ್ತೆ ಮತ್ತೆ ಬರಲಿ ಅಂತ ಜಿ.ಎನ್. ...ಕ್ ಆಶಿಸುತ್ತಿದ್ದನೋ ಏನೋ. ಆದರೆ ಅವನ ...ಯಕ್ಕೆ ಬಂದದ್ದು ರಾಜ್ಯ ಚಲನಚಿತ್ರ ಪ್ರಶಸ್ತಿ ವಿತರಣಾ ...ರಂಭ. ಈ ಸಮಾರಂಭ ಬರಬದ್ದ ಬಾಗಲಕೋಟೆ ...ಯೇ ನಡೆಯಬೇಕೆಂದು ಪಟ್ಟು ಹಿಡಿದು ...ವನು ಜಿಲ್ಲೆಯ ಉಸ್ತುವಾರಿ ಸಚಿವ ಗೋವಿಂದ ...ೋಳ್. "ಬರ ಬಿದ್ದರೇನಂತೆ? ಚಲನಚಿತ್ರ ...ನಟಿಯನ್ನು ನೋಡಿ ನಮ್ಮ ಜನ ಬರವನ್ನು ...ಯುತ್ತಾರೆ" ಎಂಬುದು ಅವನ ಅಂಬೋಣ. ಅವನಿಗೆ ...ಹ ಒಂದು ಐಡಿಯಾವನ್ನು ನೀಡಿ ಅದರಿಂದ ... ವರ್ಚಸ್ಸೂ ಹೆಚ್ಚುತ್ತದೆಂದು ಹುರಿದುಂಬಿಸಿದವರು ...ನ್. ನಾಯಕ್ ಮತ್ತು ಕನ್ನಡ ಮತ್ತು ಸಂಸ್ಕೃತಿ ...ಖೆಯಲ್ಲಿ ಬೀಡು ಬಿಟ್ಟಿರುವ ಶ್ರೀಶೈಲ ಕರಿಶಂಕರಿ. ... ಇಬ್ಬರ ಕಬಳಿಕೆ ಬುದ್ಧಿಗೆ, ಅವರ ಐಡಿಯಾಕ್ಕೆ ...ಾಗಿ ಅಮಲೇರಿಸಿಕೊಂಡ ಮೇಲೆ ಗೋವಿಂದಾ... ...ಂದಾ... ಚಲನಚಿತ್ರ ಪ್ರಶಸ್ತಿ ಸಮಾರಂಭ ನಡೆದು,

ಬಾಗಲಕೋಟೆಗೆ ಅಡರಿಕೊಂಡ ಜಿ.ಎನ್. ನಾಯಕ್ ಎಂಬ ಡಿ.ಸಿ.

ಬಾಗಲಕೋಟೆ ಗಬ್ಬೆದ್ದು ಹೋಯಿತು. ಅಂತೆಯೇ ಇವರೆಲ್ಲರ ಜೇಬುಗಳೂ ಭರ್ತಿ ಆದವು.


ಸಭೆ-ಸಮಾರಂಭಗಳನ್ನು ನಡೆಸಿ ಜೇಬು ತುಂಬಿಸಿಕೊಂಡ ಡಿ.ಸಿ. ಸಾಹೇಬರಿಗೆ ರುಚಿ ಹತ್ತಿತ್ತು, ತಕ್ಷಣವೇ ಚಾಲುಕ್ಯ ಉತ್ಸವ ಆಚರಣೆ ಮಾಡೋಣ ಅಂತ ಕಂಡಕಂಡವರ ಜೇಬಿಗೆ ಕತ್ತರಿ ಹಾಕುವ ಕೆಲಸಕ್ಕೆ ಕೈಯಿಟ್ಟ. "ಈ ಚಾಲುಕ್ಯ ಉತ್ಸವಕ್ಕೆ ಬೇಕಾಗಿದ್ದು 30 ರಿಂದ 40 ಲಕ್ಷ ರೂಪಾಯಿಗಳು, ಆದರೆ ಸರ್ಕಾರ ಕೊಟ್ಟಿದ್ದು ಕೇವಲ 2 ಲಕ್ಷ, ಉಳಿದ ಹಣವನ್ನು ಸಾರ್ವಜನಿಕರಿಂದ ಸಂಗ್ರಹಿಸೋಣ" ಎಂದು ಹೇಳಿದ ಈ ಮಹಾಶಯ ತನ್ನದೇ ಆದ ಒಂದು ವಸೂಲಿ ಪಡೆಯನ್ನು ರಚಿಸಿದ. ಆದರಲ್ಲಿ ತನ್ನಂತೆಯೇ ತಿನ್ನಲು ಆಸಕ್ತಿ ಇರುವ ಶ್ರೀಶೈಲ ಕರಿಶಂಕರ, ಅಸಿಸ್ಟೆಂಟ್ ಕಮೀಷನರ್ ಎಸ್.ಜಿ. ಪಾಟೀಲ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ದೊರೆಸ್ವಾಮಿ ಮುಂತಾದವರನ್ನು ಗುಡ್ಡೆ ಹಾಕಿದ. ಈ 'ವಸೂಲಿ ಪಡೆ' ಕಂಡಕಂಡಲ್ಲಿ ಕಂಡ ಕಂಡಷ್ಟು ದೋಚಿ, ಬಾಚಿ ತಾವೂ ತಿಂದು ಅಳಿದುಳಿದದ್ದನ್ನು ಡಿ.ಸಿ. ಸಾಹೇಬರಿಗೆ ಒಪ್ಪಿಸಿದರು. ಅವನೂ ತಿಂದು ಸಾಕಾದ ಆಮೇಲೆ ಮಿಕ್ಕಿದ್ದು ಚಾಲುಕ್ಯ ಉತ್ಸವಕ್ಕೆ!



ಡಿಸಿ ಜಿ.ಎನ್.ನಾಯಕ್

ಅಷ್ಟೇ ಅಲ್ಲ, ಪ್ರತೀ ತಾಲ್ಲೂಕಿನಿಂದ ಪ್ರತೀ ಇಲಾಖೆಯಿಂದ ಒಬ್ಬೊಬ್ಬ ಅಧಿಕಾರಿಯನ್ನು ಕರೆಸಿ ಒಂದೊಂದು ಇಲಾಖೆಯಿಂದ ಎಷ್ಟೆಷ್ಟು ಹಣ ಬರಬೇಕು ಅಂತ ಆಯಾ ತಾಲ್ಲೂಕಿನ ಎಂ.ಎಲ್.ಎ.ಗಳ ಸಮ್ಮುಖದಲ್ಲಿಯೇ ನಿಗದಿ ಮಾಡಿದ್ದ ಈ ಡಿ.ಸಿ. ಸಾಹೇಬ. ಆಯಾ ತಾಲ್ಲೂಕಿನ ಅಧಿಕಾರಿಗಳು, ಎಂಎಲ್ಎಗಳು ತಿಂದು ಉಳಿದದ್ದನ್ನು ಡಿಸಿಗೆ ಒಪ್ಪಿಸಿದ್ದರು. ಹೀಗೆ ಎಲ್ಲ ಮೂಲಗಳಿಂದ ಶೇಖರಣೆಯಾದ ಹಣದ ಮೊತ್ತ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು.

ಸಾಲದ ಹೊರೆ ತಾಳಲಾರದೇ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಈ ಮಹಾನುಭಾವರು ಯಾರೂ ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳ ಬಳಿ ಸುಳಿಯಲಿಲ್ಲ. ಉಸ್ತುವಾರಿ ಸಚಿವ ಕಾರಜೋಳ, ಸಂಸದ ಗದ್ದಿಗೌಡರ್ ಎಂಬ ವಸೂಲಿ ವೀರರು




ದೊಡ್ಡ ಬಸವರಾಜ್

ರೈತರ ಆತ್ಮಹತ್ಯೆಯ ಬಗ್ಗೆ ಒಂದು ಮಾತನ್ನಾಡಲಿಲ್ಲ. ಕಬ್ಬು ಬೆಳೆಗಾರರು ತಮಗೆ ಬೆಂಬಲ ಬೆಲೆ ಕೊಡಿ ಅಂತ ತಿಂಗಳುಗಟ್ಟಲೇ ಒತ್ತಾಯ, ಹೋರಾಟ ನಡೆಸಿದಾಗಲೂ ಇವರು ತುಟಿಪಿಟಿಕ್ ಎನ್ನಲಿಲ್ಲ. ಗದ್ದಿಗೌಡ ಎಂಬ ಅಡ್ನಾಡಿ ಸಂಸದ ಖುದ್ದು ಒಬ್ಬ ರೈತ ಕೂಡ ಹೌದು. ರೈತರ ಬವಣೆಗಳಿಗೆ ಕಿವಿಗೊಡದ ಅವನಿಗೆ ನಾಚಿಕೆಯಾಗಬೇಕು.

ಅವನನ್ನೊಮ್ಮೆ ಸಾಮಾಜಿಕ ವಿಷಯಗಳ ಬಗ್ಗೆ, ರೈತರ ಬವಣೆಗಳ ಬಗ್ಗೆ ಮಾತಾಡಿಸಿ ನೋಡಿ. ಅಡ್ವಾನಿ ಹತ್ತಿರ ಮಾತಾಡಿದ್ದೇನೆ, ವಾಜಪೇಯಿಯವರಿಗೆ ತಿಳಿಸಿದ್ದೇನೆ, ಲೋಕಸಭೆಯಲ್ಲಿ ಖುದ್ದು ಚರ್ಚಿಸುವೆ ಅಂತ ದೊಡ್ಡದಾಗಿ ಮಾತನಾಡುತ್ತೇನೆ. ಲೋಕಸಭೆಯಲ್ಲಿ ಇವನು ಈ ಕುರಿತು ಮಾತನಾಡಿದ ಉದಾಹರಣೆಗಳೇ ಇಲ್ಲ, ಇಂತಹ ಬೇಜವಾಬ್ದಾರಿ ಸಂಸದನಿರುವ ಜಿಲ್ಲೆಯಲ್ಲಿ ಜಿ.ಎನ್. ನಾಯಕ್‌ನಂತಹ ಕಮಾಯಿ ಪ್ರವೀಣ ಡಿಸಿಯಾಗಿದ್ದರೆ ಜಿಲ್ಲೆಯ ಕಥೆ ಏನಾಗಿರಬೇಕು ಹೇಳಿ?

ಬನಶಂಕರಿ ಜಾತ್ರೆಗೂ ಗಂಟುಬಿದ್ದ ಡಿಸಿ

ಪ್ರತೀವರ್ಷ ಜನವರಿಯಲ್ಲಿ ಬಾದಾಮಿ-ಬನಶಂಕರಿಯಲ್ಲಿ ಜಾತ್ರೆ ಬರುತ್ತದೆ. ಜಾತ್ರೆಯ ವೇಳೆ ಹತ್ತಾರು ಚಿತ್ರಮಂದಿರಗಳು ಟೆಂಟ್‌ಗಳ ರೂಪದಲ್ಲಿ ತಲೆ ಎತ್ತುತ್ತವೆ. ಇವು ಸಾರ್ವಜನಿಕರಿಗೆ ಕನಿಷ್ಠ ಸೌಕರ್ಯಗಳನ್ನು ಒದಗಿಸುವುದಿಲ್ಲ. ಇಂತಹ ಅವ್ಯವಸ್ಥೆಗಳಿಗೆ ಅವಕಾಶವಿರಬಾರದೆಂದು ಖುದ್ದು ಡಿಸಿ ಸ್ಥಳ ಪರಿಶೀಲನೆ ಮಾಡಿ ಅವುಗಳಿಗೆ ಪರ್ಮಿಷನ್ ನೀಡಬೇಕು. ಆದರೆ ನಮ್ಮ ಜಿಲ್ಲಾಧಿಕಾರಿ ಜಿ.ಎನ್. ನಾಯಕ್ ಪರಿಶೀಲನೆ ಮಾಡದೇ ಅನಧಿಕೃತ ಚಿತ್ರಮಂದಿರಗಳಿಗೆ ಅವಕಾಶ ಕೊಡುತ್ತಾನೆ. ಏಕೆಂದರೆ ಆ ಚಿತ್ರಮಂದಿರಗಳ ಮಾಲೀಕರಿಂದ ಎರಡೆರಡು ಲಕ್ಷ ರೂಪಾಯಿ ತಿಂದು ತೇಗಿರುತ್ತಾನೆ.



ಸಂಸದ ಪಿ.ಸಿ. ಗದ್ದಿಗೌಡ

ಜಿ.ಎನ್. ನಾಯಕ್‌ನ ಅಡ್ನಾಡಿ ಕೆಲಸಗಳು, ಅವಾಂತರಗಳು ಇಲ್ಲಿಗೇ ನಿಲ್ಲುವುದಿಲ್ಲ. ಅದು ವೈದ್ಯಕೀಯ ಇಲಾಖೆಗೂ ವ್ಯಾಪಿಸಿದೆ. ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರನ್ನು ನೇಮಿಸಿಕೊಳ್ಳುವ ಅಧಿಕಾರ ಜಿಲ್ಲಾ ವೈದ್ಯಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳಿಗೆ ಇರುತ್ತದೆ ಎಂಬುದೇನೋ ನಿಜ. ಆದರೆ ಯಾವುದಾದರೂ ವೈದ್ಯರ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದರೆ ಅವುಗಳನ್ನು ಪರಿಶೀಲಿಸಿ, ದೂರುಗಳ ಬಗ್ಗೆ ದಾಖಲಾತಿಗಳೇನಾದರೂ ಇದ್ದರೆ ಅವುಗಳ ಯಥಾರ್ಥತೆಯ ಬಗ್ಗೆ ವಿಶ್ಲೇಷಿಸಿ ಕ್ರಮ ಜರುಗಿಸುವ ಅಧಿಕಾರವೂ ಈ ಇಬ್ಬರು ಅಧಿಕಾರಿಗಳಿಗೆ ಇರುತ್ತದೆ. ಆದರೆ ಗುಳೇದಗುಡ್ಡದಲ್ಲಿ ಇವರು ಮಾಡಿದ್ದೇನು ನೋಡಿ.

ಗುಳೇದಗುಡ್ಡದ ಸರ್ಕಾರಿ ವೈದ್ಯಾಧಿಕಾರಿ ಡಾ. ಬಸವರಾಜ್ ಬಂಟನೂರ್ ಬಗ್ಗೆ ಸಾರ್ವಜನಿಕರಿಂದ ಬಹಳ ದೂರುಗಳು ಬಂದಿವೆ. ಬಂಟನೂರ್‌ನ ವ್ಯಾಪ್ತಿ ಸರ್ಕಾರಿ ಆಸ್ಪತ್ರೆಗೆ ಮಾತ್ರ. ಆದರೆ ಅವನು ಗುಳೇದಗುಡ್ಡದಲ್ಲಿ ಹಗಲು ದರೋಡೆಗೆ ನಿಂತಿದ್ದಾನೆ. ಬರುವ ಎಲ್ಲಾ ಪೇಶಂಟ್‌ಗಳಿಗೆ ಸ್ಕ್ಯಾನು, ಅದೂ ಇದೂ ಅಂತ


ಮೇಘರಾಜ್

ಭಯಭೀತರನ್ನಾಗಿ ಮಾಡಿ ದುಡ್ಡು ಸುಲಿಯೋದೇ ಇವನ ಕಾಯಕವಾಗಿಬಿಟ್ಟಿದೆ.

ಬಂಟನೂರ್ ಹತ್ತಿರ ಯಮರಾಜ ಬಂದರೂ ಸೀದಾ ಆಪರೇಷನ್ ಥಿಯೇಟರ್‌ಗೆ ಕರೆದೊಯ್ಯುವ ಭಂಟನೀತ. ಇವನ ಹತ್ತಿರ ಬಂದ ಪೇಶಂಟ್‌ಗಳಲ್ಲಿ ಅವನು ಬದುಕಿಸಿದ್ದಕ್ಕಿಂತ ಬರ್ಖಾಸ್ ಮಾಡಿದ್ದೇ ಜಾಸ್ತಿ. ಇವನ ಹತ್ತಿರ ಬಂದ ಮಹಿಳೆಯರ ಪಾಡಂತೂ ಹೇಳತೀರದು.

ಇಂಥದ್ದೊಂದು ದುರ್ಘಟನೆಯನ್ನು ದಾಖಲೆ ಸಮೇತವಾಗಿ ಜಿಲ್ಲಾಧಿಕಾರಿಗಳಿಗೆ ಕೆಲವರು ನೀಡಿದ್ದಾರೆ. ಈ ಬಗ್ಗೆ ತನಿಖೆ ಮಾಡುವುದಾಗಿ ಭರವಸೆ ಕೊಟ್ಟ ಜಿ.ಎನ್. ನಾಯಕ್. ಅದಕ್ಕಾಗಿ 24.11.2006 ರಂದು ತಾರೀಖನ್ನೂ ನಿಗದಿ ಮಾಡಲಾಗಿದ್ದು ದಾಖಲೆಗಳೊಂದಿಗೆ ಹಾಜರಾಗಲು ಎರಡೂ ಕಡೆಯವರಿಗೆ ಹೇಳಿದ. ಅಂದು ಅವರೆಲ್ಲ ಹಾಜರಾದಾಗ ಮುಖ್ಯಮಂತ್ರಿಯ ಪ್ರವಾಸದ ಕಾರಣ ತನಿಖೆ ಮುಂದೂಡಲಾಗಿದೆ ಎಂದು ಪ್ರಕಟಿಸಿದ.

ಮುಂದಿನ ವಿಚಾರಣೆ ದಿನಾಂಕವನ್ನು ಹೇಳಲೇ ಇಲ್ಲ, ದೂರು ನೀಡಿದವರಿಗೆ ತಿಳಿಸದೇ, ವೈದ್ಯನ ಬಾಡಿಗೆ ಬಂಟರಿಂದ "ಡಾಕ್ಟರ್ ಉತ್ತಮವಾಗಿದ್ದಾರೆ" ಎಂಬ ಸರ್ಟಿಫಿಕೇಟ್ ಪಡೆದು ಸರ್ಕಾರಿ ಆರೋಗ್ಯ ಕಮೀಷನರ್‌ಗೆ ಕಳಿಸಿದ ಈ ನಾಯಕ್ ಜೊತೆಗೆ ದೂರು ನೀಡಿದವರಿಗೆ ತಿಳಿಸಿದರೂ ಅವರು ಹಾಜರಾಗಲಿಲ್ಲ ಎಂದೂ ಬರೆದು ಕಳಿಸಿದ!



ಶ್ರೀಶೈಲ ಕರಿಶಂಕರಿ

ಈಗ ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕಾತಿ ನಡೆಯುತ್ತಿದೆ. ಅದರಲ್ಲಿ ಡಿಎಚ್‌ಓ ಹುಣಸೀಕಟ್ಟಿ ಎಂಬ ಮತ್ತೊಂದು ಕಮಾಯಿ ಪ್ರವೀಣನೊಂದಿಗೆ ಜಿ.ಎನ್. ನಾಯಕ್ ಕೈ ಮಿಲಾಯಿಸಿ ಒಂದೊಂದು ಪೋಸ್ಟಿಗೆ ಹತ್ತಾರು ಲಕ್ಷ ಡಿಮ್ಯಾಂಡ್ ಮಾಡಿ ಭಾರಿ ನುಂಗುವ ಪ್ರಕ್ರಿಯೆಗಾಗಿ ಕಾದು ಕುಳಿತಿದ್ದಾನೆ. ಹುಣಸೀಕಟ್ಟಿ ಕೂಡ ಇನ್ನು ಮೂರು ತಿಂಗಳಲ್ಲಿ ರಿಟೈರ್ ಆಗುತ್ತಿರುವುದರಿಂದ ಸಿಕ್ಕಷ್ಟು ಬಾಚಿಕೊಳ್ಳಲು ಬಕೆಟ್ ಹಿಡಿದು ನಿಂತಿದ್ದಾನೆ.

ಒಟ್ಟಿನಲ್ಲಿ ಜಿಲ್ಲಾಧಿಕಾರಿ ಜಿ.ಎನ್. ನಾಯಕ್ ಎಂಬ ಮಹಾಕುಳ್ಳ ಮನಬಂದಂತೆ ಕೊಳ್ಳೆ ಹೊಡೆಯುತ್ತಿರುವುದನ್ನು ನೋಡಿದರೆ ಹಿಂದಿನ ಜಿಲ್ಲಾಧಿಕಾರಿ ಪ್ರಭಾಕರ್ ಎಂಬ ಮಹಾಕಳ್ಳನೇ ವಾಸಿ ಎಂದು ಬಾಗಲಕೋಟೆಯ ಜನ ಅಂದುಕೊಳ್ಳುತ್ತಿರುವುದರಲ್ಲಿ ಅರ್ಥವಿಲ್ಲದಿಲ್ಲ. ಇವನ ಆಟಗಳು ಮಿತಿ ಮೀರುತ್ತಿರುವಂತೆ ಜನ ಜಿಲ್ಲಾಧಿಕಾರಿಗೆ ಚಪ್ಪಲಿ ಸೇವೆ ಮಾಡಿ ಓಡಿಸಲು ಅವನ ಆಫೀಸಿಗೆ ನುಗ್ಗಿದರೂ ಆಶ್ಚರ್ಯವಿಲ್ಲ ■

...ಬಾಲಕಾರ್ಮಿಕ ಶಾಲೆಗಳಲ್ಲೂ ಗೋಲ್‌ಮಾಲ್

...ಬಾಲಕಾರ್ಮಿಕ ಶಾಲೆಗಳಿಗೆ ನೋಂದಣಿ ನೀಡಬೇಕಾದರೆ ಸಂಬಂಧಿಸಿದ ... ಕನಿಷ್ಠ ಮೂರು ವರ್ಷ ಕಾರ್ಯ ನಿರ್ವಹಿಸಿರಬೇಕು. ಅದು ಸಂಬಂಧಪಟ್ಟ ...ದೇ ಆಗಿರಬೇಕು. ಸಂಸ್ಥೆಯ ಬೈಲಾ ಹಾಗೂ ಆಡಿಟ್ ರಿಪೋರ್ಟ್‌ಗಳೊಂದಿಗೆ ... ಸಲ್ಲಿಸಬೇಕು.

...ದರೆ ಇವೆಲ್ಲಾ ಕಾನೂನು, ನೀತಿ, ನಿಯಮಗಳು ಬಾಗಲಕೋಟೆ ಜಿಲ್ಲೆಗೆ ...ವಾಗುವುದಿಲ್ಲ. 1994 ರಲ್ಲಿ ಪ್ರಾರಂಭವಾದ ಶಬರೀಶ್ ಅಂಗವಿಕಲರ ...ನಂತರದ ದಿನಗಳಲ್ಲಿ ಯಾವ ರಿಜಿಸ್ಟ್ರೇಷನ್ ಮಾಡದೇ, ಅಕೌಂಟ್ ಸಲ್ಲಿಸದೇ ...ವರ್ಷ ಕಾರ್ಯನಿರ್ವಹಿಸಿದೆ! ಈಗ ಆ ಸಂಸ್ಥೆಗೆ ಸಂಬಂಧವೇ ಇಲ್ಲದ ... ತಳಗೇರಿ ಎಂಬುವವನು ಬ್ಯಾಂಕ್ ಅಕೌಂಟ್ ತೆರೆದು ಆ ಶಾಲೆಯ ...ಗೆ ಅರ್ಜಿ ಹಾಕಿದ್ದಾನೆ. ಡಿ.ಸಿ. ಹೆಸರಿನಲ್ಲಿ ಡೀಲ್ ಮಾಡುವ ಪರಶುರಾಮ್ ... ಹಾಗೂ ಸುಧಾಕರ್ ಎಂಬ ದಗಲ್ಬಾಜಿ ಪರ್ಸೆಂಟೇಜ್ ಪ್ರವೀಣರು ... ಸಂಸ್ಥೆಯ ಚೆಕ್ಕುಗಳನ್ನು ಕೊಟ್ಟೂರು ಬಸವೇಶ್ವರ ಬ್ಯಾಂಕಿನಲ್ಲಿ ಪಾಸ್ ... 56252 ರೂಪಾಯಿಗಳನ್ನು ಗುಳುಂ ಮಾಡಿದ್ದಾರೆ.

...ಂದು ಸಂಸ್ಥೆಯ ಬ್ಯಾಂಕ್ ಅಕೌಂಟ್ ತೆರೆಯಲು ಆ ಸಂಸ್ಥೆಯ ಅಧ್ಯಕ್ಷ ಮತ್ತು ಖಜಾಂಚಿಯ ಸಹಿ ಇರಬೇಕು. ಜೊತೆಗೆ ಸಂಸ್ಥೆಯ ಬೈಲಾ ಲಗತ್ತಿಸಿರಬೇಕು. ಆದರೆ ಇಲ್ಲಿ ಅದ್ಯಾವುದೂ ಇಲ್ಲ, ಸಂಸ್ಥೆಯ ಛೇರ್ಮನ್ ಅಲ್ಲದ ಸುರೇಶ್ ತಳಗೇರಿ ತಾನೇ ಛೇರ್ಮನ್ ಎಂದು ನಮೂದಿಸಿ, ಸಂಸ್ಥೆಯ ಹೆಸರಿನಲ್ಲಿ ಖಾತೆ ತೆರೆದು ಅಂದೇ ಹಣವನ್ನೂ ಡ್ರಾ ಮಾಡಿಕೊಂಡಿದ್ದಾನೆ. ಸರ್ಕಾರದ ಚೆಕ್ ಪಡೆದ ಸಂಸ್ಥೆಗಳು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ಹೊಂದಿರಬೇಕು. ಇಲ್ಲಿ ಅದೂ ಇಲ್ಲ.

ಸಂಸ್ಥೆಯ ಮೂಲದವರು ಪೊಲೀಸರಿಗೆ ದೂರು ನೀಡಿದರೆ ಈ ಬಗ್ಗೆ ಪರಿಶೀಲಿಸಿ, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವ ಬದಲು ಪೊಲೀಸರು ಮತ್ತು ಜಿಲ್ಲಾಧಿಕಾರಿ ದೂರು ನೀಡಿದವರಿಗೇ ಕಿರುಕುಳ ನೀಡುತ್ತಿದ್ದಾರೆ.


ಇದೇ ರೀತಿ ಜಿಲ್ಲೆಯಲ್ಲಿ ಸುಮಾರು 52 ಶಾಲೆಗಳು ಬೋಗಸ್ ಶಾಲೆಗಳಿವೆ. ಅವುಗಳನ್ನೆಲ್ಲಾ ನಡೆಸುತ್ತಿರುವವರು ಡಿ.ಸಿ. ಕಛೇರಿಯಲ್ಲಿನ ಪ್ರಭಾವಶಾಲಿ ಅಧಿಕಾರಿಗಳು ಮತ್ತು ಪತ್ರಕರ್ತರಾಗಿದ್ದರಿಂದ ಒಬ್ಬರಿಗೊಬ್ಬರು ಸಹಕರಿಸಿಕೊಂಡು ಹಣ ಗುಳುಂ ಮಾಡುತ್ತಿದ್ದಾರೆ. ನಮ್ಮ ಡಿಸಿ ಸಾಹೇಬ ಜಿ.ಎನ್. ನಾಯಕ್‌ಗೆ ಮಾತ್ರ ಪರ್ಸೆಂಟೇಜ್ ಕಡೆಗೇನೇ ಗಮನ. ಹಾಗಾಗಿ ಅವರೂ ಅದರ ಉಸಾಬರಿಗೆ ಹೋಗಿಲ್ಲ.


ಕುಮಾರಣ್ಣನ ಹಟ-ಮೀನುಗಾರರಿಗೆ ಚಟ್ಟ

"ಕೊಲ್ಕತ್ತಾ ಯಾ ಕರ್ನಾಟಕ್,
ನಂದಿಗ್ರಾಮ ಯಾ ನಂದಿಕೂರು,
ಮಮತಾ ಯಾ ಮನೋರಮಾ
ಕಿಸಾನ್ ಯಾ ಮಚ್‌ವಾರಾ:
ಪ್ರಕೃತಿ ಕೋ ಬಚಾನಾ ಫರ್ಜ್ ಹೈ ಹಮಾರಾ!
ಹಮ್ ಸಬ್ ಮಿಲ್ಕೇ ಭಗಾಯೆಂಗೇ
ನಾಗಾರ್ಜುನ್ ಕೋ"....

ಕರಾವಳಿಯಲ್ಲಂತೂ ಬಿಸಿಲ ಧಗೆ ದಿನೇ ದಿನೇ ಏರುತ್ತಿದೆ. ಜೊತೆಗೆ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ವಿರುದ್ಧದ ಹೋರಾಟವೂ ಕಾವೇರುತ್ತಿದೆ. ಕರ್ನಾಟಕದ ವಿದ್ಯುತ್ ಕೊರತೆಯನ್ನು ನೀಗಿಸುತ್ತೇವೆ, ಈ ರಾಜ್ಯದ ಅಭಿವೃದ್ಧಿ ಪಥಕ್ಕೆ ನಾವು ಬೆಳಕಾಗುತ್ತೇವೆ ಎನ್ನುವ ವರ್ಣರಂಜಿತ ಆಶ್ವಾಸನೆಗಳನ್ನು ಬಿತ್ತರಿಸುವ ಮೂಲಕ ಕರಾವಳಿಯ ಜನರ ಬದುಕನ್ನೇ ಕತ್ತಲ ಕೂಪಕ್ಕೆ ತಳ್ಳಲು ಹೊರಟಿರುವ ನಾಗಾರ್ಜುನ ಕಂಪನಿಯ ವಿರುದ್ಧದ ಹೋರಾಟ ಇವತ್ತು ನಿನ್ನೆಯದೇನೂ ಅಲ್ಲ, ಕಳೆದ 14 ವರ್ಷಗಳಿಂದ ಈ ನಾಡಿನ ವಿವಿಧ ಸಂಘಟನೆಗಳು ದಿನಚರಿಯಂತೆ ಒಂದಲ್ಲ ಒಂದು ಹೋರಾಟದ ಮೂಲಕ ಗಮನ ಸೆಳೆಯುತ್ತಲೇ ಬಂದಿವೆ. ನಾಗಾರ್ಜುನ ವಕ್ಕರಿಸಲಿದೆ ಎನ್ನಲಾದ ಪಡುಬಿದಿರೆ-ನಂದಿಕೂರು ಪ್ರದೇಶದ ಎಲ್ಲಾ ಗ್ರಾಮ ವಿದ್ಯುತ್‌ಗಳು ಇದು ಇಲ್ಲಿಗೆ ಬೇಡ ಎಂಬ ನಿರ್ಣಯವನ್ನೇ ಪಾಸು ಮಾಡಿವೆ.

ಸ್ಥಳೀಯ ತಾಲೂಕು ಜಿಲ್ಲಾ ಪರಿಷತ್ ಸದಸ್ಯರು, ಸ್ಥಳೀಯ ಶಾಸಕರು, ಸಂಸದರು ಪರಿಸರವಾದಿಗಳು, ಕೃಷಿಕರು ಮತ್ತು ಮೀನುಗಾರ ಬಂಧುಗಳು, ಎಲ್ಲಾ ಭೇದ ಮರೆತು ಈ ಲಾಭಬಡುಕ ಅಪಾಯಕಾರಿ ಕಂಪನಿಯ ವಿರುದ್ಧ





ತಿರುಗಿ ಬದ್ದಿದ್ದಾರೆ. ಹೀಗೆ ಜನರ ಬದುಕಿಗೆ ಗೋರಿ ತೋಡಿ ದೀಪ ಬೆಳಗುವ ಈ ನಾಗಾರ್ಜುನ ಕಂಪನಿ ನಂದಿಕೂರಿನಲ್ಲೇ ತಳವೂರುವುದು ಜನರಿಗೆ ಬೇಡವಾಗಿದ್ದರೂ, ಮುಖ್ಯಮಂತ್ರಿ ಕುಮಾರಣ್ಣನಿಗೆ ಬೇಕಾಗಿದೆ. ಅದಕ್ಕೆ ಉಡುಪಿಯ ಉಸ್ತುವಾರಿ ಮಂತ್ರಿ ವಿ.ಎಸ್.ಆಚಾರ್ಯರ ಕುಮ್ಮಕ್ಕು, ಕಂತೆಗೆ ತಕ್ಕ ಬೊಂತೆ ಎಂಬಂತಿದೆ. ಈ ಹಿಂದೆ "ನಾಗಾರ್ಜುನ ಕಂಪನಿ ಅಪಾಯಕಾರಿ, ಅದಿಲ್ಲಿಗೆ ಬೇಡವೇ ಬೇಡ" ಎಂದು ಚೆಡ್ಡಿ ಹರಿದುಹೋಗುವಂತೆ ಕಿರುಚಾಡಿದ್ದ ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದ ವಿ.ಎಸ್. ಆಚಾರ್ಯರಿಗೆ ಅಚಾನಕ್‌ಆಗಿ ಉಸ್ತುವಾರಿ ಮಂತ್ರಿ ಎನ್ನುವ ಪಟ್ಟ ಸಿಕ್ಕಿದ್ದೇ ಹಳೆಯ ಹೋರಾಟ- ಪರದಾಟಗಳೆಲ್ಲಾ ಮರೆತೇ ಹೋಗಿದ್ದು ಜನರಿಂದ ಉಗಿಸಿಕೊಳ್ಳ ತೊಡಗಿದ್ದಾರೆ.

ಇತ್ತೀಚೆಗೆ ನಂದಿಕೂರಿನ ದೇವಳದಲ್ಲಿ ವೈಭವದ ಬ್ರಹ್ಮಕಲಶ ಕಾರ್ಯಕ್ರಮವಿತ್ತು, ಅಲ್ಲಿಗೆ ವಿ.ಎಸ್. ಆಚಾರ್ಯರು ಬಿಜಂಗ್ಯ ಯುವುದೂ ಇತ್ತು, ಈ ಊಸರವಳ್ಳಿ ಸ್ವಭಾವದ ಆಚಾರ್ಯರಿಗೆ ಆರತಿ ಎತ್ತಲು ಇದೇ ಸಕಾಲ ಎಂದು ಸಕಲ ಸಿದ್ಧತೆಯೂ ನಡೆದಿತ್ತು, ಕೊನೇ ಕ್ಷಣದಲ್ಲಿ ಇದು ತಿಳಿದು ಅರ್ಧದಾರಿಯಲ್ಲಿಯೇ ಕಾರು ತಿರುಗಿಸಿ ಆಚಾರ್ಯರು ಅಂದು ಬೀಸೋದೊಣ್ಣೆ ಯಿಂದ ಪಾರಾಗಿದ್ದರು. ಜನರ ಓಟಿನ ಹಂಗಿಲ್ಲದೆ ಎಮ್ಮೆಲ್ಸಿಯಾಗಿ ಇದೀಗ ಮಂತ್ರಿಯಾಗಿರುವ ಕಂತ್ರಿ ವಿ.ಎಸ್. ಆಚಾರ್ಯರಿಗೆ ಜನರ ಆಶೋತ್ತರಗಳಿಗಿಂತ ನಾಗಾರ್ಜುನ ಕಂಪನಿಯ ಬಗೆಗಿನ ಕಾಳಜಿಯೇ ಹೆಚ್ಚಾಗಿರುವಂತಿದೆ.

ನಾಗಾರ್ಜುನ ಕಾಳಗ

ನಂಬಿಕೆ ದ್ರೋಹಿ ನಾಗಾರ್ಜುನ

ಪ್ರಥಮತಃ ನಾಗಾರ್ಜುನ ಕಂಪನಿ ಮಂಗಳೂರಿಗೆ ವಕ್ಕರಿಸಿದ್ದೇ ಬೇರೆ ಕಾರಣಕ್ಕೆ. ಮಂಗಳೂರಿನ ತೋಕೂರು ಎಂಬಲ್ಲಿ 731 ಎಕರೆ ಭೂ ಪ್ರದೇಶವನ್ನು ವಶಪಡಿಸಿಕೊಂಡ ಈ ಕಂಪನಿ ಸ್ವಂತದ ಉಕ್ಕು ಸ್ಥಾವರಕ್ಕೆ 300 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಗಾಗಿ ಪರವಾನಗಿ ಪಡೆದುಕೊಂಡಿತು. ಕಂಪನಿ ಮಾಡಿರುವ ಮೊದಲ ಮೋಸವೆಂದರೆ ಈ ಒಂದು ಅನುಮತಿಯನ್ನೇ ನಂದಿಕೂರು ಬಳಿಯ 1015 ಮೆಗಾವ್ಯಾಟ್‌ನ ಉಷ್ಣವಿದ್ಯುತ್ ಸ್ಥಾವರಕ್ಕೆ ಪರಿವರ್ತಿಸಿದ್ದು.

ಪರಿಸರ ಸೂಕ್ಷ್ಮ ಪ್ರದೇಶವಾದ ಕರಾವಳಿಯಲ್ಲಿ ಯಾವುದೇ ಬೃಹತ್ ಉದ್ದಿಮೆ ಕಾಲಿಡುವ ಮುನ್ನ ಅದರ ಧಾರಣಾ ಶಕ್ತಿಯ ಅಧ್ಯಯನ ನಡೆಸಬೇಕಾಗಿದ್ದು ಇದು ಸುಪ್ರೀಂಕೋರ್ಟ್‌ನ ಆದೇಶ. ಇದನ್ನು ನಿರ್ಲಕ್ಷಿಸಿರುವ ಕಂಪನಿ, 1997ರ ಏಪ್ರಿಲ್ ನಂತರದ ಯಾವುದೇ ಹೊಸ ಉದ್ದಿಮೆಗೆ ಅನುಮತಿ ನೀಡುವ ಮೊದಲ ಸಾರ್ವಜನಿಕರ ಅಹವಾಲು ಸಭೆ ನಡೆಸಬೇಕಿದ್ದು, ತಾನು 1997ರ ಮಾರ್ಚ್‌ನಲ್ಲೇ ಅನುಮತಿ ಪಡೆದಿರುವುದಾಗಿ ವಾದಿಸುವ ಕಂಪನಿ ಅಲ್ಲಿಯೂ ಕಾನೂನು ಬಾಹಿರವಾಗಿ ವರ್ತಿಸಿದೆ. ಈ ಪರವಾನಗಿಯೂ 5 ವರ್ಷವಷ್ಟೇ ಊರ್ಜಿತದಲ್ಲಿದ್ದು, ಸುಳ್ಳು ದಾಖಲೆಗಳ ಮೂಲಕ ಸಿಂಧುಗೊಳಿಸಿದೆ. ಹೆಚ್ಚೇಕೆ ಕರ್ನಾಟಕ ಸರ್ಕಾರವೇ ಮಾಡಿದ ಮೂರು ಅಧ್ಯಯನ ವರದಿಗಳಾದ

1) ಡ್ಯಾನಿಡಾ ವರದಿ
2) ಕರ್ನಾಟಕ ಪರಿಸರ ಸ್ಥಿತಿ ವರದಿ ಮತ್ತು ಕಾರ್ಯಯೋಜನೆ - 2003
3) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಔದ್ಯಮಿಕ ಮತ್ತು ಆರ್ಥಿಕ ಬೆಳವಣಿಗೆಯ ಮುನ್ನೋಟ, ಇವೆಲ್ಲವೂ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರದ ಬಾಧಕಗಳನ್ನು ತಮ್ಮ ವರದಿಯಲ್ಲಿ ಎತ್ತಿ ತೋರಿಸಿದೆ.


ಇಷ್ಟೆಲ್ಲಾ ಇದ್ದು ಈ ನಾಗಾರ್ಜುನ ಎನ್ನುವ ಪೀಡೆಗೆ ಮುಖ್ಯಮಂತ್ರಿ ಕುಮಾರಣ್ಣನೇ ಬೆಂಗಾವಲಾಗಿ ನಿಂತಿದ್ದಾರೆ. ಅಂದು ಅಪ್ಪ ದೇವೇಗೌಡರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ ಸದರಿ ಕಂಪನಿಯ no objection ಸರ್ಟಿಫಿಕೆಟ್‌ಗಳೆಲ್ಲ ವಿಲೇವಾರಿಯಾಗಿದ್ದು, ಮಗ ಕುಮಾರಣ್ಣ ತನ್ನ ಕಾಲದಲ್ಲಿ ನಾಗಾರ್ಜುನವನ್ನು ಕಾರ್ಯಗತ ಮಾಡಿಯೇ ಸಿದ್ಧ ಎಂದು ಹೊರಟಿರುವುದು ಯಾಕೆಂದು ತಿಳಿಯುವುದು ಕಷ್ಟದ ವಿಚಾರವಲ್ಲ.



ವಿದ್ಯುತ್ ಕೊರತೆ ರಾಜ್ಯಕ್ಕಿದೆಯೇ?

ನಾಗಾರ್ಜುನ ಕಂಪನಿಯ ಸ್ಥಾಪನೆಯ ಹಿನ್ನೆಲೆಯಲ್ಲಿ ಉದ್ಭವಿಸುವ ಮುಖ್ಯ ಪ್ರಶ್ನೆಯಿದು. ಕಂಪನಿಯ ಪ್ರಕಾರ ನಮ್ಮ ರಾಜ್ಯದ ವಿದ್ಯುತ್ ಕೊರತೆ 2250 ಮೆಗಾ ವ್ಯಾಟ್. ಸರಕಾರಿ ಅಧಿಕಾರಿಗಳ ಪ್ರಕಾರ ಅದು 1000 ಮೆಗಾವ್ಯಾಟ್. ಇದರಲ್ಲಿ ಯಾವುದು ನಿಜ? ಇನ್ನು ನಮ್ಮ ರಾಜ್ಯದ ವಿದ್ಯುತ್ತಿನ ಬೇಡಿಕೆ ಎಷ್ಟು? ಉತ್ಪಾದನೆ ಎಷ್ಟು? ಕೊರತೆ ಎಷ್ಟು? ಎನ್ನುವುದಕ್ಕೆ ಎಲ್ಲೂ ಸ್ಪಷ್ಟವಾದ ಉತ್ತರಗಳಿಲ್ಲ, ಕಳೆದ ಸಾಲಿ... ನೋಡಿದರೆ - ಜುಲೈ ಮೊದಲ ವಾರದಲ್ಲಿ ರಾಯಚೂ... ಉಷ್ಣ ವಿದ್ಯುತ್ ಸ್ಥಾವರದ ಎರಡು ಘಟಕಗಳನ್ನು ... ವಿದ್ಯುತ್ ಉತ್ಪಾದನೆ ಹೆಚ್ಚಾಗಿರುವ ಕಾರಣಕ್ಕೆ ... ಮಾಡಲಾಗಿತ್ತು, ಇಡೀ ಒಂದು ವರ್ಷದಲ್ಲಿ ಮಂಗಳ... ತಣ್ಣೀರುಬಾವಿ ವಿದ್ಯುತ್ ಸ್ಥಾವರದಿಂದ ಒಂದೇ ಒ... ಯೂನಿಟ್ ವಿದ್ಯುತ್‌ನ ಖರೀದಿ ಮಾಡಿಲ್ಲ, ಅದರ... ಕಳೆದ ಬೇಸಿಗೆಯಲ್ಲೂ ನಮ್ಮಲ್ಲಿ ವಿದ್ಯುತ್ ಕೊರತೆ ಇರ... 2010ನೇ ಇಸವಿಯಲ್ಲಿ ಬೇಡಿಕೆ ಹೆಚ್ಚಾಗಲಿರು ವುದರಿ... ನಾಗಾರ್ಜುನ ಬೇಕೆನ್ನುವ ವಾದವಿದೆ. ನಾಗಾರ್ಜು... ಈಗ 'ಲ್ಯಾಂಕೋ' ಎನ್ನುವ ಕಂಪನಿಗೆ ಈ ಯೋಜನೆಯ... ಮಾರಾಟ ಮಾಡಿದ್ದು, ಅದು ವಾರ್ಷಿಕ 200 ಮೆ.... ವಿದ್ಯುತ್ ಅನ್ನು ಕೇರಳ ರಾಜ್ಯಕ್ಕೂ ಮಾರಲು ... ಕೊಂಡಿದೆ.

ಮಳೆಗಾಲದಲ್ಲಿ ನಮಗೆ ಕಂಪನಿಯ ವಿದ್ಯುತ್ ಬೇ... ಇದೂ ಅಲ್ಲದೆ ಈಗಾಗಲೇ ಸುಮಾರು 3000 ಮೆ.... ಉತ್ಪಾದನಾ ಸಾಮರ್ಥ್ಯದ ಯೋಜನೆಗಳು ಕಾಮಗಾರಿ... ವಿವಿಧ ಹಂತದಲ್ಲಿವೆ. ಇದೆಲ್ಲವನ್ನು ಬದಿಗಿರಿಸಿ ಇನ್ನೊ... ಅಂಶದತ್ತ ನೋಡಿದಾಗ.... ನಮ್ಮಲ್ಲಿ ಉತ್ಪಾದನೆಯಾಗ... ಶೇ. 35 ರಷ್ಟು ವಿದ್ಯುತ್ ವಿತರಣೆ ಮತ್ತು ಪ್ರಸ... ಹಂತದಲ್ಲಿ ಪೋಲಾಗುತ್ತಿದೆ. ಈ ನಷ್ಟವನ್ನು ಶೇ.1... ಇಳಿಸಿದರೂ ನಮಗೆ 1000 ಮೆ.ವ್ಯಾ. ವಿದ್ಯು... ಪುಕ್ಕಟೆಯಾಗಿ ಸಿಗುತ್ತದೆ. ಈ ಬಗ್ಗೆ ಯಾಕೆ ಸರ... ತಲೆಕೆಡಿಸಿ ಕೊಳ್ಳುತ್ತಿಲ್ಲ ಎನ್ನುವುದು ಪರಿಸರವಾದಿ... ಸವಾಲು.



ಭರವಸೆಗಳ ಬುರುಡೆ


ನಾಗಾರ್ಜುನ ಕಂಪನಿಯ ಈ ಯೋಜನೆಯಿಂದಾಗಿ ಕರಾವಳಿಯ 10,000 ಜನರಿ... ಉದ್ಯೋಗ ದೊರಕಲಿದೆ. ಉರಿದು ಬಿದ್ದ ಹಾರುಬೂ... ಯಿಂದ ಇಟ್ಟಿಗೆ ಮಾಡುತ್ತೇವೆ ಎಂದೆಲ್ಲಾ ಸಮಜಾಯಿ... ನೀಡುತ್ತಿರುವುದು ಬರಿಯ ಬೊಗಳೆ ಮಾತುಗ... ಎನ್ನುವುದು, ಹನ್ನೆರಡು ವರ್ಷಗಳ ಹಿಂದೆ ಇಂತಹ... ಭರವಸೆಗಳ ಮಳೆ ಸುರಿಸಿ ಕರಾವಳಿಯಲ್ಲಿ ಭದ್ರವಾಗಿರ... ಎಂ.ಆರ್.ಪಿ.ಎಲ್. ತೈಲ ಸಂಸ್ಕರಣಾ ಘಟಕ ಅನು... ನಡೆದುಕೊಂಡ ರೀತಿಯಿಂದ ವೇದ್ಯವಾಗಿದೆ.

ಸಾವು-ನೋವುಗಳ ಭಾರೀ ಪ್ರತಿಭಟನೆಯ ನಂ... ಸ್ಥಳೀಯರಿಗೆ ಉದ್ಯೋಗ ಖಾತರಿಯೊಂದಿಗೆ ವಕ್ಕರಿ... ಎಂ. ಆರ್. ಪಿ. ಎಲ್. ಗೆ ಉದ್ಯೋಗ ನೇಮಕ... ನಡೆದದ್ದೇ ದೂರದ ಚೆನ್ನೈನಲ್ಲಿ, ಅದರೊಳಗೆ ಈಗ ತು... ತುಳುಕುವವರೆಲ್ಲಾ ಮದರಾಸಿ, ಮಲಯಾಳಿಗಳೇ. ಸ... ಹೊರಡಿಸಿದ ಎಂ. ಆರ್. ಪಿ. ಎಲ್. ಆದೇಶದ...

ಮನೋರಮೆಯ ಮನೋಬಲ!

ಕೆಲವೊಂದು ಪರಿಸರ ಮತ್ತು ಜನಪರ ಸಂಘಟನೆಗಳನ್ನೊಳಗೊಂಡ ನಂದಿಕೂರು ಜನಜಾಗೃತಿ ಸಮಿತಿ, ಮೊಗವೀರ ಮಹಾಜನ ಸಂಘ, ಕರ್ನಾಟಕ ಕರಾವಳಿ ಸಾಂಪ್ರದಾಯಿಕ ನಾಡದೋಣಿ ಮೀನುಗಾರರ ಒಕ್ಕೂಟ, ನಾಗಾರ್ಜುನ ಕಂಪನಿಯನ್ನು ಇಲ್ಲಿಂದ ತೊಲಗಿಸಿಯೇ ಸಿದ್ಧ ಎಂದು ಟೊಂಕಕಟ್ಟಿರುವ ಈ ಎಲ್ಲಾ ಸಂಘಟನೆಗಳ ಸ್ವಾರ್ಥಗಳೇನೇ ಇರಲಿ ಸದಾಶಯ ಮಾತ್ರ ಒಂದೇ.

ರಾಜಕಾರಣಿಗಳ ಮಟ್ಟಿಗೆ ಹೇಳುವುದಾದರೆ ದೆಹಲಿಯಿಂದ ಯಾವಾಗಾದರೊಮ್ಮೆ ಓಡಿ ಬಂದು ಒಂದಷ್ಟು ಸಮಾರಂಭಗಳಲ್ಲಿ ಕಾಣಿಸಿಕೊಂಡು ಮಾಯವಾಗುವ ಆಸ್ಕರ್, ಜನರ ಸೇವೆ ಸಾಕಾಗಿ ಇದೀಗ ಕುದ್ರೋಳಿಯಲ್ಲಿ ಕುಳಿತು ಜನಾರ್ದನನ ಸೇವೆಯಲ್ಲಿ ತಲ್ಲೀನರಾಗುತ್ತಿರುವ ಜನಾರ್ದನ ಪೂಜಾರಿ, ಎಲ್ಲಿ ಹುಡುಕಿದರೂ ಸಿಗದ ಮೊಯ್ಲಿ ಎಂಬ ಮಾಜಿ ಮುಖ್ಯಮಂತ್ರಿ ಇವರ್ಯಾರಿಗೂ ಈ ನಾಗಾರ್ಜುನನ ಬಗ್ಗೆ ಮಾತಾಡೋದೇ ಒಂದು ನಿರುಪಯುಕ್ತ ವಿಷಯ. ಬಿ.ಜೆ.ಪಿ.ಯ ಡಿ.ವಿ. ಬ್ರಹ್ಮಕಲಶದಲ್ಲೇ ಬ್ಯುಸಿಯಾಗಿರುವ ನಾಗರಾಜ ಶೆಟ್ಟಿಗೆ ಅದು ತಮ್ಮ ಕ್ಷೇತ್ರಕ್ಕೆ ಸಂಬಂಧ ಪಡದ ವಿಷಯ. ಆದರೆ ಸ್ಥಳೀಯ ಶಾಸಕ , ಪಡುಬಿದ್ರೆಯ ಲಾಲ್‌ಜಿ ಮೆಂಡನ್ ಹೋರಾಟದಲ್ಲಿ ಸಕ್ರಿಯವಾಗಿ ಮಿಂಚುತ್ತಿದ್ದಾರೆ. ಉಳಿದಂತೆ ಸೊರಕೆ, ಸಾಲ್ಯಾನ್, ಜಯಪ್ರಕಾಶ್ ಹೆಗ್ಡೆ, ಸುನಿಲ್ ಕುಮಾರ್ ಊಟಕ್ಕೆ ಒಂದಿಷ್ಟು ಉಪ್ಪಿನಕಾಯಿ ತರಹ ಧರಣಿ-ಕೂಟಗಳಲ್ಲಿ ಕಾಣಿಸಿಕೊಂಡದ್ದಿದೆ.



ಆದರೆ ಎಲ್ಲಕ್ಕಿಂತ ಮುಖ್ಯವಾಗಿ ನಾಗಾರ್ಜುನ ವಿರುದ್ಧ ಸೆರಗು ಬಿಗಿದು ಕಿತ್ತೂರು ಚೆನ್ನಮ್ಮನ ಪೋಸಿನಲ್ಲಿ 'ಬಿಡಲಾರೆ' ಎಂದು ಹೂಂಕರಿಸಿ ಸುದ್ದಿಮಾಡುತ್ತಿರುವಾಕೆ ಸಂಸದೆ ಮನೋರಮೆ. "ಈ ನಾಗಾರ್ಜುನದ ವಿದ್ಯುತ್‌ಕ್ಕಿಂತ ಬುದ್ಧಿ ದೀಪವೇ ಸಾಕು" ಎಂದು ಸ್ಟೇಟ್‌ಮೆಂಟ್ ಕೊಟ್ಟ ಸಂಸದೆ ಈ ದೋಸ್ತಿ ಸರ್ಕಾರದ ಮುಖ್ಯಮಂತ್ರಿ ಕುಮಾರಣ್ಣ ಉಸ್ತುವಾರಿ ಮಂತ್ರಿ ಆಚಾರ್ಯರನ್ನೇ ತರಾಟೆಗೆ ತೆಗೆದುಕೊಂಡು ಸುದ್ದಿಯಾದವರು. ಬಿ.ಜೆ.ಪಿ.ಯಿಂದ ಈಗಾಗಲೇ ಗೇಟ್‌ಪಾಸ್‌ಗೆ ದಿನ ಎಣಿಸುತ್ತಿರುವ ಮನೋರಮಾ ವಿನಾಶ ಕಾಲೇ ವಿಪರೀತ ಬುದ್ಧಿ ಎಂಬಂತೆ ಮುಲಾಜಿಲ್ಲದೇ ಕಿರುಚಾಡುತ್ತಿದ್ದಾರೆ. ಇದರಿಂದ ಇರಿಸು- ಮುರಸಿಗೆ ಒಳಗಾಗಿರುವ ಆಕೆಯ ಹಿತ-ಶತ್ರುಗಳು "ಈಯಮ್ಮ ರಾಜಕೀಯದಲ್ಲಿ ಅಧಿಕಾರದ ಸುಖವನ್ನೆಲ್ಲಾ ಉಂಡದ್ದಾಯಿತು. ಇದೀಗ ಮಗ ಪ್ರಮೋದ್ ಮಧ್ವರಾಜ್‌ನನ್ನು ಒಮ್ಮೆ ಶಾಸಕ ಮಾಡಲು ಈ ನಾಗಾರ್ಜುನ ಹೋರಾಟ ಒಂದು ವೇದಿಕೆ ಆಗಿದೆ... ಎಂದು ಪ್ರಚಾರದಲ್ಲಿ ತೊಡಗಿದ್ದಾರೆ. ಇದು ಗೊತ್ತಾದದ್ದೇ... ಶಕುನಿ ಆಚಾರ್ಯ ಮೊಗವೀರ ಮಹಾಜನ್ ಸಭಾ... ಅಧ್ಯಕ್ಷ ಪ್ರಮೋದ್ ಮಧ್ವರಾಜ್‌ಗೆ ಬತ್ತಿ ಇಟ್ಟಿದ್ದೂ ಆಗಿದೆ... ಮನೋರಮೆ ಮಗ ಈ ಪ್ರಮೋದ್ ಮಾಲೀಕತ್ವ... ಮಲ್ಪೆಯ ಕೋರೋನೆಟ್ ಫಿಶ್‌ಮಿಲ್‌ನಿಂದ ತ್ಯಾಜ್ಯ ನೀರು... ಸಮುದ್ರ ಪಾಲಾಗಿ ಮಾಲಿನ್ಯವಾಗುತ್ತಿದೆ ಎನ್ನು... ಬ್ರಹ್ಮಾಸ್ತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ಪ್ರಯೋಗಿ... ದ್ದಾರೆ. ತನ್ನ ಬುಡಕ್ಕೆ ನೀರು ಬಂದದ್ದೇ ಪ್ರಮೋದ್... ನಾಗಾರ್ಜುನ ವಿರುದ್ಧದ ಹೋರಾಟ ಹಾರಾಟಗಳೆ... ಬಂದ್ ಆಗಿದೆ. ಹಾಗಂತ ಈ ಯಮ್ಮ ಬಿಡಬೇಕಲ್ಲ... ಹೂಂಕರಿಸುತ್ತಲೇ ಇದ್ದಾರೆ.

ಇದೀಗ ಲೇಟೆಸ್ಟ್ ಸುದ್ದಿಯೇನೆಂದರೆ, ನಾಗಾರ್ಜು... ಕಂಪನಿಯವರು ಬುಲ್ಡೋಜರ್ ನುಗ್ಗಿಸಿ ನೆಲ ಸಮತಟ್ಟು... ಮಾಡುವಾಗ ಬಹಳಷ್ಟು ಹಾನಿಯಾಗಿದೆ. ಆ ಪರಿಸರ... ನಾಗಗಳ ಹತ್ಯೆಯಾಗಿದೆ. ಅವುಗಳ ಸದ್ಗತಿಗಾಗಿ ಸರ್ಪಸಂಸ್ಕಾರಕ್ಕಾಗಿ ಉಡುಪಿಯ ಮತ್ತೆ ಕನ್ನೆ ಓಡಾಡುತ್ತಿದೆ.

ಬ್ರಿಲ್ 1997ರ ನಂತರ ತ್ಯಾಜ್ಯ ನೀರನ್ನು ಮರುಬಳಕೆ ಮಾಡಬೇಕಾಗಿತ್ತು. ಈ ಆದೇಶವನ್ನು ಗಾಳಿಗೆ ತೂರಿದ ನಿ ತನ್ನ ಸಾಮರ್ಥ್ಯ ಮೂರು ಪಟ್ಟು ಹೆಚ್ಚಿಸಿಕೊಂಡು ಗೂ ತ್ಯಾಜ್ಯ ನೀರನ್ನು ಸಮುದ್ರಕ್ಕೆ ಬಿಡುತ್ತಲೇ ಇದೆ. ತ್ಯಾಜ್ಯದ ಪರಿಣಾಮವಾಗಿಯೇ ಮಂಗಳೂರಿನಿಂದ ಲ್ಲಿ ತನಕದ ಕರಾವಳಿ ತೀರದಲ್ಲಿ ಮತ್ಸ್ಯಕ್ಷಾಮ ವಿಸಿದ್ದು ಮೀನುಗಾರರ ಅನುಭವಕ್ಕೆ ಬಂದಿದೆ.

ಮಹಾರಾಷ್ಟ್ರದ ದಹಾನುವಿನಲ್ಲಿ ರಿಲೈಯನ್ಸ್ ಕಂಪನಿಯ ಮೆ.ವ್ಯಾ. ನ ಕಲ್ಲಿದ್ದಲಿನಾಧಾರಿತ ಉಷ್ಣ ವಿದ್ಯುತ್ ರದಿಂದಾಗಿ ಅಲ್ಲಿನ ಕೃಷಿ ಸಂಪೂರ್ಣ ನೆಲಕಚ್ಚಿದೆ, ೂಲ್ಯ ನೀರಿನ ತಳಿಗಳು ನಾಶವಾಗಿವೆ ಎನ್ನುವುದು ವರದಿ' 1996 ರಲ್ಲಿ ದಾಖಲಿಸಿದೆ. ನಾಗಾರ್ಜುನ ನಿ ಭಾರೀ ಪ್ರಮಾಣದಲ್ಲಿ ಸಮುದ್ರದ ನೀರನ್ನು ಸಿ, ಬಿಸಿನೀರನ್ನು ಸಮುದ್ರಕ್ಕೆ ಬಿಡುವ ಪ್ರಕ್ರಿಯೆಯಲ್ಲಿ ಬಳಸುವ ನೀರಿನಲ್ಲಿನ ಎಲ್ಲಾ ಜೀವಿಗಳನ್ನು ಕ್ಲೋರಿನ್ ಸಿಕೊಂಡು ವಾತಾವರಣದ ಉಷ್ಣತೆಗಿಂತ 5⁰ ಹೆಚ್ಚು ಇರುವ ನೀರನ್ನು ಸಮುದ್ರದ ಒಡಲಿಗೆ ಚೆಲ್ಲುತ್ತದೆ. ಮೀನಿನ ಆಹಾರ, ಮೀನಿನ ಮೊಟ್ಟೆಗಳ ನಾಶ ತ್ತಿ ಮೀನುಗಳ ವಲಸೆಗೆ ಕಾರಣವಾಗುತ್ತದೆ. ಇದಲ್ಲದೆ ನಲ್ಲಿರುವ ಉಪ್ಪಿನ ಅಂಶ ಬೇರ್ಪಡಿಸಿ ಉಳಿದ ಉಪ್ಪಿನ ಣವನ್ನು ಬೃಹತ್ ಪ್ರಮಾಣದಲ್ಲಿ ಸಮುದ್ರಕ್ಕೆ ವುದರಿಂದ ಸಮುದ್ರದ ನೀರಿನಲ್ಲಿ ಉಪ್ಪಿನಂಶದ ತೋಲನದಿಂದ ಮೀನುಗಳ ನಾಶಕ್ಕೆ ಕಾರಣವಾಗುತ್ತದೆ. ಲ್ಲಾ ಅಡ್ಡ ಪರಿಣಾಮಗಳನ್ನು ನೀರಿ ವರದಿ ವಿವರವಾಗಿ ತ ಪಡಿಸುತ್ತದೆ.

ಹಾರುಬೂದಿಯ ಸಮಸ್ಯೆ

ಅರಬ್ಬೀ ಸಮುದ್ರಕ್ಕೆ 3. ಕಿ.ಮೀ. ಪಶ್ಚಿಮ ಘಟ್ಟಕ್ಕೆ ಕಿ.ಮೀ ನಡುವಿನ ನಂದಿಕೂರು ಎಂಬ ಆಯಕಟ್ಟಿನ ಶದಲ್ಲಿ ನಾಗಾರ್ಜುನ ಕಂಪನಿ ಸ್ಥಾಪನೆಯಾಗಲು ಲ್ಲದ ಕಸರತ್ತು ನಡೆಸುತ್ತಿರುವುದಕ್ಕೆ ಮುಖ್ಯ ಕಾರಣ, ಮಂಗಳೂರಿನ ಬಂದರಿಗೆ ಹತ್ತಿರದಲ್ಲಿರುವುದು. ತನೆಯದು ಸಮುದ್ರದ ಯಥೇಚ್ಛ ನೀರು ಮತ್ತು ತ ಸಂಪರ್ಕ ವ್ಯವಸ್ಥೆ. ಆದರೆ ಪರಿಸರ ಸೂಕ್ಷ್ಮ ಬಿಡವಾದ ಈ ಪ್ರದೇಶದಲ್ಲಿ ಕಲ್ಲಿದ್ದಲು ಉರಿಸಿ ್ಯತ್ ಮಾಡುವ ಪ್ರಕ್ರಿಯೆಯಲ್ಲಿ ದೊಡ್ಡ ಸ್ಯೆಯಾಗೋದೇ ಅಪಾಯಕಾರಿ ಹಾರುಬೂದಿಯದ್ದು. ದಿನವಹಿ 12,000 ಟನ್ ಕಲ್ಲಿದ್ದಲನ್ನು ಉರಿಸಲಿದೆ. ರಿಂದ 75 ರಿಂದ 30% ಹಾರುಬೂದಿ ಹವಾಗಲಿದೆ. ಇದು 10% ಎಂದಾದರೂ ದಿನದಲ್ಲಿ 00 ಟನ್ ನಷ್ಟು ಹಾರುಬೂದಿ ರಾಶಿ ಬೀಳುತ್ತದೆ. ಪಕಾರಿ ಹಾರು ಬೂದಿಯನ್ನು ಏನು ಮಾಡುತ್ತಾರೆ? ಗೆ ಮಾಡುತ್ತೇವೆ ಎನ್ನುತ್ತಾರೆ. ಹಾರುಬೂದಿಯ ಗೆಯಲ್ಲಿ ವಿಕಿರಣ ದೋಷವಿರುವುದರಿಂದ ಅದರ ಗೆಗಳು ಮನೆ ಕಟ್ಟಲು ಸೂಕ್ತವಲ್ಲವೆನ್ನುವುದು ೋಗಗಳಿಂದ ತಿಳಿದುಬಂದಿದೆ. ಅಲ್ಲದೆ ಅಷ್ಟು ದೊಡ್ಡ ಣದ ಬೂದಿರಾಶಿಯನ್ನು ಇಟ್ಟಿಗೆ ಮಾಡಿ ಸುವುದು, ಮಾಡಿದ ಇಟ್ಟಿಗೆಯನ್ನು ವಿಲೇವಾರಿ ೋದು ಅಷ್ಟು ಸುಲಭದ ಕೆಲಸವಲ್ಲ.

ಇನ್ನೂ 100 ಅಡಿಯ ಆಳದ ಹೊಂಡ ತೆಗೆದು ಲ್ಲಿ ಮುಚ್ಚುತ್ತೇವೆ ಎನ್ನುವ ವಾದ. ಕರಾವಳಿ ತೀರದಲ್ಲಿ ಅಡಿ ಆಳದಲ್ಲಿ ನೀರು ಸಿಗುವುದು ಗ್ಯಾರಂಟಿ. ಂದ ಈ ಹಾರುಬೂದಿ ಸುಲಭವಾಗಿ ಅಂತರ್ಜಲದಲ್ಲಿ ನಗೊಳ್ಳುವುದರಲ್ಲಿ ಸಂಶಯವಿಲ್ಲ. ಇನ್ನು ವಾತಾವರಣ ಸೇರುವ ಹಾರುಬೂದಿಯ ವಿಚಾರ. ಆಧುನಿಕ ಜ್ಞಾನ ಬಳಸಿ ಶೇ. 98 ರಷ್ಟು ಹಾರುಬೂದಿಯನ್ನು ವರಣಕ್ಕೆ ಸೂಸುವುದನ್ನು ತಡೆದರೂ 40 ಟನ್ ಹಿ ವಾತಾವರಣ ಸೇರುತ್ತದೆ. ಇದರಲ್ಲಿರುವ ಗಂಧಕದ ಡ್ ವಾತಾವರಣಕ್ಕೆ ಸೇರುವುದು ಪಶ್ಚಿಮ ಗಳಂತಹ ಸೂಕ್ಷ್ಮ ಪ್ರದೇಶಗಳಿಗೆ ನಿಗದಿಪಡಿಸಿದ ್ಯಂಕಕ್ಕಿಂತ ಅಧಿಕವಾಗುವುದರಿಂದ ಜಗತ್ತಿನ ೂಪದ ಪರಿಸರ ಜೀವ ವೈವಿಧ್ಯಗಳ ಆಗರ ಘಟ್ಟಕ್ಕೂ ಗಂಡಾಂತರಕಾರಿಯಾಗಿದೆ.

ಇವೆಲ್ಲವೂ ಈ ವರದಿಗಾರನ ಕಲ್ಪಿತ ಕತೆಗಳಲ್ಲ. ರವೇ ನಿಯೋಜಿಸಿದ 'ನೀರಿ ವರದಿ' ಈ ಎಲ್ಲಾ ಗಳನ್ನು ಸವಿವರವಾಗಿ ತೋರಿಸಿಕೊಟ್ಟಿದೆ. ಇದೆಲ್ಲವನ್ನು ದಿಟ್ಟುಕೊಂಡು, ಈ ಹೋರಾಟದ ಹಿನ್ನಲೆಯಲ್ಲಿನ ಯ ಮೇಲಾಟಗಳನ್ನು, ಪರಿಸರಪರ ಸಂಘಟನೆಗಳ ಯನ್ನು ಅನುಮಾನಿಸುವುದಾದರೂ, ನಮ್ಮ ಲ್ಲಿನ ವಿದ್ಯುತ್‌ನ ಕೊರತೆ ಇರಬಹುದು. ಅದರ ರಕ್ಕಾಗಿ ಯೋಜನೆಯೊಂದನ್ನು, ಪರ್ಯಾಯ ಗಳನ್ನು ಕಂಡುಕೊಳ್ಳುವುದು ತುರ್ತಾಗಿರಬಹುದು. ಅದು ನಾಗಾರ್ಜುನ ಕಂಪನಿಯೇ ಯಾಕೆ ಆಗಬೇಕು? ನ ಕಂಪನಿಯೇ ಆಗಬೇಕೆಂದಿದ್ದರೆ ಅದು ಸೂಕ್ಷ್ಮ ಪ್ರದೇಶವಾದ ಕರಾವಳಿ ತೀರದಲ್ಲಿ ಯಾಕೆ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ಕೊನೆಗೂ ದು ಅಪಾಯಗಳನ್ನು ಮೈಮೇಲೆ ಎಳೆದು ಪರಿಗೆ ನಾಗಾರ್ಜುನದ ವಿದ್ಯುತ್ ಬೇಕಾ?

- ಪ್ರಕಾಶ್ ಪಿಂಟೋ

ಮಹಿಳಾ ವಿ.ವಿ. ಸುತ್ತ ಮಾರೀಚರು

ಉತ್ತರ ಕರ್ನಾಟಕದ ವಿಜಾಪುರದಲ್ಲೊಂದು ಮಹಿಳಾ ವಿಶ್ವವಿದ್ಯಾಲಯ ಹುಟ್ಟಿಕೊಂಡಾಗ ನಾಡಿನ ಅದರಲ್ಲೂ ಉತ್ತರ ಕರ್ನಾಟಕದ ಮಹಿಳಾ ಸಮುದಾಯದ ಕಣ್ಣು ತುಂಬಾ ಬಣ್ಣಬಣ್ಣದ ಕನಸುಗಳು ಚಿಗುರೊಡೆದಿದ್ದವು. ಪ್ರಾಥಮಿಕ ಶಿಕ್ಷಣವನ್ನೂ ಪೂರೈಸಲಾರದ ಅವಸ್ಥೆಯಲ್ಲಿರುವ ಮಹಿಳೆಯರೂ ಉನ್ನತ ವ್ಯಾಸಂಗದ ಕನಸು ಕಟ್ಟಿಕೊಂಡರು. ಲಿಂಗ ತಾರತಮ್ಯ ಮತ್ತು ಪುರುಷಾಧಿಪತ್ಯಪೀಡಿತ ಸಮಾಜವೊಂದರಲ್ಲಿಯೂ ಅವುಗಳ ನಿವಾರಣೆಗಾಗಿ ಒಂದಿಷ್ಟಾದರೂ ಹೆಜ್ಜೆಗಳನ್ನು ಇಟ್ಟರಲ್ಲ ಎಂದು ಸಂತಸಪಟ್ಟರು. ಆದರೆ ಮಹಿಳಾ ವಿ.ವಿ. ಹುಟ್ಟಿದ ನಾಲ್ಕೇ ವರ್ಷಗಳಲ್ಲಿ ಅದಕ್ಕೆ ಕೊಡಲಾಗಿರುವ ಪ್ರಾಶಸ್ತ್ಯ ಮತ್ತು ಅದು ತಲುಪಿರುವ ದುರವಸ್ಥೆಯನ್ನು ನೋಡಿದರೆ ಮಹಿಳಾ ಸಮುದಾಯಕ್ಕೆ ಮಾಡಿದ ಅನ್ಯಾಯ ಎಷ್ಟರಮಟ್ಟಿನದು ಎಂದು ಗೊತ್ತಾಗುತ್ತದೆ.

ಸಾಂಸ್ಕೃತಿಕವಾಗಿ ಹಲವು ಕಂದಕಗಳಿರುವ ಅಖಂಡ ಕರ್ನಾಟಕದೊಳಗೆ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಜನ ಬಡತನ, ದಾರಿದ್ರ್ಯ, ಅನಕ್ಷರತೆ, ಮೂಢನಂಬಿಕೆ, ಜಮೀನ್ದಾರಿ ದೌರ್ಜನ್ಯ-ದಬ್ಬಾಳಿಕೆಗಳ ಬೇಗುದಿಯಲ್ಲಿ ಬೆಂದು ಹೊತ್ತಿನ ತುತ್ತು ಕೂಳಿಗಾಗಿ ಗೋವಾ, ಬಾಂಬೆ, ಬೆಂಗಳೂರಿಗೆ ಗುಳೇ ಹೋಗುತ್ತಿರುವ ಸನ್ನಿವೇಶ ಸೃಷ್ಟಿಯಾಗಿದ್ದರೂ ಅವರ ಅಹವಾಲುಗಳನ್ನು ಕೇಳಲು ಯಾವ ಸರ್ಕಾರ, ರಾಜಕಾರಣಿಗಳೂ ಬರಲಿಲ್ಲ. ಕೊನೆಗೆ ದಾರಿ ಕಾಣದ ರೈತ ಸಮುದಾಯ ಆತ್ಮಹತ್ಯೆಯ ದಾರಿ ಹಿಡಿದಾಗಲೂ ಇವರ ನೋವಿನ ಕಥೆಯನ್ನು ಕೇಳಿಸಿಕೊಳ್ಳುವಷ್ಟು ಸಮಯ, ವ್ಯವಧಾನ ನಮ್ಮ ರಾಜಕಾರಣಿಗಳಿಗೆ, ಸರ್ಕಾರಗಳಿಗೆ ಇಲ್ಲವಾಗಿ ಹೋಯಿತು. ರಾಜಧಾನಿಯಲ್ಲಿ ಕುಳಿತು ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಪುಂಖಾನುಪುಂಖವಾಗಿ ಭಾಷಣ ಮಾಡಿ ಯೋಜನೆಗಳ ಮೇಲೆ ಯೋಜನೆ ರೂಪಿಸಿದರು, ಕೋಟಿಗಳ ಮೇಲೆ ಕೋಟಿ ಹಣ ಬಿಡುಗಡೆ ಮಾಡಿದರು. ಅವೆಲ್ಲ ರಾಜಕಾರಣಿಗಳ, ಕಾಂಟ್ರಾಕ್ಟರುಗಳ ಜೇಬು ತುಂಬಿಸುವುದಕ್ಕೆ ಸಹಕಾರಿಯಾದವೇ ಹೊರತು ಹಸಿದ ಜೀವಕ್ಕೆ ಅನ್ನ ನೀಡುವುದಕ್ಕಲ್ಲ. ಅಂತಹ ಮೋಸದ ಯೋಜನೆಗಳ ಭಾಗವಾಗಿಯೇ ಉತ್ತರ ಕರ್ನಾಟಕದಲ್ಲೊಂದು ಮಹಿಳಾ ವಿಶ್ವ ವಿದ್ಯಾಲಯವೂ ಸ್ಥಾಪನೆಯಾಯಿತು. ಆದರೆ ಅದೂ ಕೂಡ ಈಗ ಇಳಿದಿರುವ ಅಧೋಗತಿಯನ್ನು ನೋಡಿದರೆ ಮಾಡಿದ ಮೋಸ ಅರ್ಥವಾಗುತ್ತದೆ.

ಊಳಿಗಮಾನ್ಯತೆಯ ನೊಗದಡಿ ನಲುಗುತ್ತಿರುವ ಉತ್ತರ ಕರ್ನಾಟಕದಲ್ಲಿ ಇಡೀ ದಮನಿತ ಜನ ಸಮೂಹವೇ ಶೋಷಣೆಯಲ್ಲಿ ಬೇಯುತ್ತಿರುವಾಗ ಮಹಿಳೆಯರು ಲಿಂಗತಾರತಮ್ಯ, ಪುರುಷಾಧಿಪತ್ಯದಂತಹ ಸಾಂಸ್ಕೃತಿಕ ದಬ್ಬಾಳಿಕೆಗೂ ಗುರಿಯಾಗಿ ದುಪ್ಪಟ್ಟು ಶೋಷಣೆ ಅನುಭವಿಸುತ್ತಿದ್ದಾರೆ. ಆರ್ಥಿಕ ನಿರಾಧಾರತನ, ಲಿಂಗ ತಾರತಮ್ಯದ ಪರಿಣಾಮವಾಗಿ ಮಹಿಳೆಯರಿಗೆ ಪ್ರಾಥಮಿಕ ಶಿಕ್ಷಣ ಸಿಗುವುದೂ ದುಸ್ತರ. ಈಗೀಗ ಬಿಸಿಯೂಟದ ಆಸೆಯಿಂದಾಗಿ ಅಥವಾ ಸೈಕಲ್ ಸಿಗುತ್ತದೆಂಬ ಭರವಸೆಯಿಂದಾಗಿ ಹುಡುಗಿಯರನ್ನು ಶಾಲೆಗೆ ಕಳಿಸುತ್ತಿದ್ದಾರಾದರೂ ಉನ್ನತ ಶಿಕ್ಷಣವೆಂಬುದು ಇಂದಿಗೂ ಅವರಿಗೆ ಗಗನಕುಸುಮವೇ. ಇಂತಹ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಪರಿಸರವಿರುವ ಉತ್ತರ ಕರ್ನಾಟಕದಲ್ಲಿ ಮಹಿಳಾ ವಿಶ್ವವಿದ್ಯಾಲಯವು ಹುಟ್ಟಿಕೊಂಡಾಗ ಬಡ ವರ್ಗದಲ್ಲಲ್ಲದಿದ್ದರೂ ಮಧ್ಯಮ ವರ್ಗದ ಹುಡುಗಿಯರಲ್ಲಿ ಪದವಿ, ಸ್ನಾತಕೋತ್ತರ ಪದವಿ ಪಡೆಯಬೇಕೆಂಬ ಕನಸುಗಳು ಬರಗಾಲದಲ್ಲೂ ಬರಿದಿದ್ದವು. ಆದರೆ ಓಟ್‌ಬ್ಯಾಂಕನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸ್ಥಾಪಿಸಿದ ವಿಶ್ವವಿದ್ಯಾಲಯ ಸರ್ಕಾರದ ನಿರ್ಲಕ್ಷ್ಯಕ್ಕೊಳಗಾಗಿ ದುರವಸ್ಥೆಯ ತಾಣವಾಗಿ ಪರಿವರ್ತನೆಯಾಗುವುದರೊಂದಿಗೆ ಹುಡುಗಿಯರ ಬರಿದ ಕನಸುಗಳೂ ಬಾಡಲಾರಂಭಿಸಿವೆ. ನಿಜ ಹೇಳಬೇಕೆಂದರೆ, ಇಂಥದ್ದೊಂದು ವಿಶ್ವವಿದ್ಯಾಲಯ ಕರ್ನಾಟಕದಲ್ಲಿದೆ ಎಂಬುದನ್ನೇ ಸರ್ಕಾರ ಮರೆತಂತೆ ಕಾಣುತ್ತಿದೆ.

ಹುಟ್ಟಿದ ನಾಲ್ಕೇ ವರ್ಷಗಳಲ್ಲಿ ಮಹಿಳಾ ವಿವಿ ಹಗರಣಗಳ ತಾಣವಾಗಿ ಪರಿವರ್ತನೆಯಾದದ್ದು ದುರಂತ. ನಿರ್ದಿಷ್ಟ ಉದ್ದೇಶವೊಂದರ ಈಡೇರಿಕೆಗೆ ವಿಶ್ವವಿದ್ಯಾಲಯವು ಹುಟ್ಟಿಕೊಂಡಾಗ ಆ ಉದ್ದೇಶ ಈಡೇರಿಸಬಲ್ಲ ಸಮರ್ಥರಿಗೆ ಅದರ ಜವಾಬ್ದಾರಿಯನ್ನು ಕೊಡದೇ ಅದರ ನಡಿಗೆಯನ್ನು ಬೆಂಗಳೂರಿನಲ್ಲಿ ಕುಳಿತು ದುರ್ಬೀನಿನಿಂದ ನೋಡಿದ ಸರ್ಕಾರವೇ ಇದಕ್ಕೆ ನೇರ ಹೊಣೆ. ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಹುಟ್ಟಿಕೊಂಡಾಗ ನಾಡಿನ ತಜ್ಞರು, ಬುದ್ಧಿಜೀವಿಗಳು, ಸರ್ಕಾರ ತೋರಿದ ಕಾಳಜಿಗಳು, ವಹಿಸಿದ ಎಚ್ಚರಗಳು ಈ ಮಹಿಳಾ ವಿ.ವಿ.ಗೆ ದೊರೆಯದೇ ಹೋಗಿ ಈ ದುರವಸ್ಥೆಗೆ ಬಂದಿದೆಯೆಂದರೆ ಇದನ್ನು ಲಿಂಗ ತಾರತಮ್ಯ ಪುರುಷಾಧಿಪತ್ಯ ಎನ್ನದೇ ಏನೆನ್ನಬೇಕು?

ವಿಶ್ವವಿದ್ಯಾಲಯ ಎಂದರೆ ಕೇವಲ ಭವ್ಯ ಕಟ್ಟಡಗಳಲ್ಲ ಅಥವಾ ಕಾಂಟ್ರಾಕ್ಟರ್‌ನಂತಹ ಕುಲಪತಿಯೂ ಅಲ್ಲ. ಇಂತಹ ಒಂದು ಮಹತ್ವಪೂರ್ಣ ವಿಶ್ವವಿದ್ಯಾಲಯಕ್ಕೆ ಸಾಮಾಜಿಕ ಬದ್ಧತೆ ಇರುವ, ಶೈಕ್ಷಣಿಕ ಯೋಗ್ಯತೆ ಇರುವ, ಜವಾಬ್ದಾರಿಯಿಂದ ಆಡಳಿತ ನಡೆಸಿಕೊಂಡು ಹೋಗುವ ಸಾಮರ್ಥ್ಯವಿರುವ ಶುದ್ಧಹಸ್ತ, ಶ್ರದ್ಧೆ, ಪರಿಶ್ರಮವಿರುವ ಕುಲಪತಿಗಳ ಅಗತ್ಯವಿರುತ್ತದೆ. ಇಂತಹ ಸಮರ್ಥ ಕುಲಪತಿಗಳನ್ನು ಆಯ್ಕೆ ಮಾಡುವಲ್ಲಿ ಸರ್ಕಾರ, ರಾಜಕಾರಣಿಗಳು ವಹಿಸಿದ ಕಾಳಜಿ ಎಷ್ಟು ಎಂಬುದು ಇಲ್ಲಿ ಪ್ರಶ್ನಾರ್ಹ. ಸರ್ಕಾರದ ಈ ನಿರ್ಲಕ್ಷ್ಯದಿಂದಾಗಿಯೇ ವಿ.ವಿ.ಯ ಅಧೋಗತಿಯ ಹಾದಿ ಸುಗಮವಾದಂತಾಗಿದೆ.

ವಿಶ್ವವಿದ್ಯಾಲಯ ಆರಂಭವಾಗುತ್ತಿದ್ದಂತೆಯೇ ಸಿಕ್ಕಸಿಕ್ಕವರ ಒತ್ತಡಗಳಿಗೆ ಮಣಿದು ಅರ್ಹತೆ, ಯೋಗ್ಯತೆ, ಸಾಮರ್ಥ್ಯವಿಲ್ಲದವರನ್ನೆಲ್ಲಾ ಎರವಲು ಸಿಬ್ಬಂದಿಯನ್ನಾಗಿ ತುರುಕಿಕೊಳ್ಳಲಾಯಿತು. ಮಹಿಳಾ ವಿ.ವಿ.ಯೊಂದರ ಭದ್ರಬುನಾದಿಗೆ ನಾಡಿನಲ್ಲಿರುವ ಶೈಕ್ಷಣಿಕ ಶಿಸ್ತು, ಗುಣಮಟ್ಟದ ಬೌದ್ಧಿಕತೆ, ಸ್ತ್ರೀ ಸಿದ್ಧಾಂತದ ಸಾಮಾಜಿಕ ಕಳಕಳಿ ಹೊಂದಿರುವವರ ಅಗತ್ಯ ಎಷ್ಟಿದೆ ಎಂಬುದನ್ನು ಯಾರೂ ಅರ್ಥ ಮಾಡಿಕೊಳ್ಳಲಿಲ್ಲ. ಅಥವಾ ಅರ್ಥ ಮಾಡಿಕೊಳ್ಳಲು ಇಷ್ಟಪಡಲಿಲ್ಲ ಎಂದು ಹೇಳಿದರೆ ಸರಿಯಾಗುತ್ತದೆ ಏನೋ. ಹಾಗಾಗಿ ಸರ್ಕಾರವೇ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಭದ್ರ ಬುನಾದಿಯನ್ನು ಹಾಕಿತ್ತು.

ಆರಂಭದಿಂದಲೂ ಈ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದಷ್ಟು ಹಣವನ್ನು ಎಂದೂ ಸರ್ಕಾರ ಕೊಡಲಿಲ್ಲ. ಕೊಟ್ಟಿದ್ದ ಅಷ್ಟು ಇಷ್ಟು ಯಾರ್‍ಯಾರೋ ಜೇಬು ಸೇರಿತೋ, ಅಂತೂ ವಿಶ್ವವಿದ್ಯಾಲಯವಂತೂ ಉದ್ಧಾರವಾಗಲಿಲ್ಲ. ಇದು ಮಹಿಳಾ ವಿಶ್ವವಿದ್ಯಾಲಯ ಎಂಬ ಕಾರಣಕ್ಕೆ ಈ ಮಲತಾಯಿ ಧೋರಣೆ ಎನ್ನದೇ ಬೇರೇನೆನ್ನಬೇಕು? ಈ ಧೋರಣೆಯ ಪರಂಪರೆಯನ್ನು ಬಾಚೂತಪ್ಪದೇ ಮುಂದುವರೆಸುತ್ತಿರುವ ಕೀರ್ತಿ ಸೈಕಲ್ ಪ್ರಿಯ ಯಡಿಯೂರಪ್ಪನವರಿಗೆ ಸಲ್ಲಬೇಕು. ಸೈಕಲ್ ಕೊಟ್ಟು ಅವರಿಂದ ಉನ್ನತ ಶಿಕ್ಷಣ ಕಿತ್ತುಕೊಳ್ಳುವ ಅವರ ಕೌಶಲ್ಯವನ್ನು ಮಹಿಳೆಯರು ಅರ್ಥ ಮಾಡಿಕೊಳ್ಳಲಾರರು ಎಂದು ಅವರು ಭಾವಿಸಿದ್ದಿರಬೇಕು. ಈ ಬಾರಿಯ ಬಜೆಟ್‌ನಲ್ಲಿ ಮಠ-ಮಾನ್ಯಗಳಿಗೆ ಒಟ್ಟು 200 ಕೋಟಿ ರೂಪಾಯಿ ಗಳನ್ನು ಕೊಟ್ಟಿರುವ ಅವರು ಮಹಿಳೆಯರ ಶಿಕ್ಷಣಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದು ಜನ ಪ್ರಶ್ನಿಸುವುದಿಲ್ಲ ಎಂದು ತಿಳಿದಿರಬೇಕು. ಪಕ್ಷದ ರಾಜಕಾರಣದ ಸ್ವಾರ್ಥದಲ್ಲಿ ಮುಳುಗಿರುವ ಮಹಿಳಾ ರಾಜಕಾರಣಿಗಳಂತೂ ಇದನ್ನು ಪ್ರಶ್ನಿಸುವುದಿಲ್ಲ, ಆದರೆ ಪ್ರಜ್ಞಾವಂತ ಮಹಿಳೆಯರು ಸುಮ್ಮನಿರುವುದಿಲ್ಲ ಎಂಬುದು ಅವರಿಗೆ ಅರ್ಥವಾಗಬೇಕು. ವಿಧಾನಸೌಧದ ಒಳಗಿನ ಮಹಿಳೆಯರು ಮತ್ತು ಹೊರಗಿರುವ ಜಾತಿವಾದಿ ಗಂಡಸರು ಈ ಮಹಿಳಾ ವಿಶ್ವವಿದ್ಯಾಲಯಕ್ಕೆ ಹೆಸರಿಡಲು ತೋರುತ್ತಿರುವ ಉತ್ಸಾಹವನ್ನು ಅದರ ಬೆಳವಣಿಗೆಗೆ ತೋರದಿರುವುದು ಅವರಿಗಿರುವ ಸಾಮಾಜಿಕ ಜವಾಬ್ದಾರಿಯ ಕೊರತೆಯನ್ನು ಎತ್ತಿ ಹಿಡಿಯುತ್ತದೆ.

ಮಹಿಳಾ ವಿ.ವಿ. ಎದುರಿಸುತ್ತಿರುವ ಪ್ರಧಾನ ಸಮಸ್ಯೆಗಳಲ್ಲಿ ಒಂದೆಂದರೆ ಅಗತ್ಯವಿದ್ದಷ್ಟು ಬೋಧಕರೇ ಇಲ್ಲದಿರುವುದು. ಹೀಗಾಗಿ ಅಲ್ಲಿ ದಾಖಲಾದ ಹುಡುಗಿಯರ ಬದುಕು ಅತಂತ್ರ ಸ್ಥಿತಿಯಲ್ಲಿ ನೇತಾಡುತ್ತಿದೆ. ಇದಕ್ಕಿಂತಲೂ ಹೀನಾಯವಾದದ್ದೆಂದರೆ, ಬೋಧಕರನ್ನು ನೇಮಕ ಮಾಡಿಕೊಳ್ಳುವ ಬದಲು ವಿದ್ಯಾರ್ಥಿನಿಯರನ್ನೇ ಬೇರೆ ಬೇರೆ ವಿಶ್ವವಿದ್ಯಾಲಯಗಳಿಗೆ ರವಾನಿಸುವ ಮೂಲಕ ಕೈತೊಳೆದುಕೊಳ್ಳುತ್ತಿದ್ದಾರೆ! ಬೋಧಕರನ್ನು ನೇಮಿಸಲಾಗದ ಮೇಲೆ, ವಿದ್ಯಾರ್ಥಿಯರನ್ನು ಬೇರೆ ವಿಶ್ವವಿದ್ಯಾಲಯಗಳಿಗೆ ಕಳಿಸುವು ದಾದರೆ ಮಹಿಳಾ ವಿಶ್ವವಿದ್ಯಾಲಯ ವನ್ನು ಯಾಕೆ ಸ್ಥಾಪಿಸಬೇಕಿತ್ತು? ಕೇವಲ ಮಹಿಳೆಯರ ಕಣ್ಣು ಒರೆಸುವುದಕ್ಕಾಗಿಯೇ?

ವಿ.ವಿ.ಯಲ್ಲಿ ಯಾವ ಕಾರ್ಯವೂ ಪಾರದರ್ಶಕವಾಗಿಲ್ಲ. ಒಂದೆಡೆ ಸರ್ಕಾರದ ನಿರ್ಲಕ್ಷ್ಯ ಇನ್ನೊಂದೆಡೆ ವಿ.ವಿ.ಯೊಳಗಿನ ಭ್ರಷ್ಟಾಚಾರ ಎರಡೂ ಸೇರಿ ವಿ.ವಿ.ಗೆ ಒಂದು ಗತಿ ಕಾಣಿಸಲಾಗಿದೆ.

ಆರು ತಿಂಗಳ ಹಿಂದೆ ಲಕ್ಷಾಂತರ ದುಡ್ಡು ಸುರಿದು ವಿವಿಧ ಹುದ್ದೆಗಳಿಗೆ ನೇಮಕಾತಿಗಾಗಿ ಸಂದರ್ಶನ ಕರೆಯಲಾಯಿತು. ಸಂದರ್ಶನ ಪೂರ್ಣವಾದ ಮೇಲೆ ಈಗ ಅದನ್ನು ರದ್ದು ಮಾಡಲು ಹೊರಟಿದ್ದಾರೆ. ಇದರ ಹಿಂದಿನ ಪಕ್ಷ ರಾಜಕಾರಣದ ಕಮಟು ವಾಸನೆ ಎಲ್ಲೆಡೆ ಹಬ್ಬಿದ್ದು ಈಗದು ಗುಟ್ಟಾಗಿ ಉಳಿದಿಲ್ಲ. ನೇಮಕಾತಿಯ ಸಂದರ್ಭದಲ್ಲಿ ನೇಮಕಾತಿ ಸಮಿತಿಗಳು ತೆಗೆದುಕೊಂಡ ಎಚ್ಚರ ಮತ್ತು ಸ್ವಾತಂತ್ರ್ಯವನ್ನು ಗಮನಿಸದೆ ಮಾಡಲಾಗುತ್ತಿರುವ ಅವಾಂತರವಿದು. ಕುಲಪತಿಯ ಒತ್ತಡ ಮತ್ತು ಸ್ವಜನಪಕ್ಷಪಾತಕ್ಕೆ ಮಣಿಯದೇ, ರಾಜಕಾರಣಿಗಳ ಬೆದರಿಕೆಗಳಿಗೆ ಸೊಪ್ಪು ಹಾಕದೆ, ಕೇವಲ ಯೋಗ್ಯತೆಯ ಆಧಾರದ ಮೇಲೆ ಮಾಡಿದ ನೇಮಕಾತಿಗೆ ಬಂದಿರುವ ಗತಿ ಇದು.

ಒಂದು ವೇಳೆ, ನೇಮಕಾತಿ ರದ್ದಾಗಿದ್ದೇ ಆದರೆ ಲಕ್ಷಾಂತರ ರೂಪಾಯಿ ನಷ್ಟವಾಗಿದ್ದು ಮಾತ್ರವಲ್ಲ ಸಾವಿರಾರು ವಿದ್ಯಾರ್ಥಿಗಳ ಭವಿತವ್ಯವನ್ನು ಅತಂತ್ರಕ್ಕೆ ದೂಡಿದಂತಾಗುತ್ತದೆ. ಈಗಾಗಲೇ ಅಧ್ಯಾಪಕರಿಲ್ಲದೇ ಒದ್ದಾಡುತ್ತಿರುವ ವಿದ್ಯಾರ್ಥಿಗಳಿಗೆ ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ರಾಜಕಾರಣಿಗಳು, ಕುಲಪತಿಗಳು ಆಡುವ ಚೆಲ್ಲಾಟಕ್ಕೆ ವಿದ್ಯಾರ್ಥಿಗಳು ಬಲಿಪಶುಗಳಾಗುತ್ತಾರೆ. ಮತ್ತೊಂದು ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಲು ಒಂದೂವರೆ-ಎರಡು ವರ್ಷಗಳು ಬೇಕು. ಅಲ್ಲಿಯವರೆಗೆ ವಿ.ವಿ.ಯನ್ನು ಮುಚ್ಚಬೇಕೆ ಎಂಬ ಪ್ರಶ್ನೆ ಎದುರಾಗುತ್ತಿದೆ. ಸರ್ಕಾರ ರಚಿಸಿರುವ ಸಂಪುಟದ ಉಪಸಮಿತಿಯು ನೇಮಕಾತಿ ಸಮಿತಿಯ ಶಿಫಾರಸ್ಸುಗಳನ್ನು ಮುಂದಿಟ್ಟುಕೊಂಡು ತಕರಾರು ದಾಖಲಾಗದ ಹುದ್ದೆಗಳ ನೇಮಕಾತಿಗಳನ್ನಾದರೂ ಸಿಂಧುಗೊಳಿಸಬೇಕು. ಆ ಮೂಲಕ ಮುಚ್ಚಿರುವ ವಿಭಾಗಗಳ ಬಾಗಿಲುಗಳನ್ನು ತೆರೆಯಬೇಕು. ನೇಮಕಾತಿಯಲ್ಲಿ ತಕರಾರು ದಾಖಲಾದ ಅಥವಾ ತಕರಾರು ಎತ್ತಲಾಗಿರುವ ಹುದ್ದೆಗಳಿಗೆ ಬೇಕಾದರೆ ಪುನಃ ಸಂದರ್ಶನ ಪ್ರಾರಂಭಿಸಲಿ.

ವಿ.ವಿ. ನೇಮಕಾತಿ ಎಂಬುದು ಕೇವಲ ಕುಲಪತಿ ತೀರ್ಮಾನಿಸುವ ವಿಚಾರ ಅಲ್ಲ. ಅದಕ್ಕಾಗಿ ವಿಷಯ ತಜ್ಞರ ಸಮಿತಿ ಇರುತ್ತದೆ. ಅದು ಕುಲಪತಿಗಳಾದ ರಾಜ್ಯಪಾಲರು ಆಯ್ಕೆ ಮಾಡಿದ ಸಮಿತಿಯಾಗಿರುತ್ತದೆ. ಇಡೀ ನೇಮಕಾತಿ ಪ್ರಕ್ರಿಯೆಯನ್ನು ರದ್ದು ಮಾಡುವುದರಿಂದ ಸಾರ್ವಜನಿಕರಲ್ಲಿ ಸಮಿತಿಯ ಬಗ್ಗೆ ಅನುಮಾನ ಪ್ರಾರಂಭವಾಗುತ್ತದೆ. ಅಲ್ಲದೆ ಖರ್ಚಾಗಿರುವ ಸಮಯ ಮತ್ತು ಲಕ್ಷಾಂತರ ಹಣ ವ್ಯರ್ಥವಾಗುತ್ತದೆ.

ಈಗಾಗಲೇ ಅವನತಿಯತ್ತ ಸಾಗುತ್ತಿರುವ ಮಹಿಳಾ ವಿ.ವಿ.ಯನ್ನು ಈ ರದ್ಧತಿ ಮತ್ತಷ್ಟು ಅವನತಿಯತ್ತ ದೂಡುತ್ತದೆ. ಹಾಗಾಗಿ ರದ್ಧತಿಯ ಈ ಕ್ರಮವನ್ನು ವಿರೋಧಿಸಿ ಮಹಿಳಾ ವಿ.ವಿ.ಯನ್ನು ರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ.

-ಡಾ. ಮಲ್ಲಿಕಾ ಘಂಟಿ



ಮಹಿಳಾ ಯುನಿವರ್ಸಿಟಿ ಮತ್ತು ಸೈಯಿದಾ ಅಕ್ತರ್

ತೇಜಸ್ವಿ ನಿಜವಾದ ರೈತನ ಮಗ

ಅವರೆಲ್ಲಾ ರಾಜಕುಮಾರ್ ತೀರಿಕೊಂಡು ವರ್ಷ ತುಂಬಿದ ಬಗ್ಗೆ ವಿಷಾದದಿಂದ ಮಾತನಾಡುತ್ತಿದ್ದರು. ಆಗ ಕಾಣಿಸಿಕೊಂಡ ವಾಟಸ್ಸೆ.

"ತೇಜಸ್ವಿ ತೀರೋದರಂತೆ ಕಣೊ ಉಗ್ರಿ" ಎಂದ

"ದೊಡ್ಡ ದೊಡ್ಡ ಮರ ಇದ್ದಕ್ಕಿದ್ದಂತೆ ಎಳ್ತಾ ಅವುಲ್ಲಪ್ಪ" ಎಂದ ಉಗ್ರಿ.

"ತೇಜಸ್ವಿ ಅಂದ್ರೆ ಅವುರ್ಯಾರ್ಲ ಉಗ್ರಿ?" ಎಂದಳು ಜುಮ್ಮಿ.

ಚಂಗಾಲು ಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ಇದೇನೆ ಕುಮಾರಸ್ವಾಮಿಯಂಗೆ ಕೇಳ್ತಿ ನೀನು? ಕುವೆಂಪು ಹಿರಿಮಗ ಕಣೆ, ಪೂರ್ಣಚಂದ್ರ ತೇಜಸ್ವಿ ಅಂತ."

"ಅವುರು ಕುಯೆಂಪು ಅಂಗೆ ಬರಿತಿದ್ರ?"

"ಬರಿಯದರ ಜೊತಿಗೆ ರೈತಾಪಿ ಕ್ಯಲಸನೂ ಮಾಡತಿದ್ರು."

"ಅಂಗರೆ ರೈತರ ಕಸುಬುನ್ನು ಮಾಡತಿದ್ದ ಅನ್ನು?" ಎಂದ ಕಾಳಮಾವ.

"ಊ ಕಣ ಮಾವ."

"ಓದಿರಲಿಲವೇನ್ನ?" ಎಂದ ಸೀರ.

"ಮೈಸೂರಲ್ಲಿದ್ದುಕೊಂಡು ಎಂ.ಎ. ಓದಿದ್ರು ಕಣೊ."

"ಯಮ್ಮ ಓದಿದ್ರು ಯವಸಾಯ ಮಾಡಿತಿದ್ರು ಅಂದ್ರೆ ಯಂಗೇ?" ಎಂದು ಸೀರ ಅಚ್ಚರಿ ತೋರಿದ.

"ಅಯ್ಯೋ ಅವುರದೊಂದು ಕತೆ ಕಣಮಾವ, ನಾನು ಇದೀ ದಿನ ಹೇಳಿದ್ರು ಮುಗಿಯದಿಲ್ಲ"

"ಓ ಅಂಗರೆ ಬಾಳ ಇವುನು ಅನ್ನು?"

"ಕನ್ನಡ ಸಾಯಿತ್ಯದಲ್ಲಿ ಆತರ ಇದ್ದೋರು ಅವುರೊಬ್ಬರೆಯ."

"ಬರೀ ಸಾಯಿತ್ಯ ಅಲ್ಲ ಚಿಗಪ್ಪ ನೀನ್ಯಾವುದ್ರಲ್ಲೆ ತಗೊ ಅಂತ ಮನ್ಸ ಇನ್ನಬ್ಬ ಇಲ್ಲಿಲ್ಲ" ಎಂದ ವಾಟಸ್ಸೆ.

"ಏಟೇ ಆಗ್ಲಿ ಕುಯೆಂಪು ಮಗಲ್ವೆ?" ಎಂದ ಕಾಳಮಾವ.

"ಕುಯೆಂಪು ಮಗಾದ್ರು ಸಣ್ಣದರಲ್ಲಿ ಓದಿನ ಕಡೆ ಅಷ್ಟು ಗಮನ ಇರಲಿಲ್ಲ ದ್ವಡಪ್ಪ, ನಳ್ಳಿ ಇಡಿಯದು ಓತಿಕ್ಯಾತುನ್ನ ವಡಿಯದು, ನಾಯಿ ಚೂಲು ಬುಟಗಂಡು ಹಂದಿ ಓಡಿಸಿಗಂಡೋಗದು, ಕ್ಯಾಟರ್ ಬಿಲ್ ತಗಂಡು ಹಕ್ಕಿ ವಡಿಯದು, ಸುಟಗಂಡು ತಿನ್ನದು, ಜೇನುಬಿಚ್ಚದು. ಅಯ್ಯೋ ಅವುನಾಟ ನೋಡಿದ ಜನ, ಅಂತ ಮಹಾ ಕವಿ ವಟ್ಟೆಲಿ ಈ ರಾಕ್ಷಸ ಯಂಗುಟ್ಟಿದಾ ಅಂತ ಕೇಳೋರಂತೆ."

"ಕುಯೆಂಪು ಸುಮ್ಮನಿದ್ದುದ್ದೇಳು ಅದನ್ನಲ್ಲ ನೋಡಿ ಕಂಡು?"

"ಅವುರೇನು ಅನ್ನಲಿಲ್ಲವಂತೆ. ನಿನ್ನಿಷ್ಟ ಬಂದಂಗೆ ಮಾಡಪ್ಪ ಅಂತ ಕೈಗೊಸಿ ದುಡ್ಡು ಕೊಟ್ಟು ಕಳಿಸಿದ್ರುತ್ತೆ."

"ಓ ಪಾಲು ಕೊಟ್ಟು ಕಳಿಸಿದ್ರು ಅನ್ನು?"

"ಪಾಲಲ್ಲ, ನಿನ್ನಿಷ್ಟದಂಗೆ ಎಲ್ಯಾರ ಹೋಗಿ ಬದಿಕ್ಕ ಅಂದ್ರು. ತೇಜಸ್ವಿಗೆ ಒಂಥರಾ ಗೊಂತರಕಂಡಂಗಾಯ್ತು. ಯಾಕಂದ್ರೆ ಸ್ವತಂತ್ರ ಬಾಳ ಇಷ್ಟಪಡೊ ಮನ್ಸ."


"ನೀನೇಳತಿದ್ದಾಗ್ಲೆ ಗೊತ್ತಾಯ್ತು ತಗೊ."

"ಸರಿ ಅಪ್ಪನತ್ರ ದುಡ್ಡೀಸಗಂಡು ಬಂದು ಮೂಡಿಗೆರೆತ ಜಮೀನು ತಕ್ಕಂಡು, ಅಲ್ಲಿದ್ದ ಸೊಪ್ಪು ಸ್ಯದೆ ಸವರಿ ಬದ ಹಾಕಿ ಕಾಫಿ ತ್ವಾಟ ಮಾಡಿ ರೈತ ಅನ್ನಿಸಿಗಂಡ."

"ಕಾಫಿ ತ್ವಾಟ ಮಾಡಿದ್ನೆ?"

"ಊ ದ್ವಡಪ್ಪ ಇದೀ ಕನ್ನಡ ಸಾಯಿತ್ಯದಲ್ಲಿ ಯದೆ ರಗತ ಬಸ್ತು ತ್ವಾಟ ಮಾಡಿಕಂಡು ಬಿಡುವಾದಾಗ ಬರಕಂಡು ಶಿಕಾರಿ ಮಾಡಿಕಂಡು ತನಗಿಷ್ಟ ಬಂದಂಗೆ ಬದಕಿದೋನು ಅವುನೊಬ್ಬನೆಯ ನೋಡು."

"ನಿಜವಾದ ರೈತ ಬುದ್ಧ ಅವುನು."



"ಇನ್ಯಾವನಾರ ಆಗಿದ್ರೆ ಆ ಮೈಸೂರಲ್ಲಿ ಮೇಟ್ರಾಗಿ ಕತೆ ಪತೆ ಬರಕಂಡು, ಅವುರಿವುರ ಕೈಲಿ ಅಗಳಿಸಿಗಂಡು, ಕಡಿಗೆ ಮಾಡಬಾರ್ದ ರಾಜಕೀಯ ಮಾಡಿ ಯೂನಿವರ್ಸಿಟಿಗೆ ವೈಸ್ ಚಾನ್ಸಲರ್ರಾಗಿ, ರಿಟೈರಾಗಿ ಒಂದು ಅಭಿನಂದನ ಗ್ರಂಥ ಅರ್ಪಿಸಿಗಂಡು, ಆಮ್ಯಾಲೆ ಸರ್ಕಾರದ ಯಾವುದಾದ್ರು ಕುರ್ಚಿ ಹಿಡಿಯೋರು. ಆದ್ರೆ ನಮ್ಮ ತೇಜಸ್ವಿ ದ್ವಡಪ್ಪ ಥೇಟ್ ನಿನ್ನಂಗೆ ಬದುಕಿಬುಟ್ಟ."

"ಅಂತ ಪುಣ್ಯಾತ್ಮರ್ನೆಲ್ಲ ಹೋಗಿ ಸಾವಿನ್ನು ಇ
ಹೇಳು?"

"ಮುದಿವಾಗಿತ್ತ ಅವುರಿಗೆ?" ಎಂದಳು ಜು

"ಲಪ್ಪ ಮ್ಯಾರೇಜಾಗಿದ್ರು ಕಣಕ್ಕ, ಅದು
ಜಾತಿಲಿ. ಇದೇ ತರ ಆಗಿ ಅಂತ ಯಲ್ಲಾರಿಗೂ ಹೇ
ಕಡಿಗೆ ಅವುರ ಜ್ಯತಿಯೋರ್ನೆಲ್ಲ ಅಂಗೆ ಅದ್ರು,"

"ಮಕ್ಕಳಿದ್ದವೆ?"

"ಯರಡೆಣ್ಣ ಮಕ್ಕಳವೆ. ಅವು ಮದಿವಾಗ್ಯ

"ಅಂಗರೆ ಸರಿ ಬುಡು."

"ನೀನು ಸರಿ ಬುಡು ಅಂತಿ, ಅವುರಿನ್ನು ಏನ
ಬರಿತಿದ್ರೊ ಅಂತ ನ್ಯನಿಸಿಗಂಡ್ರೆ ಅಳುಬತ್ತದೆ."


"ಅಂಗರಿನ್ನು ಬರದಾಗಿರಲಿಲ್ಲ ಅನ್ನು?"

"ಮುಕ್ಕಾಲು ಭಾಗ ಆಗಿತ್ತು ಕಣಕ್ಕ. ಆದ್ರುವೆ
ಕಾಯ್ತಿದ್ರು. ಸಣ್ಣುಡಗರಿಂದ ಹಿಡಿದು ದೊಡ್ಡೋರ
ಓದಂಗೆ ಬರಿತಿದ್ರು ಕಣಕ್ಕ. ಇನ್ನು ಏನು ಬರಿತಿ
ಏನೊ?"

"ಬರಿಯದಿರ್ಲಿ ಕಣೊ, ಪೊಟಾ ತಗಿತಿ
ಮೀನಿಡಿತಿದ್ರು, ಗೀಜಗನಕ್ಕಿ ಗೂಡ ಕಟ್ಟದ ದಿನ

ಪಾಪ, ಶಾನೆ ಕಷ್ಟ ದೇವೇಗೌಡರಿಗೆ!

ಹರದನಹಳ್ಳಿ ದೇವೇಗೌಡರ ಮನಸ್ಸಿಗೆ ನೆಮ್ಮದಿಯೇ ಇಲ್ಲದಂತೆ ಆಗಿದೆಯಂತೆ. ಒಂದು ಸಮಸ್ಯೆಯನ್ನು ಬಿಡಿಸಿದೆ ಅಂತ ನಿರಾಳವಾಗಿ ಉಸಿರು ಹುಯ್ದುಕೊಳ್ಳುವ ಹೊತ್ತಿಗೆ ಇನ್ನೊಂದು ಸಮಸ್ಯೆ ಅಡಕಿಕೊಳ್ಳುತ್ತದೆಯಂತೆ. ಆ ಸಿದ್ಧರಾಮಯ್ಯ ಅನ್ನೊ ಪಾಪೀನೆ ಈ ಎಲ್ಲ ತರಲೆ ತಾಪತ್ರಯಗಳಿಗೆ ಮೂಲ ಎಂದು ಯಾರೋ ಅವರ ಕಿವಿಯಲ್ಲಿ ಉಸುರಿದರಂತೆ. ಆತನ ನಿರ್ಮೂಲನಕ್ಕೆ ದಾರಿಯನ್ನೂ ತೋರಿಸಿದರಂತೆ. ಅದರ ಅನ್ವಯ ಮಲೆಯಾಳಿ ಮಾಂತ್ರಿಕನನ್ನು ಕರೆಸಿ ಆತನಿಗೆ ಸಿದ್ಧರಾಮಯ್ಯ ನಿರ್ಮೂಲನಾ ಕಾರ್ಯವನ್ನು ವಹಿಸಿಕೊಡಲಾಗಿ.... ಆತನು ತಾನು ಇಂತಹ ಕೆಲಸಗಳನ್ನು ಮಾಡಬೇಕಾದರೆ ಸಂಬಂಧಿಸಿದ ವ್ಯಕ್ತಿಯ ಕೂದಲು ಅಥವಾ ಅವನು ಬಳಸಿದ ಬಟ್ಟೆಗಳನ್ನು ತಂದುಕೊಡಬೇಕೆಂದು ಕೇಳಲಾಗಿ.... ದೇವೇಗೌಡರ ಆಜ್ಞಾಪಾಲಕರು ಇದರ ಅನ್ವೇಷಣೆಯಲ್ಲಿ ತೊಡಗಿರಬೇಕಾದರೆ ಅವರ ಅರಿವಿಗೆ ಬಂದಿದ್ದು ಏನು ಅಂದರೆ.... ಆ ಸಿದ್ಧರಾಮಯ್ಯನೆಂಬ ಸಿದ್ಧರಾಮಯ್ಯ ಎಷ್ಟೇ ಆಗಲಿ, ಗೌಡರ ಗರಡಿಯಲ್ಲೇ ಪಳಗಿಸಿದ್ದ ಆಸಾಮಿ ಅಲ್ಲವೆ, ಗೌಡರ ಈ ಹುನ್ನಾರವನ್ನು ಮುಂಚಿತವಾಗಿಯೇ ತಿಳಿದು ಏನು ಮಾಡಿದರಪ್ಪ ಅಂದರೆ.... ತನ್ನ ಕೂದಲು ಯಾರಿಗೂ ಸಿಗಬಾರದೆಂಬುದಾಗಿ ಯೋಚಿಸಿ, ತಮ್ಮ ಮನೆಗೇ ಹಜಾಮನನ್ನು ಕರೆಯಿಸಿ ತಲೆಕೂದಲು ಕತ್ತರಿಸಿಕೊಳ್ಳುತ್ತಿದ್ದರಂತೆ! ಅದೂ ಸಾಲದು ಎಂಬಂತೆ ಅಪ್ಪಿತಪ್ಪಿ ಕೂದಲು ಬೇರೆಯವರ ಕೈಗೆ ತಲುಪಬಹುದೆಂಬ ಆತಂಕದಿಂದ ತಾವು ಕೂದಲು ಕತ್ತರಿಸಿಕೊಂಡ ಸ್ಥಳದ ಮೇಲೆಲ್ಲ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುತ್ತಿದ್ದರಂತೆ! ನಾಯಿಂದನ ಮೈಕೈ ಬಟ್ಟೆಗಳಿಗೆ ಕೂದಲು ಅಂಟಿರಬಹುದು ಎಂಬ ಕಾರಣಕ್ಕೆ ಆತನಿಗೆ ಅಲ್ಲೇ ಸ್ನಾನ ಮಾಡಿಸಿ ಬಟ್ಟೆ ಉಡಿಸಿ ಕಳುಹಿಸುತ್ತಿದ್ದರಂತೆ! ಹೀಗಾಗಿ ಸಿದ್ಧರಾಮಯ್ಯನ ಕೂದಲು ದೇವೇಗೌಡರ ಕೈ ತಲುಪುವ ಎಲ್ಲಾ ದಾರಿಗಳನ್ನೂ ಮುಚ್ಚಲಾಗಿತ್ತಂತೆ.



ಸಿದ್ಧರಾಮಯ್ಯ ಕೂದಲು ಪುರಾಣ ಈ ರೀತಿಯಾಗಿ ಮುಕ್ತಾಯವಾಗುತ್ತಿರುವುದನ್ನು ಕಂಡು ಅವರು ಉಪಯೋಗಿಸುವ ಬಟ್ಟೆ ಹುಡುಕುವ ಕಾಯಕದಲ್ಲಿ ದೇವೇಗೌಡರ ಕಿಂಕರರು ಮಗ್ನರಾಗಿರಲಾಗಿ.... ಅಕಟಕಟಾ ಆ [illegible].... [illegible] ಕೈಗೂ ಸಿಗದಂತೆ ಹಳೆಯದಾದ ಅವುಗಳನ್ನೆಲ್ಲ ಅಗ್ನಿಗಾಹುತಿ ಮಾಡುತ್ತಿದ್ದರಂತೆ!

ಇಲ್ಲಿ ಓದುಗರಿಗೆ ಒಂದು ಸಂದೇಹ ಬರಬಹುದು. ಕೂದಲು, ಬಟ್ಟೆ ಸುಟ್ಟ ಬೂದಿಯಲ್ಲಿಯೂ ಅವುಗಳ ಅಂಶ ಇದ್ದೇ ಇರುವುದರಿಂದ ಅದನ್ನೇ ಮಲೆಯಾಳಿ ಮಂತ್ರವಾದಿ ಬಳಸಬಹುದಾಗಿತ್ತಲ್ಲ ಎಂಬುದಾಗಿ ನೀವು ಯೋಚಿಸಬಹುದು. ಇದನ್ನು ಒಳಹೊಕ್ಕು ಪರೀಕ್ಷಿಸಲಾಗಿ ಮಾನ್ಯರು ಇಂತಹ ಬೂದಿಯನ್ನು ಕಡಾಯಿಗಳಲ್ಲಿ ತುಂಬಿ ತಂದು ಪಶ್ಚಿಮವಾಹಿನಿಯಲ್ಲಿ ಕಾವೇರಿ ನೀರಿನೊಂದಿಗೆ ವಿಲೀನಗೊಳಿಸುತ್ತಿದ್ದ ಅಂಶ ತಿಳಿದುಬಂದಿತು. ಕಾವೇರಿ ನ್ಯಾಯಮಂಡಳಿ ಅಂತಿಮ ತೀರ್ಪಿನ ಕುರಿತು ಗೌಡರು ದಿವ್ಯ ಮೌನ ವಹಿಸಿರುವುದಕ್ಕೆ ಸಿದ್ಧರಾಮಯ್ಯ ಬೂದಿ ಪ್ರಕರಣವೂ ಕಾರಣ ಎಂದು ಅರ್ಥೈಸಲಾಗುತ್ತಿದೆ!

ಕೂದಲು, ಬಟ್ಟೆ ಅಥವಾ ಅವುಗಳನ್ನು ಸುಟ್ಟ ಬೂದಿ ಯಾವುದೂ ದೊರೆಯುವುದಿಲ್ಲ ಎಂಬುದು ಅರಿವಾಗಿ ಮಲೆಯಾಳಿ ಮಾಂತ್ರಿಕನಿಂದ ತಮಗೆ ಯಾವುದೇ ಉಪಯೋಗ ಇಲ್ಲ ಎಂಬುದು ತಿಳಿದಾಗ, ತಮ್ಮ ಜಾಯಮಾನದಂತೆ ಗೌಡರು ಆತನನ್ನು ಪಕ್ಕಕ್ಕೆ ಸರಿಸಿದರು.

ಈ ಯಾವ ಅವಶೇಷಗಳ ಹಂಗೂ ಇಲ್ಲದೆ ಶತ್ರುಗಳಿಗೆ ಕೇಡನ್ನು ಉಂಟುಮಾಡುವ ಒಬ್ಬನಿದ್ದಾನೆ. ಅವನೇ ಆ ದಯಾಮಯನಾದ ಪರಮಾತ್ಮ ಎಂದು ಬಗೆದು ಶತ್ರುವಿನಾಶಕ ಯಜ್ಞ ನೆರವೇರಿಸಲು ತಮಿಳುನಾಡಿಗೆ ದಯಮಾಡಿಸಿದರು.

ಯಾಕೋ ಏನೋ, ಗೌಡರ ವಂಶಸ್ಥರಿಗೆ ಕರ್ನಾಟಕದ ದೇವರುಗಳಿಗಿಂತ ತಮಿಳುನಾಡು ದೇವರುಗಳೇ ಪ್ರಿಯವಾಗಿ ಕಾಣುತ್ತಿವೆ. ಅಲ್ಲಿನ ಜನರಂತೆಯೇ ದೇವರುಗಳೂ ಇರಬಹುದೆಂದು ಕಾಣುತ್ತದೆ. ಎಷ್ಟೇ ಆಗಲಿ ತಮಿಳುನಾಡಿನ ಜನ ಗಂಡಾಗುಂಡಿ ಮಾಡಿ ಎಲ್ಲದರಲ್ಲೂ ಹೆಚ್ಚು ಪಾಲು ಹೊಡೆದುಕೊಳ್ಳುವ ಜನ ಅಲ್ಲವೆ, ದೇವರೂ ಹಂಗೇ ಮಾಡ್ತಾನೆ ಅಂತ ಹೋಗಿರಬಹುದು. ಇರಲಿ.

ಏನು ಮಾಡಿದರೇನು ದೇವೇಗೌಡರ ಸಂಕಷ್ಟದ ಸರಮಾಲೆ ನೀಗುವಂತೆಯೇ ಕಾಣುತ್ತಿಲ್ಲ. ಅತ್ತ ಗೌಡರು ದೇವರ ಕೈಲಿ ಶತ್ರುಗಳ ನಾಶ ಮಾಡಿಸಲು ಪ್ರಯತ್ನಿಸುತ್ತಿದ್ದರೆ ಇತ್ತ ಅವರ ನಿಜವಾದ ಮಗ ಎಚ್.ಡಿ. ಕುಮಾರಸ್ವಾಮಿ ಶತ್ರುಗಳ ಸೃಷ್ಟಿ ಮಾಡಿಕೊಳ್ಳುತ್ತಿದ್ದಾರೆ. ವಿಧಾನಮಂಡಳ ಅಧಿವೇಶನ ನಡೆಯುತ್ತಿದ್ದಾಗಲೇ ಅವರಿಗೆ ನೂರೆಂಟು ತಾಪತ್ರಯ ತಗುಲಿಕೊಳ್ಳುತ್ತವೆ. ಪಾಪ ಒಬ್ಬ ಹೆಣ್ಣುಮಗಳು ಹೋಗಿ ಹೋಗಿ ಮಂಗಳೂರಿನಲ್ಲಿ ಗರ್ಭಪಾತ ಮಾಡಿಸಿಕೊಂಡಳು. ಮುಖ್ಯಮಂತ್ರಿಗಳು ಎದ್ದೆನೋ ಬಿದ್ದೆನೋ ಅಂತ ಓಡಿಹೋಗಿ ಆಕೆಯ ಕ್ಷೇಮ ಸಮಾಚಾರ ವಿಚಾರಿಸಿದರು. ಗೌಡರ ವಂಶ ನಿರ್ವಂಶ ಮಾಡಬೇಕು ಅಂತ ಪಣ ತೊಟ್ಟ ಜನ ಅದಕ್ಕೆ ತರಹೇವಾರಿ ಕತೆ ಕಟ್ಟಿದರು. ಗರ್ಭಪಾತ ಆದ ಮಗು ಕುಮಾರಸ್ವಾಮಿಯವರದ್ದೇ ಇರಬಹುದು, ಆದರೆ ಮುಖ್ಯಮಂತ್ರಿ ಅನ್ನುವುದನ್ನು ಮರೆತುಹೋಗಿ ಆಕೆಯನ್ನು ನೋಡುವ ಮಾನವೀಯತೆ ಮೆರೆದರಲ್ಲಾ ಅದು ದೊಡ್ಡತನ ಅಲ್ಲವಾ... ಅಧಿವೇಶನ ಏನು ಬರುತ್ತವೆ ಹೋಗುತ್ತವೆ. ಆದರೆ ಆ ಹೆಣ್ಣುಮಗಳು ಮಗುವಿನ ತಂದೆಗೆ ಈಗ ಅಧಿವೇಶನ, ಅದನ್ನು ಮುಗಿಸಿ ಬರಲಿ ಅಂತ ಕಾಯುತ್ತಾ ಇರೋಕೆ ಆಗುತ್ತದೆಯೆ. ಇದನ್ನು ಅರ್ಥ ಮಾಡಿಕೊಳ್ಳದ ಮಾಧ್ಯಮದವರು ಯದ್ವಾತದ್ವಾ ಬರೆದು ಬಿಸಾಕಿದರು. ಗೌಡರ ಮನೆಯವರೇನೂ ಸುಮ್ಮನೆ ಕುಳಿತಿರಲಿಲ್ಲ ಅನ್ನಿ. 'ಎಲ್ಲಿ ಮುಖ್ಯಮಂತ್ರಿ' 'ಕುಮಾರಸ್ವಾಮಿ ಎಲ್ಲಿ' ಅಂತ ವಿಧಾನಸೌಧವಾದ ವಿಧಾನಸೌಧವೇ ಮೊಳಗುತ್ತಿದ್ದಾಗ ಅವರ ಮನೆಯವರಿಗೂ 'ಎಲ್ಲಿ ಹಾಳಾಗೋದ ಈ ಹಾಳಾದವನು' ಅನ್ನಿಸಿರಬಹುದು. ವಿಷಯ ಹಿಂಗಿಂಗೆ ಅಂತ ತಿಳಿದ ಮೇಲೆ 'ಅವರು ಒಬ್ಬರೇ ಹೋಗಿರಲಿಲ್ಲ, ಮನೆಯವರೆಲ್ಲ ದೇವರ ಸೇವೆಗೆ ಹೋಗಿದ್ದೆವು' ಎಂಬುದಾಗಿ ಸಾರಿದರೂ
ನಂಬುತ್ತಲೇ ಇಲ್ಲ. ದೇವತೆಯ ಸೇವೆಯಲ್ಲಿ ನಿ
ಭಾಗಿಯಾಗಿದ್ದಿರ ಅಂತ ಏನೇನೋ ಮಾತಾಡಿಕೊ
ಕಿಸಿಕಿಸಿ ಅನ್ನುತ್ತವೆ. ಹಾಳಾದ ಜನಕ್ಕೆ ತಿಳಿವಳಿಕೆ ನಿ
ತಪ್ಪಾಯಿತೋ ಏನೋ?

ಅನಿತ ಅವರಿಗಿಂತ ಅವರ ಮಾವನವರೇ ಇ
ಹೆಚ್ಚು ಹೆಚ್ಚು ತಲೆಗೆ ಹಚ್ಚಿಕೊಂಡರಂತೆ. ಇದು ಸಹ
ಅನ್ನಿ. ಗಂಡ ಕೆಟ್ಟರೆ ನನ್ನ ಸಂಸಾರ ಹಾಳಾತು

ಅಣಕ

■ ಎಚ್.ಎಲ್. ಕೇಶವಮೂ

ಹೆಂಡತಿ ಗೋಳಾಡಬಹುದು. ಆದರೆ ಮಗ ಕೆ
ಹಾಗಲ್ಲವಲ್ಲ. ಇಡೀ ರಾಜ್ಯಾನೇ ತನ್ನ ವಂಶದ
ಕೈಯ್ಯಿಂದ ಕಳಚಿಹೋಗುತ್ತಲ್ಲಾ ಅನ್ನೋ
ಗೌಡರಿಗೆ! ವಾಜಪೇಯಿ ತರಹ ಬುದ್ಧಿವಂತಿಕೆ
ಇಲ್ಲ. ಪ್ರಮೋದ್ ಮಹಾಜನ್ ಅವರ ಸು
ಇಂತಹದ್ದೇ ಹಲ್ಕಾ ಕೆಲಸ ಮಾಡಿ ಸಿಕ್ಕಿಕೊಂಡಾಗ
ಮುದುಕ 'ಯೌವ್ವನದಲ್ಲಿ ಇಂತಹದ್ದೆಲ್ಲ ಸ
ಅಂದಿದ್ದರಲ್ಲಾ ಹಾಗೂ ಹೇಳಲಿಲ್ಲ. ಆದರೂ ವ
ದಯೆ. ವಿಧಾನಮಂಡಳದ ಅಧಿವೇಶನ ನಡೆಯುತ್ತಿದ್ದ
ಈ ವಿಷಯ ಢಾಣಾಡಂಗೂರ ಆಗಿದ್ದರೂ ನ
ಸದಸ್ಯರು ಏನು ಸಭ್ಯತೆ ಮೆರೆದರು ಅಂತೀರಿ!
ವಿಷಯ ಕುರಿತಂತೆ ತುಟಿ ಎರಡು ಮಾಡಲಿಲ್ಲ! ಗೌ
ಯಜ್ಞ ಮಾಡಿದ್ದಕ್ಕೂ ಸಾರ್ಥಕ ಆಯಿತು!

ಕುಮಾರಸ್ವಾಮಿ ಪ್ರಣಯ ಪ್ರಸಂಗ ಅಂತ್ಯ ಕಂ
ಎಂದು ನೆಮ್ಮದಿಯ ಉಸಿರು ಎಳೆದುಕೊಳ್ಳುತ್ತಿ
ರೇವಣ್ಣ ರಾದ್ಧಾಂತ ಇಣುಕಿ ನೋಡುತ್ತಿದೆ. ಅದೇ
ಹಾಸನಕ್ಕೂ ಸರಕಾರ ವಿತರಿಸುವ ಧಾನ್ಯಕ್ಕೂ ಅನ
ಸಂಬಂಧ. ಹಲವಾರು ಯೋಜನೆಗಳ ಅಡಿ ಬಡವ
ನೀಡಲೆಂದು ಹಾಸನಕ್ಕೆ ಬರುವ ಧಾನ್ಯ ಅಲ್ಲಿ ಇರು
ಒಲ್ಲೆ ಅನ್ನುತ್ತವೆ. ಅಲ್ಲಿ ಬಡವರೇ ಇಲ್ಲವೋ ಏ
ಎಲ್ಲಿ ಶ್ರೀಮಂತರ ಮೂಲಕ ಮಾರುಕಟ್ಟೆ ತಲುಪು

ತಗಂಡು ನೋಡರು, ಬೇಜಾರಾದ್ರೆ, ಸಂಗೀತ ...ೋರು, ಚಿತ್ರ ಬರಿಯೋರು, ಕಾದಲಿಯೋರು, ...ವಾಗ್ಲ್ನ ಜೀವನ ಮಾಡಿದೋರು ಅಂದ್ರವುರು. ...ಮಾವ, ನಾವು ಕುಂತೆ ಕಾಲಾಕಿಬುಟ್ರೊ ಇನ್ನಮ್ಯಾಲಾರ ಏನಾರ ಮಾಡಬೇಕು" ಎಂದ ಉಗ್ರಿ.

"ತೇಜಸ್ವಿ ಬರದಿರೊ ಪುಸ್ತಕ ಓದಿದ್ರೆ ಏನಾರ ...ಡಬೇಕು ಅನ್ನಸ್ತದೆ ಕಣ್ರೊ."

"ಅಂಗರೆ ತಂದೋದ್ನ ನಾನು ಕೇಳ್ತಿನಿ."

"ಕಿರುಗೂರಿನ ಗಯ್ಯಾಳಿ ತಂದೊತ್ತಿನಿ ಇರಕ್ಕ."

"ಗಯ್ಯಾಳಿ ಕತೆಯ?"

"ಅವ್ರುರು ಗಯ್ಯಾಳಿಯಾಗಿದ್ಕು ಗಂಡಸರಿಂದ ಕಣಕ್ಕ. ...ದ್ಯರಡು ಮೂರು ಜನಕೆ ಮರದ ದಿಮ್ಮಿ ತಳ್ಳಕೋಗಿ ...ಟಿಡಕತ್ತದೆ. ಸ್ಪಂಟಿಡಕಂಡೋರು ಏನು ಮಾಡಕ್ಯಾ ...ದೇ?"

"ಏನು ಮಾಡಕ್ಯಾಗದಿಲ್ಲ ಸುಮ್ಮನೆ ಮನಿಕತ್ತರೆ."

"ಅಗೊ ಅಂಗೆ ಆಯ್ತು, ಈ ಗಂಡುಸ್ರು ಸುಮ್ಮನೆ ...ನಿಕಂಡ್ರು, ಹೆಂಗಸ್ರು ಬ್ಯಾರೆ ಯಾವನತ್ರಗೋ ...ೀದ್ರು. ಅದು ಗೊತ್ತಾಗಿ ಊರ ಮುಂದಕೆ ನ್ಯಾಯಕ್ಕೆ ...ದ್ರು."

"ಪಂಚಾತಿಗೆ ತಂದ್ರು ಅನ್ನು?"

"ಊ ಇದೇ ನಮ್ಮ ಕಾಳ ದ್ಯಡಪ್ಪ ಸೀರ ...ಪ್ಪನಂಥೋರು ಇಚಾರಣೆ ಮಾಡುವಾಗ, ಅಪರಾಧಿ ...ದಲ್ಲಿದ್ದೆಂಗುಸ್ರು ಪರಕೆ ತಗಂಡುಬಂದು, ಸ್ಪಂಟಿಡ ...ಕ ಗಂಡಸರಿಗೆ ಬಾರಿಸಿದ್ರು. ಇವುರು ವಾಟ ಕಿತ್ರು. ...ಗಯ್ಯಾಳಿ ಹೆಂಗಸರ ಗಲಾಟೆ ಶರಾಪು ನಿಲ್ಲಸೋ ...ಗೂ ನ್ಯಡದು, ಕಡಿಗೆ ರೈತ ಚಳವಳಿ ಹುಟ್ಟಿಗೆ ...ಕಾಯ್ತು ಅಂತ ಬರದವುರೆ."

"ಅಂಗರೆ ನಮ್ಮೂರ ಕತೆ ಕೇಳಿದಂಗದಲ್ಲ ಅದು?"

"ಅದೇ ನೋಡಕ್ಕ ತೇಜಸ್ವಿ ಗುಟ್ಟು."

"ಅಂತ ಮನ್ಸ ಇಷ್ಟು ಬೇಗ ತೀರೋದ್ನೇ?"

"ಯಲ್ಲ ಒಂದಿನ ಹೋಗದೆ ಬುಡ್ತೆ" ಎಂದ ಮಾವ.

-ಬಿ. ಚಂದ್ರೇಗೌಡ

...ೀಚಿನ ಮಾಯಾ ಬಜಾರ್ ಅಂದರೆ ಹಾಸನದ ...ೀಡೌನಿನ ಗೋಧಿ ಕೃಷ್ಣರಾಜಪೇಟೆಯಲ್ಲಿ ಕೊಳೀತಾ ...ದೆ. ಯಾರೋ ಮೂರ್ಖ ಪೊಲೀಸಿನವನು ಇದರ ...ದೆ ಯಾರು ಯಾರು ಇದಾರೆ ಅಂತ ತಿಳೀದೆ ...ಡು ಲಾರೀಲಿ ಬರುತ್ತಿದ್ದ ಈ ಧಾನ್ಯವನ್ನು ಹಿಡಿದು ...ಿದನಂತೆ. ಧಾನ್ಯ ತುಂಬಿದ್ದ ಚೀಲಗಳಿಗೆ ...ೀಲಿಯಾದ ಸೀಲೂ ಇದೆಯಂತೆ. ಆದರೂ ಏನು ...ತ್ಕಾರ ಅಂತೀರಿ, ಇದು ಯಾರಿಗೆ ಸೇರಿದ್ದು ...ವುದೇ ಗೊತ್ತಿಲ್ಲವಂತೆ! ಗೋಡೌನಿನಲ್ಲಿ ಎರಡು ... ಗೋಧಿ ಹಾಗೇ ಇದೆಯಂತೆ, ಅಲ್ಲಿಂದ ಹೊರಕ್ಕೆ ...ೀಗೇ ಇಲ್ಲವಂತೆ! ಹಾಸನದ ರಾಜಕಾರಣಿಗಳು, ...ಕಾರಿಗಳು ಇಂತಹ ಪವಾಡ ಮಾಡುವುದನ್ನು ...ವಾಗ ಕಲಿತರು ಅಂತ. ಗೌಡರಿಗೆ ಒಂದು ಆತಂಕ ...ರರೆ ರೇವಣ್ಣ ಅನ್ನುವ ಮೊದ್ದು ಮಣಿಯನ್ನು ...ಖ್ಯಮಂತ್ರಿಗಾದಿ ಮೇಲೆ ಕೂರಿಸಿ ಕಣ್ತುಂಬ ...ಡಬೇಕು ಅನ್ನೋ ಆಸೆ ಇಟ್ಟುಕೊಂಡಿರುವಾಗ ... ಇಂತಹ ಚಿಲ್ಲರೆ ವ್ಯವಹಾರದಲ್ಲಿ ಕೈಸುಟ್ಟುಕೊಂಡನಲ್ಲ ...ನ್ನೀದು. ಆದರೂ ಒಂದು ಸಮಾಧಾನ, ತಮ್ಮ ...ನ ಸರ್ಕಾರವೇ ಇರುವುದರಿಂದ ಈ ಪವಾಡ ...ಲು ಮಾಡಲು ಯಾರೂ ಮುಂದೆ ಬರುವುದಿಲ್ಲ ...ನ್ನೀದು!

ಈ ನಡುವೆ ಗೌಡರಿಗೆ ಇನ್ನೊಂದು ಧರ್ಮಸಂಕಟ. ...ವುದಾದರೂ ನೆಪದಿಂದ ಚುನಾವಣೆಗೆ ಹೋಗೋಣ ...ರೆ ಈ ಹಾಳಾದ ಯಡಿಯೂರಪ್ಪ ಚುನಾವಣೆ ...ತ್‌ನೇ ಇಟ್ಟಿದಾನೆ. ಹಣ ಹೇಗೆ ಬರುತ್ತೆ ಅಂತ ...ರಿಸದೆ ಹೇಗೆ ಹೋಗುತ್ತೆ ಅನ್ನೋದನ್ನ ತೋರಿಸುತ್ತಾ ...ವ್ನೆ. ದುರ್ಬೀನು ಹಾಕಿ ಹುಡುಕಿ ಹುಡುಕಿ ...ಹೆಸರಿಲ್ಲದಂತಹ ಧಾರ್ಮಿಕ ಸಂಸ್ಥೆಗಳಿಗೂ ಹಣಾನ ...ಳಿಕಾಳು ಹಂಚಿದಂಗೆ ಹಂಚುತ್ತಾ ಕುಂತವ್ನೆ. ಇದು ... ಅನ್ನೋಹಂಗಿಲ್ಲ, ಆ ಸಂಸ್ಥೆಗಳ ಭಕ್ತರೆಲ್ಲರೂ ...ರು ಬೀಳ್ತಾರೆ. ಹಾಳಾಗಿ ಹೋಗಲಿ ಅಧಿಕಾರ ...ಕೊಡೋಣ ಅಂದರೆ ಈ ಕಾಂಜಿಪಿಂಜಿ ...ಳಿಗೆಲ್ಲ ಹಣ ಒದಗಿಸುವ ಜವಾಬ್ದಾರಿ ತಮ್ಮ ... ಮೇಲೆ ಬೀಳುತ್ತೆ, ಥುತ್ ಇದ್ಯಾವುದರ ...ಸಹವಾಸವೂ ಬೇಡ ಅಂತ ಇರೋಣ ಅಂದರೆ ಇನ್ನು ...ಬೇಕಾದ ಜವಾಬ್ದಾರಿ ಬಹಳ ಇದೆ.... ಮಗನಿಗೆ ...ಿಸಿ ಚೇರ್ಮನ್ ಮಾಡಬೇಕು; ಮುಖ್ಯಮಂತ್ರಿ ...ಬೇಕು; ಮೊಮ್ಮಕ್ಕಳ ರಾಜಕೀಯ ಏಳಿ... ...ೀಕು.... ಹೀಗೆ ನೂರಾರಿವೆ!

...ಪ, ಪಾಪ ಕಷ್ಟ ದೇವೇಗೌಡರಿಗೆ!

ಎಚ್.ಎಲ್. ಕೇಶವಮೂರ್ತಿ

ಮೈಸೂರಲ್ಲಿ ಎರಡು ದಿನ

ಮೈಸೂರಿನಲ್ಲಿ 'ಲಂಕೇಶ್ 60'ಎಂಬ 'ಸಮಕಾಲೀನ ಸಾಹಿತ್ಯ ವೇದಿಕೆ'ಯ ಸಮಾರಂಭದಲ್ಲಿ ಭಾಗವಹಿಸಿದ್ದೆ. ಇದಾದದ್ದು ಭಾನುವಾರ. ಶನಿವಾರವೇ ಮೈಸೂರಿಗೆ ಹೋಗಿದ್ದೆ. ನಿಜಕ್ಕೂ ಹೋಗುವಂತಿರಲಿಲ್ಲ; ಬೆಂಗಳೂರಿನ ಕಿರಿಕಿರಿಗಳು, ಹುಟ್ಟುಹಬ್ಬದ ಸಮಾರಂಭಗಳು, ಹಲವು ಬಗೆಯ ನಿರಾಶೆಗಳು, ನೋವುಗಳು, ಸಿಟ್ಟು ಬರಿಸುವಂಥ ಪ್ರಸಂಗಗಳು- ಇವೆಲ್ಲದರಿಂದಾಗಿ ವ್ಯಗ್ರಗೊಂಡಿದ್ದೆ. ಎಲ್ಲೂ ಹೋಗುವ ಸ್ಥಿತಿಯಲ್ಲಿರಲಿಲ್ಲ. "ನಾನು ಭಾನುವಾರ ಬೆಳಗ್ಗೆ ಮಾತ್ರ ಬರಲು ಸಾಧ್ಯ. ಶನಿವಾರ ಬಂದು ಅಲ್ಲಿಯ ಕವಿಗೋಷ್ಠಿಯಲ್ಲಿ ಪಾಲುಗೊಳ್ಳುವುದು ಕಷ್ಟ" ಎಂದು ಹೇಳಿಕಳುಹಿಸಿದ್ದೆ. ಆದರೆ 'ವೇದಿಕೆ'ಯ ಗೆಳೆಯರಿಂದ ಫೋನ್ ಬಂತು. ಶನಿವಾರವೇ ಬರಲೆಬೇಕೆಂದು ಒತ್ತಾಯ ಮಾಡಿದರು. ನಿರ್ವಾಹವಿಲ್ಲದೆ ಹೊರಟೆ. ಮಾರ್ಚ್ ತಿಂಗಳ ಬಿಸಿಲು ಜೋರಾಗಿತ್ತು. ಕಾರಿನಲ್ಲಿದ್ದವರು ಡಾ. ಶ್ರೀನಿವಾಸಗೌಡರು, ಅರಸು ಮತ್ತು ನಾನು. ಒಂದು ಚಿಕ್ಕ ಪದ್ಯ ತೆಗೆದುಕೊಂಡು ಹೋಗಿ ಅಲ್ಲಿ ಓದುವುದೆಂದು ಮನಸ್ಸು ಮಾಡಿದ್ದೆ. ಬರೆದಿರಲಿಲ್ಲ. ಮೈಸೂರಲ್ಲಿ ಹತ್ತು ನಿಮಿಷ ಬಿಡುವು ಮಾಡಿಕೊಂಡು ಬರೆದರಾಯಿತು ಎಂದು ಕಾರಿನಲ್ಲಿ ಸಾಗುತ್ತಲೇ ಇದ್ದೆ. ಮೈಸೂರು ಹತ್ತಿರವಾದಂತೆ ಆತಂಕ ಕಾಡತೊಡಗಿತು. ಹಳೇ ಪದ್ಯ ಓದಿದರಾಯಿತು ಎಂದುಕೊಂಡೆ. ಆದರೆ ಅದು ಸೋಲು. ಮಾಡಬೇಕೆಂದದ್ದು ಮಾಡದಿದ್ದರೆ ಎಲ್ಲೋ ಅಡಿತಪ್ಪಿದಂತೆ ಅಳುಕು. ಆದ್ದರಿಂದ ಮನಸ್ಸಿನಲ್ಲಿದ್ದ ಸಾಲುಗಳನ್ನು ಹಾಳೆಗೆ ಇಳಿಸಿದೆ. ಪದ್ಯ ಹೀಗಿತ್ತು:

ನನಗೆ ಅರವತ್ತು ತುಂಬಿದ ಬೆಳಗ್ಗೆ

ಕಣ್ಣುಜ್ಜಿಕೊಂಡು ಎದ್ದು ಭಯಗೊಂಡೆ. ಮತ್ತೆ ಮಲಗಿದೆ.

ನಾಲ್ಕು ಹೆಜ್ಜೆ ನಡೆದೆ. ತೊಡೆ ನಡುಗುತ್ತಿವೆ. ಎದೆ ಭಾರವಾಗಿದೆ.

ಕೆನ್ನೆ ಸಣ್ಣಗೆ ಕಂಪಿಸುತ್ತಿವೆ.

ಇದ್ದಕ್ಕಿದ್ದಂತೆ ಚಂದ್ರಿ ಬಂದಳು
ಎಲ್ಲ ಬಿಟ್ಟು ಈಕೆ!
ಸ್ತನ ಎಲ್ಲ ಸ್ಥಾನಮಾನ ಮೀರಿಸುವಷ್ಟು ದೊಡ್ಡವು.
ಎಂದುಕೊಂಡು ಗೊಂದಲ
ಆಕೆ ಹಠಾತ್ತನೆ ವಿಧವೆಯಾಗಿದ್ದಳು.

ಚಂದ್ರಿ ಒಮ್ಮೆ ನನ್ನ ಗಲ್ಲವ ಮುಟ್ಟಿ
ಸುಮ್ಮನೇ ನಕ್ಕಳು. ವಿಧವೆ ಚಂದ್ರಿ.
ನಾನು ಮುಂದುವರಿದು ಭುಜ ನೇವರಿಸಿದರೆ
ಸುಮ್ಮನೇ ನಿಂತಿದ್ದಳು.
ಹಿಂಜರಿದೆ. ಮುಂದುವರಿಯಲು ಹಿಂಜರಿದೆ.
ಆಮೇಲೆ ಎಲ್ಲೋ ಸಿಕ್ಕಾಗಲೆಲ್ಲ
ಹೆಸರು ಹಿಡಿದು ಕರೆದು ನಿಲ್ಲಿಸಿ
ಕೆನ್ನೆ ಕುತ್ತಿಗೆ ಹೊಕ್ಕುಳವ ಮುಟ್ಟಿ
ವಿಷಾದದಿಂದ ನಗುತ್ತಿದ್ದಳು.

ನನ್ನ ಒಂದು ಕತೆಯಾಗಬೇಕಾಗಿದ್ದ ಚಂದ್ರಿ
ನನ್ನ ಮನದ ಒಂದು ಗೋಡೆಯ ಮೇಲೆ ಗಾಂಧಿ
ಇನ್ನೊಂದು ಗೋಡೆಯ ಮೇಲೆ ಬುದ್ಧ
ಇವರು ನಗುತ್ತಿದ್ದದ್ದ ಗಮನಿಸದೆ
ಅರವತ್ತು ವರ್ಷಗಳ ಮುಟ್ಟಿ ಮುಗುಳ್ನಗುತ್ತಿದ್ದಳು.

ವಿಚಿತ್ರ ಏನೆಂದರೆ,
ಮನದ ನೆಲಗಟ್ಟು ಒಡೆದ ಮಾವಿನಮರ.
ಅದರಲ್ಲಿ ಕುಳಿತ ಒಂದು ಹಕ್ಕಿ
ಬುದ್ಧ ಅಥವಾ ಗಾಂಧಿಯ ಲೆಕ್ಕಿಸದೆ
ಚಂದ್ರೀ ಚಂದ್ರೀ ಚಂದ್ರೀ ಅನ್ನುತ್ತಿತ್ತು.


ಹುಚ್ಚು ಹಕ್ಕಿ.
ಈ ಎಲ್ಲದರ ಗದ್ದಲಕ್ಕೆ ನನಗೆ
ಎಚ್ಚರವಾದಾಗ ಕಣ್ಣುಜ್ಜಿಕೊಂಡು ನೋಡಿದೆ.

ಅರವತ್ತು ಆಗಿ ಮೊದಲನೆ ದಿನ.
ಸಂತೋಷ ಮತ್ತು ವಿಷಾದ ಬೆರೆತು
ನನ್ನನ್ನು ನಡುಗಿಸಿದ ದಿನ.

ಈ ಪದ್ಯವನ್ನು ತಡವರಿಸುತ್ತಾ ಓದಿದೆ. ಇದನ್ನು ತಿದ್ದಿ ಬರೆಯಬೇಕಾಗಿದೆ. ಆದರೆ ತಿದ್ದುವುದು ಕಷ್ಟ. ಯಾಕೆಂದರೆ ಈಗಾಗಲೇ ಕನಸು ಕರಗಿಹೋಗಿದೆ. ಚಂದ್ರಿಯ ಮತ್ತು ಹಕ್ಕಿಯ ನೆನಪು ಅಸ್ಪಷ್ಟವಾಗಿದೆ.


ಅವತ್ತು ಶನಿವಾರ. ಎಲ್ಲ ಮುಗಿದಾಗ ರಾತ್ರಿ ತೇಜಸ್ವಿ, ಅನಂತಮೂರ್ತಿ, ರಾಮದಾಸ್-ಎಲ್ಲರೂ ಇದ್ದರು. ಡಿ.ಆರ್. ನಾಗರಾಜ್ ಬಂದಿದ್ದ. ಕವಿಗೋಷ್ಠಿಯಲ್ಲಿ ಪ್ರತಿಭಾ ನನ್ನನ್ನು ಕುರಿತು ಒಂದು ಪದ್ಯ ಓದಿದ್ದಳು. ತಮಾಷೆಯ ಪದ್ಯ ಚೆನ್ನಾಗಿದೆ ಎಂದು ನನಗನ್ನಿಸಿತ್ತು, ಕೆಲವರು ಹಾಗೆಂದರು. ಕೆಲವರು ಚೆನ್ನಾಗಿಲ್ಲ ಎಂದು ಟೀಕಿಸಿದರು. ಅಷ್ಟರಲ್ಲಿ ಅನಂತಮೂರ್ತಿ ಮತ್ತು ತೇಜಸ್ವಿ ಅಂತಾರಾಷ್ಟ್ರೀಯತೆ, ಪರಿಸರ, ಸ್ಥಳೀಯತೆ ಕುರಿತು ಮಾತಾಡತೊಡಗಿದ್ದರು. ಅದರಲ್ಲಿ ಬಹುಪಾಲು ಯಾರಿಗೂ ಅರ್ಥವಾಗುವಂತಿರಲಿಲ್ಲ.

ಮರೆಯುವ ಮುನ್ನ



ಪಿ. ಲಂಕೇಶ್

ಮರುದಿನ ನಾನು ಮಾತಾಡುವುದಿತ್ತು. ತೇಜಸ್ವಿ, ಅನಂತಮೂರ್ತಿ ಮುಂತಾದವರೆಲ್ಲ ಮಾತಾಡುವುದರಿಂದ ನಾನು ಏನು ಹೇಳಬಹುದು ಎಂದು ಚಿಂತಿಸುತ್ತಾ ಕೂತೆ. ಮಲಗಿದರೆ ರಾತ್ರಿ ಬಹುಹೊತ್ತು ನಿದ್ದೆ ಬರಲಿಲ್ಲ. ಅಪರಿಚಿತ ಸ್ಥಳ. ಸೆಖೆಯನ್ನು ಕಮ್ಮಿ ಮಾಡಲು ಬೋರೋ ಎಂದು ತಿರುಗುವ ಫ್ಯಾನ್‌ಗಳು. ಓದಿದರೆ ಏನೂ ಮನಸ್ಸಿಗೆ ತಾಗುತ್ತಿಲ್ಲ. ಚಿಂತಿಸಿದರೆ ಮನಸ್ಸು ಎಲ್ಲೆಲ್ಲೋ ಹರಿದುಹೋಗುತ್ತಿದೆ. ಜನರ ಪ್ರೀತಿ ಮತ್ತು ವಿಶ್ವಾಸವನ್ನು ಕಂಡು ನನಗೆ ಮಂಕು ಕವಿಯತೊಡಗಿತ್ತು.



ಅನಂತಮೂರ್ತಿಯವರ ಒಳ್ಳೆಯ ಮಾತು ಮತ್ತು ತೇಜಸ್ವಿಯವರ ಬೆಚ್ಚನೆಯ ತಮಾಷೆ ಕೂಡ ನನಗೆ ಧೈರ್ಯ ತರುವುದು ಸಾಧ್ಯವಿರಲಿಲ್ಲ. ಕೆ.ರಾಮದಾಸ್, ಎಚ್.ಎಲ್. ಕೇಶವಮೂರ್ತಿ, ಡಾ. ಮಹಾದೇವ್, ದೇವನೂರು, ಗೋವಿಂದಯ್ಯ ಮುಂತಾದವರು ಈ 60ನೇ ಹುಟ್ಟುಹಬ್ಬ ಯಶಸ್ವಿ ಮಾಡಲು ದುಡಿದಿದ್ದರು. ನಾವೆಲ್ಲರೂ ಯೋಚಿಸುವುದು ಒಂದೇ ರೀತಿಯಲ್ಲಿ. ಯಾವನೊಬ್ಬನ ಹುಟ್ಟುಹಬ್ಬಕ್ಕಿಂತ ಮೂರು ದಶಕದಿಂದ ಮಾಡಿದ್ದು, ಚಿಂತಿಸಿದ್ದು, ಸಂವೇದಿಸಿದ್ದು ಮುಖ್ಯ. ಅದರ ನೆನಪಾಗುವಂತೆ ಮಾಡಬೇಕು. ಸರಿ, ಭಾನುವಾರ ಇನ್ನೂ ಅನೇಕ ಸಮಾರಂಭಗಳು. ಬಿ.ವಿ. ವೀರಭದ್ರಪ್ಪ, ಎ.ಕೆ. ಸುಬ್ಬಯ್ಯ ಮತ್ತು ಸಿದ್ಧಲಿಂಗಯ್ಯ ಚೆನ್ನಾಗಿ ಮಾತಾಡಿದರು; ಎಳೆಯ ಮಿತ್ರ ಶಶಿಧರ ಭಟ್ ಕೂಡ. ಅವರು ನನ್ನಲ್ಲಿ ಮತ್ತು 'ಪತ್ರಿಕೆ'ಯಲ್ಲಿ ಕಂಡಿದ್ದೇನೆಂದು ಹೇಳಿದ ಅಪರೂಪದ ಸಂಗತಿಗಳ ಬಗ್ಗೆ ನನಗೇ ಅಚ್ಚರಿ ಎನ್ನಿಸಿತು. ನಾನು ವೈಯಕ್ತಿಕವಾಗಿ ಎಲ್ಲವನ್ನೂ ಆನಂದದಿಂದ 'fun' ಎಂಬಂತೆ ನಿರ್ವಹಿಸಿ ಈಗ ಅರವತ್ತು ತಲುಪಿದ್ದೇನೆ!

ಸಂಜೆ ತೇಜಸ್ವಿ, ಅನಂತಮೂರ್ತಿ, ರಮೇಶ್‌ಕುಮಾರ್ ಮತ್ತು ನಮ್ಮೆಲ್ಲರ ಅಭಿಮಾನದ ವ್ಯಕ್ತಿ ಎನ್.ಡಿ. ವೆಂಕಟೇಶ್ ಭಾಷಣ. ನನಗೆ ಅಷ್ಟರಲ್ಲೇ ಆರೋಗ್ಯ ಕೆಡತೊಡಗಿತ್ತು. ಚಿಂತನೆ ಜಾಸ್ತಿಯಾದಂತೆ ಆತಂಕ ನನ್ನನ್ನು ತುಂಬಿಕೊಳ್ಳತೊಡಗಿತ್ತು. ವಿಡಿಯೋದವರ ಲೈಟ್‌ಗಳು, ಕಣ್ಣು ಭಗಗುಟ್ಟತೊಡಗಿತ್ತು. ಯಾವುದನ್ನು ಹೇಳಲಿ, ಯಾವುದನ್ನು ಬಿಡಲಿ. ಎಲ್ಲ ಗೊಂದಲಗೊಂಡಿದ್ದಾಗ ಅನಂತಮೂರ್ತಿ, ತೇಜಸ್ವಿ ತಮ್ಮ ಮಾತು ಮುಗಿಸಿದ್ದರು. ಮೈಕ್ ಕೈಕೊಡತೊಡಗಿತ್ತು. ಅದೊಂದು ದುಃಸ್ವಪ್ನದಂತೆ ಆಗದಿರಲಿ ಎಂದು ಆಶಿಸುತ್ತ ಮಾತಾಡತೊಡಗಿದೆ. ಜನ ಸುಮ್ಮನೇ ಕೂತಿದ್ದಾರೆ. ಮಾತು ತಲುಪುತ್ತಿವೆಯೋ ಗೊತ್ತಾಗುತ್ತಿಲ್ಲ, ತಲೆ ಸಿಡಿಯುವಂತಾಗಿದೆ.....

ಎಲ್ಲ ಮುಗಿದಾಗ ಏಳುಗಂಟೆ. ಮೂರೂವರೆ ಗಂಟೆ ಸಾಗಿದ ಭಾಷಣಗಳು. 'ರಾತ್ರಿ ಇದ್ದು ಹೋಗಿ' ಅಂದರು. ರಾಮದಾಸ್ ಒತ್ತಾಯಿಸಿದರು. ಇನ್ನೂ ಕೆಲವರು ಗೆಳೆಯರು 'ರಾತ್ರಿ ಪ್ರಯಾಣ ಬೇಡ' ಎಂದು ಹೇಳಿದರು ಆದರೆ ನನಗೆ ಸ್ವಚ್ಛ ಗಾಳಿ, ಏಕಾಂಗಿತನ ಬೇಕಾಗಿತ್ತು. ಹೊರಟೆ.

-ಮಾರ್ಚ್ 22, 95

ತೇಜಸ್ವಿಯವರ ಕಾದಂಬರಿ

ಗೆ ಲಂಕೇಶ್,

ತಲೆ ಎಲ್ಲ ಖಾಲಿಯಾದಂತಾಗಿ ಏನು ಬರೆಯುವುದು ತೋಚದೆ ತುಂಬಾ ತೊಂದರೆಗೆ ಸಿಕ್ಕಿಕೊಂಡೆ. ಬರೆಯುವ ಉತ್ಸಾಹ ಸಂಪೂರ್ಣ ಇಂಗಿಹೋಗಿತ್ತು.

ಈಗ ಒಂದು ಚಿಕ್ಕ ಕಾದಂಬರಿ ಬರೆಯುತ್ತಿದ್ದೇನೆ. ನಾಳೆ ನಾಳಿದ್ದರಲ್ಲಿ ಅದನ್ನು ಮತ್ತೆ ಕಾಪಿ ಮಾಡಿ ಕೆಲವು ಅಧ್ಯಾಯ ಕಳಿಸುತ್ತೇನೆ. ಹೇಗಿದೆ ನೋಡಿ.

ಮತ್ತೇನೂ ವಿಶೇಷವಿಲ್ಲ, ತೋಟ, ಏಲಕ್ಕಿ ಕೊಯ್ಲು ಇವೇ ನಡೆಯುತ್ತಾ ಇದೆ.

ಅಡಿಗರು, ರಾಮಮೂರ್ತಿ ಎಲ್ಲಾ ನಿರ್ಗಮಿಸುತ್ತಾ ಇರುವುದನ್ನು ನೋಡಿದರೆ ನಾವೆಲ್ಲ ಬೇಗ ನಾವು ಯೋಚಿಸಿಕೊಂಡಿರುವುದನ್ನೆಲ್ಲಾ ಮಾಡಿ ಮುಗಿಸುವುದು ಒಳ್ಳೆಯದೆಂದು ಕಾಣುತ್ತೆ. ನನಗೆ ಇಲ್ಲಿಯವರೆಗೂ ಇದು ಹೊಳೆದೇ ಇರಲಿಲ್ಲ.

ನಿಮ್ಮ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಮೂಡಿಗೆರೆ

-ನವೆಂಬರ್ 25, 1992

ಸ್ವ-ಮನಸ್ತಾಪ

ಕೇದಿಗೆ ತೆನೆಗಳ ಚಿಕ್ಕ ಹೊರೆಯನ್ನೇ ತಂದರು. ಈ ವಿಶ್ವನಾಥ ಹಳ್ಳಿಯ ಜನರ ಪ್ರೀತಿಯನ್ನು ಹೇಗೆ ವರ್ಣಿಸುವುದು. ಎಲ್ಲ ನಾಯಕರ(ಬೇಡರ) ಕುಟುಂಬಗಳು; ಒಂದು ಲಿಂಗಾಯತರ ಮನೆ. ಕರುಣೆ ತೋರಲು, ತಾತ್ಸಾರ ತೋರಲು ಕಾರಣವೇ ಇಲ್ಲದ ನೆಮ್ಮದಿಯ ಹಳ್ಳಿ. ಅಲ್ಲಿ ಕೂತು ನನ್ನತ್ತ ಬರುತ್ತಿದ್ದ ಕೇದಿಗೆ ತೆನೆಗಳನ್ನು ನೋಡಿದೆ. ನಾನು ಕೇದಿಗೆ ಬಗ್ಗೆ ಬರೆದದ್ದನ್ನು ಓದಿದ ಅವರು ನನ್ನ ಸಂತೋಷಕ್ಕಾಗಿ ತಂದಿದ್ದರು. "ಛೆ! ಅದನ್ನು ಹೆಚ್ಚು ಮೂಸಿದರೆ ತಲೆನೋವು ಬರುತ್ತೆ ಕಣ್ರೀ!" ಎಂದು ಕಠೋರವಾಗಿ ಹೇಳಿದ ತೇಜಸ್ವಿಯವರ ಮಾತಿಗೆ ಹಿಂಜರಿದರು. ಕೇದಿಗೆಯ ಚಿಕ್ಕ ಮೆದೆ ಮಾಯವಾಗಿ ಒಂದು ತೆನೆ ಮಾತ್ರ ಉಳಿಯಿತು. ನನಗೆ ತಲೆನೋವು ಬರೋಲ್ಲ, ನಾನು ತಗೊಂಡು ಹೋಗ್ತೇನೆ ಅಂದೆ. ಇವತ್ತಿಗೂ ನನ್ನ ಕಾರು ಕೇದಿಗೆಯ ಸುಗಂಧದಿಂದ ಮುಕ್ತವಾಗಿಲ್ಲ.

ತೇಜಸ್ವಿ ನಿತ್ಯದಂತೆ ದಾರಿಯಲ್ಲಿ ಬೀಡ, ಅಡಿಕೆ ಕೊಳ್ಳಲು ಹೋಗಿ ನಗುತ್ತ ಬಂದರು, ಹೇಳಿದರು:

ಅಂಗಡಿಯವನು ಕೇಳಿದ, "ಅದೇಕೋ ನಿಮಗೂ ಲಂಕೇಶ್‌ಗೂ ಈಚೆಗೆ ಹೆಚ್ಚು ಮನಸ್ತಾಪ ಬೆಳೆದಿದೆಯಂತೆ ಹೌದಾ ಸಾರ್?"

"ನಿಮಗೆ ಹೇಗೆ ಗೊತ್ತಾಯಿತು?" ಅಂದೆ.

"ಗೊತ್ತಾಗುತ್ತೆ ಸಾರ್. ಮುಚ್ಚಿಡೋಕಾಗುತ್ತ?" ಅಂದ.

"ಸರಿ ಈಗೇನು ಮಾಡೋದು?"

"ಹಾಗೆಲ್ಲ ಜಗಳ ಮನಸ್ತಾಪಕ್ಕೆ ಹೋಗಬಾರದು ಸಾರ್. ಒಗ್ಗಟ್ಟಿನಿಂದ ಕೆಲಸ ಮಾಡಬೇಕು..." ಅಂದ.

"ಅಲ್ರೀ, ನನ್ನ ಬಗ್ಗೇನೇ ನನಗೆ ಮನಸ್ತಾಪ ಇದೆ. ಇನ್ನು ಲಂಕೇಶ್ ಬಗ್ಗೆ ಮನಸ್ತಾಪವಿದ್ದರೆ ಆಶ್ಚರ್ಯವೇನು ಅಲ್ವ?" ಅಂದು ಬಂದೆ.

ಇಬ್ಬರೂ ನಗತೊಡಗಿದೆವು.

****

"ಅಲ್ರೀ ಲಂಕೇಶ್, ನನಗೆ ಸ್ವಲ್ಪ ಹಿಂಜರಿಕೆ ಯಾಕೆ ಗೊತ್ತೆ, ರಾಜಕೀಯ ಮಾಡಿಬಿಡಬಹುದು. ನನಗೆ ನೂರಾರು ಜನ ಹುಡುಗರು, ಉತ್ಸಾಹಿಗಳು ಗೊತ್ತು. ರೈತರ ಹುಡುಗರಂತೂ ತುಂಬ ಉತ್ಸಾಹಿಗಳು. ಕರೆದರೆ ಬಂದುಬಿಡ್ತಾರೆ. ಆದರೆ ಮಾರನೆ ದಿನದಿಂದಲೆ, 'ಸಾರ್! ರೈತ ಸಂಘದಲ್ಲಿ ರ್‍ಯಾಲಿನಾದ್ರೂ ಇರ್ತಿತ್ತು, ಇಲ್ಲಿ ಅದೂ ಇಲ್ಲ!' ಅಂತ ಕೂತುಬಿಡ್ತಾರೆ...." ಅಂದರು ತೇಜಸ್ವಿ.

ಮುಂದುವರಿಸಿ, "ನಾವು ಪ್ರಗತಿರಂಗದ ಮೂಲಕ ಗೆದ್ದೇ ಬಿಟ್ವಿ ಅನ್ನಿ, ಅದರಿಂದ ಪತ್ರಿಕೆಗೆ ತೊಂದರೆ, ಸೋತೇಬಿಟ್ರೆ ಅದರಿಂದಲೂ ತೊಂದರೆ..."

"ಹಾಗೇನಿಲ್ಲ, ಎಲ್ಲ ತೊಂದರೆಗಳ ಬಗ್ಗೆ ನಾನು ಯೋಚಿಸಿದ್ದೇನೆ. ಇದು ಪ್ರಯೋಗ. ನಾನಾಗಲಿ, ನೀವಾಗಲಿ, ಪತ್ರಿಕೆಯಾಗಲಿ ಅಮರವಲ್ಲ. ನಮ್ಮ ರಾಜಕೀಯ ಪ್ರಯತ್ನ ಕೂಡ ಪತ್ರಿಕೆಗೆ ಬೇಕು. ನಾವು ಗೆದ್ದರೂ ಸೋತರೂ ಇದನ್ನು ಉಳಿಸೋದು ಜನಕ್ಕೆ ಮತ್ತು ನನಗೆ ಗೊತ್ತು..." ಅಂದೆ.

-ಜುಲೈ 10, 1988

ಹೆಣ್ಣಿಗೆ ಈಜು ಕಲಿಸಲು ಗಂಡು ಕೋಚುಗಳು ಇದ್ದಿದ್ದೇ ಆದರೆ...?!

ಕೆ. ಶ್ರೀನಿವಾಸ, ಮಂಡ್ಯ
ಮದುವೆ ಸ್ವರ್ಗದಲ್ಲಿ ನಡೆಯುತ್ತಂತೆ, ಹಾಗಾದರೆ ಮಧುಚಂದ್ರ?
◆ ಅದಕ್ಕೆ ಭೂಮಿ ಮೇಲಿನ ಮಧುಮಂಚವೇ ಬೇಕು.

ಟಿ.ಯು. ಕುಮಾರ, ರಾಮದುರ್ಗ
ಪ್ರೇಮ್ ಕಾರ್ ಮೆಕ್ಯಾನಿಕ್ ತರಹ ಕಾಣಿಸುತ್ತಾನೆಂಬುದು ನನ್ನ ಗೆಳತಿಯ ಅನಿಸಿಕೆ?
◆ ರಕ್ಷಿತಾಳ ಬಾಡಿಗಾರ್ಡ್ ತರಹ ವರ್ತಿಸುತ್ತಿದ್ದಾನೆ ಎಂಬುದು ನಮ್ಮ ಸಿನಿಸಿಕೆ!

ಅಕ್ಷಯ್‌ಕುಮಾರ್, ಗುಲ್ಬರ್ಗಾ
ಹುಡುಗರಿಗೆ ಕಬಡ್ಡಿ ಇಷ್ಟ... ಹುಡ್ಗೀರಿಗೆ?
◆ ಕಾಮದ ಕಬಡ್ಡಿ?

ಗುರುಸ್ವಾಮಿ, ಸುರಪೂರ
ಮೈ-ಕೊರೆಯುವ ಚಳಿಯಲ್ಲೂ ಹುಡುಗಿಯರನ್ನು ಕಂಡಾಗ ಬಿಸಿಯಾಗುವುದೇಕೆ?
◆ ಯಾಕೆ ಅಂತ ಗೊತ್ತಿರೋದ್ರಿಂದಾನೆ ಹೀರೋಯಿನ್‌ಗಳಿಗೆ ಮಳೆಯಲ್ಲಿ ಒದ್ದೆ ಮಾಡಿ ತೋರಿಸೋದು.

ಎಸ್. ಶಶಿಧರ್, ದಾವಣಗೆರೆ
ಕುಮಾರಸ್ವಾಮಿ 'ಸ್ಲಂ'ಗಳಲ್ಲಿ ವಾಸ್ತವ್ಯ ಮಾಡುವುದಿಲ್ಲವೇಕೆ?
◆ ಅವರಿಗೆ ಸ್ಲಂಗಳನ್ನು ಎತ್ತಂಗಡಿ ಮಾಡಿಸೋದಷ್ಟೇ ಗೊತ್ತಿರೋದು.

ಎಂ. ನಿಸರ್ಗ, ದಾವಣಗೆರೆ
"ನಗ್ನತೆ ಅಶ್ಲೀಲತೆಯಲ್ಲ" ಎಂದು ಸುಪ್ರೀಂಕೋರ್ಟ್ ಹೇಳಿದೆಯಲ್ಲ?
◆ ಸುಪ್ರೀಂಕೋರ್ಟ್ ಹೇಳಿದ್ದೆಲ್ಲ ಅಂತಿಮ ಸತ್ಯ ಅಲ್ಲ!

ಅಕ್ಬರ್ ಸಿ. ಕಾಲಿಮಿರ್ಚಿ, ಭಾಗ್ಯನಗರ
ಚೆಡ್ಡಿಗಳಿಗೆ ದೇವರಭೂತ ಅಷ್ಟೇಕೆ ಬಡಿದುಕೊಂಡಿದೆ?
◆ ಬಿಟ್ಟಿಕೂಳು ಇನ್ಯಾವುದರಿಂದ ಸಿಗುತ್ತೆ ಹೇಳಿ?!

ಕಣ್ಣಾ ಮುಚ್ಚಾಲೆ

ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ
ಸಾರಾಯಿ ನಿಷೇಧಿಸಿ ಮದ್ಯ ಮಾರಾಟಕ್ಕೆ ಚಾಲನೆ ನೀಡುತ್ತಿದ್ದಾರಲ್ಲಾ?
◆ ರಾಮಭಕ್ತರು ಖೋಡೆ ನೀಡುವ ಮದ್ಯವನ್ನೇ ರಾಮರಸ ಎಂದು ಭಾವಿಸಿರುವಂತಿದೆ.

ಡಿ.ಎಲ್. ಶ್ವೇತಾ, ಹರಪನಹಳ್ಳಿ
ನಾಡಿನ ಸಿಎಂ ಹುದ್ದೆ ಒಂದೇ ಮನೆಗೆ ಸೀಮಿತವಾಗಿದೆಯಲ್ಲಾ?
◆ ಒಂದೇ ಮನೆ ಅಲ್ಲ. ರೇವಣ್ಣನ ಮನೆ ಪದ್ಮನಾಭನಗರದಲ್ಲಿ. ಕುಮಾರನ ಮನೆ ಸದಾಶಿವನಗರದಲ್ಲಿ ಎಂದು ವಾದಿಸುತ್ತಿವೆ ಗೌಡರ ಭಟ್ಟಂಗಿಗಳು.

ಎಂ. ರಾಮದಾಸ್, ಮಂಗಳೂರು
ನಮ್ಮದು ರಾಮರಾಜ್ಯವಾದರೆ 'ಲಂಕೇಶ್' ಗತಿಯೇನು?
◆ ರಾಮ ರಾಜ್ಯದಲ್ಲೂ ದಲಿತರಿಗೆ. ಹಿಂದುಳಿದವರಿಗೆ ಸ್ಥಾನ ಇರಲಿಲ್ಲ. ಗೊತ್ತಾ?

ಬಹುಮಾನಿತ ಪ್ರಶ್ನೆ

ಪಿ.ಎನ್. ಶ್ರೀವತ್ಸ, ಬೆಂಗಳೂರು
ಹೆಣ್ಣಿಗೆ ಈಜು ಕಲಿಸಲು ಗಂಡು ಕೋಚುಗಳು ಇದ್ದಿದ್ದೇ ಆದರೆ...?!
◆ ಶ್ರೀವತ್ಸ ಮ್ಯಾನೇಜರ್ ಕೆಲಸ ಬಿಟ್ಟು ಸ್ವಿಮ್ಮಿಂಗ್ ಎಕ್ಸ್‌ಪರ್ಟ್ ಆಗಿ ಅರ್ಜಿ ಸಲ್ಲಿಸುತ್ತಿದ್ದರು!

ಮಂಚಾಲಿ. ಗುರುರಾಜಚಾರು, ಬಳ್ಳಾರಿ
ನರಿ ಬಾಲ ತುಳಿದವರು ಕುಮಾರಸ್ವಾಮಿ, ನಾಯಿ ಬಾಲ ತುಳಿದವರು?
◆ ಚೆಡ್ಡಿ ಮಂತ್ರಿ ಅಶೋಕ್.

ಎಚ್.ಎಂ. ಹೇಮಂತ್‌ಕುಮಾರ್, ಬೆಂಗಳೂರು
ಕರ್ನಾಟಕದಲ್ಲಿ 'ಮುಂಗಾರುಮಳೆ' ಜೋರಾಗಿರುವುದರಿಂದ ತಮಿಳುನಾಡಿಗೆ ಹೆಚ್ಚು ನೀರು ಬಿಟ್ಟರೆ ತಪ್ಪೇನು?
◆ ನೀರನ್ನು ರಿಮೇಕ್ ಮಾಡಕ್ಕಾಗಲ್ಲ. ಗೊತ್ತಾ.

ಅಕ್ಕಿ ಕೊಟ್ರೇಶ್, ಉಪನಾಯಕನಹಳ್ಳಿ
ಪ್ರೇಮಿಗಳ ದಿನ ಇದೆ. ದಂಪತಿಗಳ ದಿನ ಇಲ್ಲ ಏಕೆ?
◆ ಅವರು ಮಾಜಿ ಪ್ರೇಮಿಗಳಾಗಿರುತ್ತಾರಾದ್ದರಿಂದ.

ರವೀಂದ್ರನಾಥ ಶಿ. ಯಡದಳ್ಳಿ, ಇಲಕಲ್ಲ
ಪ್ರಿಯತಮೆ ತಿರಸ್ಕರಿಸಿದರೆ ಭಗ್ನಪ್ರೇಮಿ, ಪಕ್ಷಗಳು ತಿರಸ್ಕರಿಸಿದರೆ?
◆ ಅಂಥವರನ್ನು ಬಂಗಾರಪ್ಪ ಅಂತಾರೆ.

ಎ.ಎಸ್. ಸ್ವಾಮಿ, ಶೋರಾಪೂರ
ಸುಖ-ಸಂಸಾರಕ್ಕೆ ಒಂದೇ ಸೂತ್ರ. ಹೇಳಿ ನೋಡೋಣಾ?
◆ ಹೆಂಡತಿ ಹೇಳೋದೇ ಸರಿ... ಅಂತ ನಂಬಿ ಬಾಳುವುದು.

ವಾರದ ಪ್ರಶ್ನೆ:
ಪೂರ್ಣಚಂದ್ರ ಅಸ್ತಮಿಸಿದ ನಂತರ ಮುಂದೇನು?

ಏಪ್ರಿಲ್ 4ರ ಸಂಚಿಕೆಯ ನಮ್ಮ ಪ್ರಶ್ನೆ: ಯಡ್ಡಿ ಬಜೆಟ್‌ಗೊಂದು ಟೈಟಲ್ ಕೊಡಿ.
ನಿಮ್ಮ ಉತ್ತರ: ಬೆತ್ತಲೆ ಬಜೆಟ್ಟಿಗೆ ಚೆಡ್ಡಿ ತೊಡಿಸಿದ ಯಡ್ಡಿ.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಓದು ಸಿದ್ದೇಗೌಡ, ಕಬ್ಬೇಹಳ್ಳಿ

ಒಂದು ಪತ್ರ

ಮಠಮಂದಿರಗಳಿಗೆ ದೇಣಿಗೆ: ಭೂತಗಳಿಗೆ ಬಲಿ

ಸಂವಿಧಾನದ ಅನುಚ್ಛೇದ A(2) ಯು ಭಾಗ IV A ಯಲ್ಲಿ ಮೂಲಭೂತ ಹಕ್ಕುಗಳ ಕುರಿತು ಹೇಳುತ್ತಾ ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯವನ್ನು ಹೀಗೆ ಸಾರುತ್ತದೆ: "To promote harmony and the spirit of common brotherhood amongst all the people of India, transcending religious linguistic and regional or sectional diversities..." ಅದೇ ಭಾಗದ ಸೆಕ್ಷನ್(h)ನ ಅನುಚ್ಛೇದ SIA ಪ್ರತಿಯೊಬ್ಬ ನಾಗರಿಕನ ಕರ್ತವ್ಯವನ್ನು ಹೀಗೆ ಹೇಳುತ್ತದೆ: "To develop the scientific temper, humanism and the spirit of inquiry and reform"

ಆದರೆ ಈ ಅನಾಗರಿಕರ ಸರ್ಕಾರದ ಬಜೆಟ್ ಕರ್ತೃವಿಗೆ ಸಂವಿಧಾನದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಅನಾಗರಿಕರು ಹಿಂದೆ ತಮ್ಮದೇ ಒಂದು ಅನಾಗರಿಕ ಸಂವಿಧಾನ ಮಾಡಿಕೊಳ್ಳಲು ಪ್ರಯತ್ನಪಟ್ಟಿದ್ದರು. ಅದೇ ಪ್ರಯತ್ನದ ಪೂರ್ವಭಾವೀ ಕಾರ್ಯಕ್ರಮವಾಗಿ ಈಗ ಬಜೆಟ್ಟಿನಲ್ಲಿ ಕೋಟಿಕೋಟಿ ಅನುದಾನವನ್ನು ಮಠಮಂದಿರಗಳಿಗೆ ತೆಗೆದಿರಿಸಿ ಸಂವಿಧಾನಕ್ಕೆ ದ್ರೋಹ ಬಗೆಯುವುದು, ಜನ ಹಸಿವಿನಿಂದ ಸಾಯುತ್ತಿರುವಾಗ ಮಹೋತ್ಸವಗಳನ್ನು ನಡೆಸಿ ಕೇಕೆ ಹಾಕುವುದು ಇವರ ಲಾಗಾಯ್ತಿನ ಚಟ.

ವಸ್ತುಸ್ಥಿತಿಯಲ್ಲಿ ಮಧ್ಯಯುಗದ ಪಾಳೆಗಾರರು ಇವರಿಗಿಂತ ಎಷ್ಟೋ ಪಾಲು ಮೇಲು. ಏಕೆಂದರೆ ಅವರು ಮಧ್ಯಯುಗದವರು. ಆದರೆ ಇವರು ಮಧ್ಯಯುಗದ ಭಯಾನಕ 'ಭೂತ'ಗಳು. ಅಂತೆಯೇ ಮಧ್ಯಯುಗಕ್ಕೆ ಸೇರಿದ ಮಠಮಂದಿರಗಳೆಂದರೆ ಇವರಿಗೆ ಎಲ್ಲಿಲ್ಲದ ಪ್ರೀತಿ.

ಈ ಮಠಮಂದಿರಗಳು ಈಗಾಗಲೇ ಶಾಲಾ ಕಾಲೇಜು ಆಸ್ಪತ್ರೆ ಯಜ್ಞ ಯಾಗ ಹೋಮಹವನ-ಇತ್ಯಾದಿಗಳ ಹೆಸರಿನಲ್ಲಿ ನುಂಗಿ ನುಂಗಿ ಬಂಡವಾಳಪತಿಗಳ ನೆಚ್ಚಿನ ನೆಂಟರಾಗಿದ್ದಾರೆ. ಹಾಗಾಗಿ ರಾಜಕೀಯವೂ ಮಠ ಮಂದಿರಗಳ ಒಂದು ಪ್ರಮುಖ 'ದೇವತಾ ಕಾರ್ಯ.' ಜನತೆಯನ್ನು ಬಂಡವಾಳಗಾರ ಸರ್ಕಾರದೆದುರು ಎಂದೂ ಬಂಡೇಳದಂತೆ ನಿಷ್ಕ್ರಿಯಗೊಳಿಸಿ, ಬೀಜ ಒಡೆಯುವ ಕಾಯಕದಲ್ಲಿ ಇವರು ನಿಸ್ಸೀಮರು. ಇನ್ನು ಯಾರಾದರೂ ಇವರನ್ನು ಎದುರಿಸಲು ಪ್ರಯತ್ನಪಟ್ಟರೆ ಇವರ ಬಳಿ ಭಯಾನಕ ಉತ್ಪೀಡಕ ಶಾಸ್ತ್ರಗಳಾದ ಪೊಲೀಸ್, ಜೈಲು, ಕಚೇರಿ, ಕೋರ್ಟು ಹೇಗೂ ಇವೆ. ತಮ್ಮವರೇ ಆದ ಇವರಿಗೆ ಕೋಟಿಗಟ್ಟಲೆ ಅನುದಾನ ಕೊಡದೆ ಇನ್ಯಾರಿಗೆ ಕೊಡಬೇಕು? "ಅಂಧೇರ್ ನಗರಿ, ಚೌಪತ್ ರಾಜಾ."

ಆದರೆ ಈ ಜನ ಸದಾ ಹೀಗೆಯೇ ಮೂರ್ಖರಾಗಿಯೇ ಇರುತ್ತಾರೆಂದು ಭಾವಿಸಿದರೆ ಅದು ಅವರ ಭ್ರಮೆ. ಜನರ ದೇವರುಗಳಿಗೆ ಅವರ ಬಳಿ ಇರುವ ಪುಡಿಕಾಸು ಸಾಕು. ಮಧ್ಯವರ್ತಿತನ, ಲೇವಾದೇವಿ, ರಾಜಕೀಯದ ಕೊಳಚೆ ಹೊಂಡದಲ್ಲಿ ಹೊರಳಾಡುವ ಪರಪುಷ್ಟ ಜೀವಿ ಮಠಾಧಿಪತಿ 'ಹೆಗ್ಗಣ'ಗಳನ್ನು ಜನ ಇವತ್ತಲ್ಲ ನಾಳೆ ಅವರ ಸ್ವಂತ ನೆಲೆಯಾದ 'ಗೊಂಡಾರಣ್ಯ'ಕ್ಕೆ ಅಟ್ಟಿಯೇ ಅಟ್ಟುತ್ತಾರೆ. 21 ನೆಯ ಶತಮಾನದ ವೈಜ್ಞಾನಿಕ ಯುಗದಲ್ಲಿ ಮಠಮಂದಿರಗಳಿಗೆ ದೇಣಿಗೆ ಕೊಡುವ 15 ನೆಯ ಶತಮಾನದ 'ಭೂತ'ಗಳಿಗೆ ಇತಿಹಾಸ ಖಂಡಿತವಾಗಿಯೂ ಪಾಠ ಕಲಿಸಿಯೇ ಕಲಿಸುತ್ತದೆ. ಅಲ್ಲಿಯತನಕ ಅವರು ಜನಸಾಗರದ ಜ್ವಾಲಾಮುಖಿಯ ಎದಿರು ಆರಾಮವಾಗಿ ಚಳಿ ಕಾಯಿಸಿಕೊಳ್ಳಬಹುದು!


–ಡಾ. ಜೆ. ಭಾಸ್ಕರಮಯ್ಯ
ಉಡುಪಿ

ನಮ್ಮನ್ನು ಅನಾಥರನ್ನಾಗಿಸಿದ ಲಂಕೇಶ್, ಎಂಡಿಎನ್, ತೇಜಸ್ವಿ

ಹೊಗಳಿಕೆ / ತೆಗಳಿಕೆ

ಅರುಂಧತಿರಾಯ್‌ರವರ ಸಂದರ್ಶನ ಬಹಳ ಚೆನ್ನಾಗಿತ್ತು, ಇಂದಿನ ಭಾರತದ ಸ್ಪಷ್ಟ ಚಿತ್ರಣವನ್ನು ಅವರ ಮಾತುಗಳು ಪ್ರತಿಬಿಂಬಿಸಿವೆ. ಕಾಕತಾಳೀಯವೇನೆಂದರೆ, "...ವಿಶ್ವಬ್ಯಾಂಕ್, ಎಡಿಬಿ, ಎಫ್‌ಡಿಐ, ನ್ಯಾಯಾಲಯಗಳು ನೀಡಿರುವ ಅನುಕೂಲ ತೀರ್ಪುಗಳು, ತಮಗೆ ಬೇಕಾದಂತಹ ನಿಯಮಗಳನ್ನು ರೂಪಿಸುವ ನಾಯಕರು, ತಮ್ಮನ್ನು ಬೆಂಬಲಿಸುವ ಮಾಧ್ಯಮಗಳು ಮತ್ತು ಇವೆಲ್ಲವುಗಳನ್ನು ಜನರ ಗಂಟಲಿಗೆ ತುರುಕುವ ಪೊಲೀಸ್ ವ್ಯವಸ್ಥೆಯನ್ನೇ ತಮ್ಮ ಆಯುಧಗಳಾಗಿ ಸರ್ಕಾರ ಮತ್ತು ಕಾರ್ಪೊರೇಟ್‌ಗಳು ಆಯ್ಕೆ ಮಾಡುತ್ತಿವೆ. ಆದರೆ ಈ ಪ್ರಕ್ರಿಯೆಯನ್ನು ವಿರೋಧಿಸುವ ಜನ ಇಲ್ಲಿಯವರೆಗೂ ಆಯ್ಕೆ ಮಾಡಿಕೊಂಡಿದ್ದ ಆಯುಧಗಳೆಂದರೆ ಧರಣಿ, ಸತ್ಯಾಗ್ರಹ, ಉಪವಾಸ, ಪ್ರತಿಭಟನೆ ಮತ್ತು ತಮ್ಮ ಪರವಾಗಿದೆ ಎಂದು ಭಾವಿಸಿದ್ದ ನ್ಯಾಯಾಲಯಗಳು ಹಾಗೂ ಮಾಧ್ಯಮಗಳನ್ನು..." ಎಂಬ ಅವರ ಮಾತುಗಳನ್ನು ನಾವೆಲ್ಲಾ "ಪತ್ರಿಕೆ"ಯಲ್ಲಿ ಓದಿ ಒಂದು ವಾರ ಕಳೆಯುವದರೊಳಗೆ, ಅಲಹಾಬಾದ್ ನ್ಯಾಯಾಲಯ ನಿಜವಾಗಿಸಿದೆ. ಉ.ಪ್ರ. ದಲ್ಲಿ ಮುಸಲ್ಮಾನರು ಅಲ್ಪ ಸಂಖ್ಯಾತರಲ್ಲವೆಂದು ಅಲಹಾಬಾದ್ ಹೈಕೋರ್ಟ್ ಏಕ ನ್ಯಾಯಮೂರ್ತಿ ಪೀಠ ತೀರ್ಪು ನೀಡಿದ 24 ಗಂಟೆಗಳಲ್ಲಿ ಅಲಹಾಬಾದ್ ಹೈಕೋರ್ಟ್ ವಿಶೇಷ ಮನವಿಗಳ ಪೀಠ ಸದರಿ ತೀರ್ಪಿಗೆ ತಡೆಯಾಜ್ಞೆ ನೀಡಿದೆ. "ನ್ಯಾಯದೇವತೆ" ಉ.ಪ್ರ.. ಚುನಾವಣೆಗಳ ನಂತರ ಮತ್ತೆ ಯಾರ ಪಾಲಾಗುತ್ತಾಳೋ ಕಾದು ನೋಡಬೇಕಿದೆ.

ಅಂಕಿ-ಅಂಶಗಳ ಪ್ರಕಾರ ಮುಸಲ್ಮಾನರು ಭಾರತ ಜನಸಂಖ್ಯೆಯ ಸುಮಾರು ಶೇ.16.40ರಷ್ಟಿದ್ದಾರೆ. ಆದರೂ ನ್ಯಾಯಾಲಯ ಇಂತಹ ತೀರ್ಪನ್ನು ನೀಡುತ್ತದೆಯೆಂದರೆ ಈ ನೆಲದಲ್ಲಿ ನ್ಯಾಯಾಲಯಗಳು ತಮ್ಮ ಪಾವಿತ್ರ್ಯತೆಯನ್ನು ಉಳಿಸಿಕೊಂಡಿಲ್ಲವೆಂಬುದು ಜಗಜ್ಜಾಹೀರಾಗುತ್ತದೆ. ಅನೇಕ ಕಾರಣಗಳಿಂದ ಹತಾಶಗೊಂಡಿರುವ ಭಾರತೀಯ ಮುಸಲ್ಮಾನರಿಗೆ ಈ ತೀರ್ಪುಗಳು ಆಘಾತವನ್ನೇನೂ ತರಬಹುದೆಂಬುದು ನನ್ನ ಭಾವನೆ. ಈ ದೇಶದಲ್ಲಿ ತಮ್ಮ ಪ್ರಾರ್ಥನಾ ಸ್ಥಳ ನೆಲ ಸಮವಾಗಿದ್ದನ್ನು, ಕೋಮು ಹಿಂಸೆಯಲ್ಲಿ ತಮ್ಮ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಹಾಗೂ ಹೆಂಡತಿ-ಮಕ್ಕಳನ್ನು ಕೊಲೆಯಾಗುವುದನ್ನು, ತಮ್ಮ ತಾಯಿ, ಅಕ್ಕ-ತಂಗಿ ಮತ್ತು ಹೆಂಡತಿ-ಮಗಳು ಅತ್ಯಾಚಾರಕ್ಕೀಡಾಗಿರುವುದನ್ನು ಕಣ್ಣಾರೆ ಕಂಡಿರುವ ಅವರಿಗೆ ಈ ತೀರ್ಪು, ತಡೆಯಾಜ್ಞೆ, ಮೂಲ ತೀರ್ಪಿನ ಪುನರಾವರ್ತನೆ ಇವೆಲ್ಲಾ ಸರ್ವ ಸಾಧಾರಣವಾಗಿಯೇ ಕಾಣಬಹುದು. ಚುನಾವಣಾ ಕಾಲಕ್ಕೆ ಮತ ಬ್ಯಾಂಕ್ ಆಧಾರಿತ ತೀರ್ಪು. ನಂತರ, ಅಧಿಕಾರಕ್ಕಾಗಿ ಪಕ್ಷಗಳೊಂದಿಗೆ ಕೂಡಿಕೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಇನ್ನೊಂದು ತೀರ್ಪು. ಅಧಿಕಾರಾವಧಿಯಲ್ಲಿ ವಿದೇಶಿ ಬಂಡವಾಳಕ್ಕೆ ತನ್ಮೂಲಕ ಸಾರ್ವಜನಿಕ ಸಂಪನ್ಮೂಲ ಲೂಟಿ ಮಾಡಲು ಅನುಕೂಲವಾಗುವಂತೆ ಮತ್ತೊಂದು ತೀರ್ಪು. ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗದವರನ್ನು ಶೈಕ್ಷಣಿಕವಾಗಿ ಮಟ್ಟಹಾಕಲು ಒಂದು ತೀರ್ಪು. ದಲಿತರನ್ನು ಮಟ್ಟ ಹಾಕಲು ಜಾತಿ ನಿಂದನೆ, ಎದುರಿಸಿದವರಿಗೆ ಯಜ್ಞಕುಂಡ, ಇದನ್ನೆಲ್ಲಾ ಪ್ರಶ್ನಿಸುವವರಿಗೆ ನಕ್ಸಲೈಟರೆಂಬ ಬಿರುದು, ಎನ್‌ಕೌಂಟರ್ ಎಂಬ ಬಹುಮಾನ, ಇದು ಇಂದಿನ ಪ್ರಜಾಪ್ರಭುತ್ವ... ಇಂತಹ ದೇಶವನ್ನೇ ಗಾಂಧಿ ಕನಸಿದ್ದು!!! ಸಂವಿಧಾನದ ವ್ಯಾಖ್ಯಾನಗಳನ್ನ ನಿಯಮಗಳನ್ನ ಅವರವರ ಲಾಭಕ್ಕೆ-ಅನುಕೂಲಕ್ಕೆ ತಕ್ಕಂತೆ ತಿರುಚಿಕೊಳ್ಳಬಹುದಾದರೆ, ಗಣತಂತ್ರ, ಜಾತ್ಯತೀತತೆ, ಸಮಾನತೆ, ಸ್ವಾತಂತ್ರ್ಯ ಇವೆಲ್ಲಾ ಸವಕಲು ನಾಣ್ಯಗಳಂತಹವೇ. ಕಳೆದ 60 ವರ್ಷಗಳಿಂದಲೂ ಮತಬ್ಯಾಂಕ್ ರಾಜಕಾರಣಕ್ಕೆ ಬಲಿಪಶುವಾಗಿರುವ, ತಮ್ಮ ಪ್ರತಿಹೊತ್ತಿನ ಊಟಕ್ಕೆ, ತಮ್ಮ ಹೆಣ್ಣುಮಕ್ಕಳ ಭದ್ರತೆಗೆ ಎಡೆಬಿಡದೆ ಹೋರಾಡುತ್ತಿರುವ ಮುಸಲ್ಮಾನ ಸಮುದಾಯದ ಬಹುಪಾಲು ಮಂದಿಗೆ ಈ ತಥಾಕಥಿತ ಅಲ್ಪಸಂಖ್ಯಾತ ಸೌಲಭ್ಯಗಳ ಅರಿವೇ ಇಲ್ಲವೆಂಬುದು ವಿಪರ್ಯಾಸ.




ಏತನ್ಮಧ್ಯೆ, ಅಲ್ಲೋ-ಇಲ್ಲೋ ನಮ್ಮಂತಹವರ ಧ್ವನಿಯಾಗಿ ಬಂಡವಾಳಶಾಹಿ ಹಾಗೂ ವೈದಿಕಶಾಹಿಯ ವಿರುದ್ಧ ಬಂಡಾಯವೇಳುತ್ತಿದ್ದ ಲಂಕೇಶ್ ಮೇಷ್ಟ್ರು, ಪ್ರೊ. ನಂಜುಂಡಸ್ವಾಮಿ, ಈಗ ತೇಜಸ್ವಿ ನಮ್ಮನ್ನೆಲ್ಲಾ ಅನಾಥರಾಗಿಸಿ ದೂರ ತೀರಕ್ಕೆ ಸಾಗಿಹೋಗಿದ್ದಾರೆ. ಶೂನ್ಯದತ್ತ ದೃಷ್ಟಿ ನೆಡುವ ಅನಿವಾರ್ಯತೆಗೆ ಈಡಾಗಿದೆ ನಮ್ಮ ಸಮಾಜ.............


– ದಾದಾ ಖಲಂದರ್,
ಹಿರಿಯೂರು

ದುರಂತದ ಮುನ್ನ ಗಾಜನೂರಿನಲ್ಲಿ ಸಂಭ್ರಮದ ದಿನ

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್! 47

ನಿರೂಪಣೆ: ಸದಾಶಿವ ಶೆಣೈ





ಗಾಜನೂರಿನಲ್ಲಿ ಅಪ್ಪಾಜಿ ಹೊಸ ಮನೆಯನ್ನು ಕಟ್ಟಿಸಿದ್ದರು. ಅಲ್ಲಿ ತೋಟದಲ್ಲಿ ಬೋರ್‌ವೆಲ್ ತೋಡಿಸಿ, ನೀರನ್ನು ಪಡೆದಾಗ ನಾವೆಲ್ಲರೂ ಅಲ್ಲಿಗೆ ಹೋಗಿ ಸಂತೋಷ ಸಂಭ್ರಮವನ್ನು ಹಂಚಿಕೊಂಡಿದ್ದೆವು. ಅಂದು ರಾತ್ರಿ ನಾವೆಲ್ಲಾ ಹೊಸ ಮನೆಯಲ್ಲೇ ಉಳಿದುಕೊಂಡಿದ್ದೆವು. ಎರಡನೇ ಬಾರಿ ಅಪ್ಪಾಜಿ ಅದೇ ಮನೆಗೆ ಅದೇ ಬೋರ್‌ವೆಲ್ ನೀರು ಕುಡಿಯಲು ಹೋದಾಗ ಎಂತಹ ದುರಂತ ನಡೆದುಹೋಯಿತು ಎಂಬುದು ನಿಮಗೆ ಗೊತ್ತಲ್ಲವೇ?

ನನ್ನ ಮುದ್ದಿನ ಮಗಳು ಚಿಲ್ಟು ಪ್ರಶಸ್ತಿಯನ್ನು ಪಡೆದಾಗ ನಮಗೆಲ್ಲಾ ಸಂತೋಷವಾಗಿದ್ದು ನಿಜ. ಆದರೆ ಆ ಸಂತೋಷವನ್ನು ನಾವು ಸೆಲಬರೇಟ್ ಮಾಡಲಾಗಲಿಲ್ಲ. ಯಾಕೆಂದರೆ, ಸಾಧಾರಣವಾಗಿ ಇಂತಹ ಸಂದರ್ಭದಲ್ಲಿ ನಮ್ಮ ಕುಟುಂಬದವರೆಲ್ಲಾ ಒಂದೇ ಕಡೆ ಇರುವುದು ಅಪರೂಪ. ಹೀಗಾಗಿ ಚಿಲ್ಟು ಪ್ರಶಸ್ತಿ ಪಡೆದದ್ದು ಮಾತ್ರವಲ್ಲ, ನಮ್ಮ ಮನೆಯಲ್ಲಿ ಯಾರೇ ಪ್ರಶಸ್ತಿ ಪಡೆದರೂ ನಾವು ಸಂತೋಷ ಕೂಟ ಏರ್ಪಡಿಸಿದ್ದು ಕಡಿಮೆ. ಹೆಚ್ಚೆಂದರೆ ಪ್ರಶಸ್ತಿ ಬಂದಾಗ ಒಬ್ಬರಿಗೊಬ್ಬರು ಫೋನಿನಲ್ಲಿ ವಿಶ್ ಮಾಡುತ್ತೇವೆ, ಊರಲ್ಲೇ ಇದ್ದರೆ ಮನೆಗೆ ಹೋಗಿ ಅಭಿನಂದಿಸುತ್ತೇವೆ. ಆಕಸ್ಮಾತ್ ನಾವು ಪ್ರತಿಬಾರಿ ಪ್ರಶಸ್ತಿ ಬಂದಾಗ ಸಂತೋಷಕೂಟವನ್ನು ಏರ್ಪಡಿಸುತ್ತಾ ಹೋದರೆ, ಅದಕ್ಕೆಂದೇ ಅದೆಷ್ಟೋ ದಿನಗಳು ಬೇಕಾಗುತ್ತವೆ. ಅಷ್ಟೊಂದು ಪ್ರಶಸ್ತಿಗಳು - ಅವು ರಾಷ್ಟ್ರ, ರಾಜ್ಯ ಅಥವಾ ಸ್ಥಳೀಯ ಪ್ರಶಸ್ತಿಗಳಿರಬಹುದು - ನಮ್ಮ ಕುಟುಂಬದ ಸದಸ್ಯರಿಗೆ ಬರುತ್ತಲೇ ಇರುತ್ತದೆ.

ಚಿಲ್ಟು ಪ್ರಶಸ್ತಿ ಗಳಿಸುವ ಮುನ್ನ ನಾನೇ ಮೂರು ಬಾರಿ ರಾಜ್ಯ ಪ್ರಶಸ್ತಿ ಪಡೆದಿದ್ದೆ. 'ಓಂ' ಚಿತ್ರಕ್ಕೆ ನನಗೆ ಮೊಟ್ಟ ಮೊದಲ ಪ್ರಶಸ್ತಿ ಬಂದಿತ್ತು. ಆ ಪ್ರಶಸ್ತಿ ಪ್ರದಾನ ಸಮಾರಂಭ ಮಡಿಕೇರಿಯಲ್ಲಿ ನಡೆದು ಅಂದಿನ ಮುಖ್ಯ ಮಂತ್ರಿ ಜೆ.ಹೆಚ್. ಪಟೇಲ್ ಅದನ್ನು ನೀಡಿದ್ದರು. ಅದು ನನ್ನ ಮೊಟ್ಟಮೊದಲ ಪ್ರಶಸ್ತಿ ಆಗಿದ್ದರಿಂದ ನಾನು ಅಂದು ಸ್ವಲ್ಪ ಪುಳಕಿತನಾಗಿದ್ದೆ. ಅಂದು ನನ್ನ ಜೊತೆಗೆ 'ಓಂ' ಚಿತ್ರದ ನಾಯಕಿ ಪ್ರೇಮಾ ಮತ್ತು ನಿರ್ದೇಶಕ ಉಪೇಂದ್ರ ಹಾಗೂ ಇನ್ನೂ ಅನೇಕರು ಪ್ರಶಸ್ತಿ ಪಡೆದುದರಿಂದ ಸಹಜವಾಗಿ ನಮ್ಮ ತಂಡವೇ ಸಂತೋಷದಲ್ಲಿ ಮುಳುಗಿತ್ತು. 'ಓಂ' ನಂತರ 'ಹೃದಯಾ ಹೃದಯಾ', ಅನಂತರ 'ಚಿಗುರಿದ ಕನಸು' ಹಾಗೆಯೇ ಮೊನ್ನೆ 'ಜೋಗಿ' ಚಿತ್ರಕ್ಕೆ.... ಹೀಗೆ ನಾಲ್ಕು ಬಾರಿ ನಾನು ರಾಜ್ಯ ಪ್ರಶಸ್ತಿ ಪಡೆದಿದ್ದೇನೆ. ಅದೇ ರೀತಿ 'ಎಕೆ-47', 'ಓಂ' ಮತ್ತು 'ನಮ್ಮೂರ ಮಂದಾರ ಹೂವೇ' ಚಿತ್ರಗಳ ಪಾತ್ರಕ್ಕೆ ಫಿಲಂ ಫೇರ್ ಪ್ರಶಸ್ತಿ ಗಳಿಸಿದ್ದೇನೆ. 'ಜನುಮದ ಜೋಡಿ' ಚಿತ್ರದ ಪಾತ್ರಕ್ಕೆ ರಾಜ್ಯ ಪ್ರಶಸ್ತಿ ದೊರಕುತ್ತದೆ ಎಂದು ಪತ್ರಿಕೆಯವರೆಲ್ಲಾ ಬರೆದಿದ್ದರೂ ಅದು ಕೊನೆ ಘಳಿಗೆಯಲ್ಲಿ ಮಿಸ್ ಆಯಿತು. ಆದರೆ ಇದರ ಬಗ್ಗೆ ನಾನು ತಲೆಕೆಡಿಸಿಕೊಳ್ಳಲಿಲ್ಲ, ಆದರೆ ಆ ಚಿತ್ರದ ನಾಯಕಿ ಶಿಲ್ಪಾಳಿಗೆ ಪ್ರಶಸ್ತಿ ದೊರಕಿದ್ದು ನಮಗೆಲ್ಲಾ ಸಂತೋಷವನ್ನುಂಟುಮಾಡಿತು. ಹೀಗೆ... ನಮ್ಮ ಮನೆಯ ಕಪಾಟಿನಲ್ಲಿ ಒಮ್ಮೆ ಇಣುಕಿನೋಡಿದರೆ ಕನಿಷ್ಟ ಅರವತ್ತೆಪ್ಪತ್ತು ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿಗಳ ಫಲಕಗಳು ಕಾಣಸಿಗುತ್ತವೆ. ಅದರಲ್ಲಿ ಹೆಚ್ಚಿನವು ಅಪ್ಪಾಜಿ ಸಂಪಾದಿಸಿದ್ದಾಗಿದೆ.

ಆದರೆ ವರ್ಷದ ಅನೇಕ ಸಂದರ್ಭಗಳಲ್ಲಿ ಮನೆಮಂದಿಯವರೆಲ್ಲಾ ಸೇರಿ ಸಖತ್ ಎಂಜಾಯ್ ಮಾಡುತ್ತಿದ್ದೆವು. ಅಪ್ಪಾಜಿಯ ಗಾಜನೂರಿನ ಮನೆಯಲ್ಲಿ, ಮೈಸೂರು ರಸ್ತೆಯಲ್ಲಿರುವ ನಮ್ಮ ತೋಟದ ಮನೆಯಲ್ಲಿ ಅಥವಾ ಅಪ್ಪಾಜಿ ಮನೆಯ ಟೆರೇಸ್‌ನ ಮೇಲೆ ನಾವೆಲ್ಲಾ ಒಟ್ಟು ಸೇರುವುದು ಮಾಮೂಲು. ಅಂತಹ ಒಂದು ಸಂದರ್ಭವೆಂದರೆ ಹೊಸ ವರ್ಷದ ಆಚರಣೆ.

ನನಗಿನ್ನೂ ನೆನಪಿದೆ - ಅದು 2000ನೇ ಇಸವಿ. ಮಿಲೇನಿಯಮ್ ವರ್ಷ ಎಂಬ ಕಾರಣಕ್ಕಾಗಿ ಅಪ್ಪಾಜಿ ಮನೆ ಟೆರೇಸ್ ಮೇಲೆ ಭಾರೀ ಜೋರಾಗಿ ಹೊಸ ವರ್ಷವನ್ನು ಆಚರಿಸಿದ್ದೆವು. ನಾವು ಸಾಧಾರಣವಾಗಿ ಹೊಸ ವರ್ಷವನ್ನು ಸ್ವಾಗತಿಸುವುದು ಅಲ್ಲೇ. ಅಂದಿನ ಪಾರ್ಟಿಗೆ ನಮ್ಮ ಕುಟುಂಬದ ಎಲ್ಲರೂ ಬಂದಿದ್ದರು. ನನ್ನ ತಂಗಿ, ನನ್ನ ಅಕ್ಕ, ಕಸಿನ್ಸ್, ಶಾರದಕ್ಕನ ಮಕ್ಕಳು.... ಹೀಗೆ ಸುಮಾರು ನೂರೈವತ್ತು ಜನ ನಾವು ಅಲ್ಲಿ ಸೇರಿದ್ದೆವು.

ಅಂತಹ ಪಾರ್ಟಿಗಳಿಗೆ ಯಾರೂ ಅತಿಥಿಗಳಲ್ಲ, ಎಲ್ಲರೂ ಯಾವುದಾದರೂ ಕೆಲಸದಲ್ಲಿ ತೊಡಗುತ್ತಾರೆ. ಬಣ್ಣದ ಕಾಗದ ಹಚ್ಚುವುದು, ಚೇರ್‌ಗಳನ್ನು ಜೋಡಿಸಿಡುವುದು ಮೊದಲಾದ ಕೆಲಸವನ್ನು ನಾವು ಮತ್ತು ಮನೆಯ ಮಕ್ಕಳೆಲ್ಲ ಜೊತೆಗೂಡಿ ಮಾಡುತ್ತೇವೆ. ಯಾವುದೇ ಡ್ರೆಸ್ ಕೋಡ್ ಇಲ್ಲವಾದ್ದರಿಂದ ನಾನು ಸಾಧಾರಣವಾಗಿ ಶಾರ್ಟ್ಸ್ ಮತ್ತು ಟೀ ಶರ್ಟ್‌ನಲ್ಲಿ ಇರುತ್ತೇನೆ. ಹೊರಗಡೆಯಿಂದ ಊಟ ಆರ್ಡರ್ ಮಾಡಿರುತ್ತೇವೆ. ಅಪ್ಪಾಜಿಗಿಷ್ಟವಾದ ಚಿಕನ್ ಕಬಾಬ್ ಮತ್ತು ಎಲ್ಲ ರೀತಿಯ ಚಿಕನ್ ಐಟಂಗಳು ಅಲ್ಲಿರುತ್ತದೆ.

ಸುಮಾರು ಸಂಜೆ ಎಂಟು ಗಂಟೆಗೆ ಆರಂಭವಾಗುವ ಮನರಂಜನಾ ಕಾರ್ಯಕ್ರಮ ಬೆಳಗಿನ ಜಾವ ಮೂರಾದರೂ ಮುಗಿಯುವುದೇ ಇಲ್ಲ. ನೀವು ನಂಬುತ್ತೀರೋ ಇಲ್ಲವೋ ಕೊನೆಯಲ್ಲಿ ಮಲಗುವುದೇ ಅಪ್ಪಾಜಿ. ಅಲ್ಲಿ ಆವತ್ತು ನನ್ನ ಚಿತ್ರದ ಹಾಡು, ಅಪ್ಪಾಜಿಯ ಹಾಡು, ರಾಘು ಹಾಡು ಹೀಗೆ ಎಲ್ಲ ಹಾಡುಗಳನ್ನು ಮೊಮ್ಮಕ್ಕಳು ಹಾಡಿ ಕುಣಿದು ತೋರಿಸುತ್ತಾರೆ. ನನ್ನ ತಂಗಿಯಂದಿರು ಕೂಡಾ ಅಂದು ಹಾಡಲೇ ಬೇಕು. ಭಾವಂದಿರು ಹಾಡಬೇಕು ಅಥವಾ ನೃತ್ಯ ಮಾಡಬೇಕು. ಒಂದೇ ಮಾತಲ್ಲಿ ಹೇಳುವುದಾದರೆ ಪ್ರತಿಯೊಬ್ಬರೂ ಏನಾದರೂ ಒಂದು ಕಾರ್ಯಕ್ರಮ ನೀಡಲೇಬೇಕು. ಅಪ್ಪಾಜಿಯ ಮೊಮ್ಮಕ್ಕಳು ಅಪ್ಪಾಜಿ ಸಮೇತ ಕನ್ನಡ ಚಿತ್ರರಂಗದ ಅನೇಕ ನಾಯಕನಟರ ಹಾವಭಾವಗಳನ್ನು ಮಿಮಿಕ್ರಿ ಮಾಡಿ ತೋರಿಸುತ್ತಾರೆ. ಈ ಮಧ್ಯೆ ರಾಜೀವ್ ಎಂಬ ನನ್ನ ಕಸಿನ್ ಸಖತ್ ಆಗಿ ಡ್ಯಾನ್ಸ್ ಮಾಡಿ ಎಲ್ಲರನ್ನೂ ಬೆಚ್ಚಿಬೀಳಿಸುತ್ತಾನೆ. ಅವನ ಡ್ಯಾನ್ಸ್ ಎಂದರೆ ಅಪ್ಪಾಜಿಗೆ ತುಂಬ ಇಷ್ಟ. ಹೀಗಾಗಿ ಅವನೊಬ್ಬನ ಡ್ಯಾನ್ಸನ್ನು ಎರಡೆರಡು ಮೂರು ಮೂರು ಬಾರಿ ಮಾಡಿಸುತ್ತಾರೆ. ಹನ್ನೆರಡು ಗಂಟೆ ಸಮೀಪವಾಗುತ್ತಿದ್ದಂತೇ ಫೋನುಗಳ ಶುಭಾಶಯಗಳು ಬರಲು ಆರಂಭಿಸುತ್ತವೆ. ಮೊದಲು ಫೋನ್ ಮಾಡುವುದೇ ನನ್ನ ಮಾವ ಬಂಗಾರಪ್ಪನವರು.

ಹನ್ನೆರಡು ಗಂಟೆ ಆದತಕ್ಷಣ ಸ್ವತಃ ಅಪ್ಪಾಜಿಯೇ ಪಂಚೆಯನ್ನು ಎತ್ತಿಕಟ್ಟಿ ಡ್ಯಾನ್ಸ್ ಮಾಡಲು ಇಳಿಯುತ್ತಾರೆ. ಎಲ್ಲರೂ ಬೆಚ್ಚಿಬೀಳುವ ಥರ ನೃತ್ಯ ಮಾಡುತ್ತಾರೆ. ನಾನು ಒಂದಿಷ್ಟು ಅವರಿಗೆ ಸಾಥ್ ನೀಡುತ್ತೇನೆ. 71ರ ಹರೆಯದ ಅಪ್ಪಾಜಿಯ ಉತ್ಸಾಹ ಮತ್ತು ಹುಮ್ಮಸ್ಸನ್ನು ಕಂಡು ನಾವೆಲ್ಲಾ ದಂಗಾಗುತ್ತೇವೆ.

ಇದೆಲ್ಲಾ ನಾನು ಹೇಳಿದ್ದು ಯಾಕೆಂದರೆ, ಹೊಸ ವರ್ಷಾಚರಣೆ ಎಂಬ ನೆಪದಲ್ಲಿ ಪಾರ್ಟಿಗಳಿಗೆ ಹೋಗುವುದು ನಮ್ಮ ವಾಡಿಕೆಯಲ್ಲ, ನಾವು, ಮಕ್ಕಳು, ಮೊಮ್ಮಕ್ಕಳೆಲ್ಲಾ ಸೇರಿ ಹೆತ್ತವರನ್ನು ಆ ದಿನ ಖುಷಿ ಪಡಿಸುತ್ತೇವೆ...

ಮಿಲೇನಿಯಮ್‌ನ ಹೊಸ ವರ್ಷ ಪ್ರಾರಂಭವಾದ ಕೂಡಲೇ ನಾನು ರಾಮಾನಾಯ್ಡು ಅವರ 'ಮದುವೆಯಾಗೋಣ ಬಾ', ಅಂಬರೀಷಣ್ಣನ ಜೊತೆ 'ದೇವರ ಮಗ' ಚಿತ್ರದಲ್ಲಿ ಮತ್ತು ಎಸ್. ನಾರಾಯಣ್ ಅವರ ಜೊತೆ 'ಗಲಾಟೆ ಅಳಿಯಂದಿರು' ಚಿತ್ರದಲ್ಲಿ ನಟಿಸಲಾರಂಭಿಸಿದೆ. ಸಾಧಾರಣವಾಗಿ ಅಪ್ಪಾಜಿಯ ಬರ್ತ್‌ಡೇಗೆ ನಾನು ಬೆಂಗಳೂರಿನಲ್ಲೇ ಇರಲು ಪ್ರಯತ್ನಿಸುತ್ತಿದ್ದೆನಾದರೂ ಆ ವರ್ಷ ನಾನು ಮಾರಿಷಸ್‌ನಲ್ಲಿದ್ದೆ. ಆನಂತರ ಸ್ವಿಡ್ಜರ್ ಲ್ಯಾಂಡಿಗೆ ಹೋಗಿ 'ಮದುವೆಯಾಗೋಣ ಬಾ' ಚಿತ್ರದ ಹಾಡುಗಳನ್ನು ಮುಗಿಸಿಕೊಂಡು ಬಂದೆವು.

ನಾವು ಹಿಂದಿರುಗುವ ಹೊತ್ತಿಗೆ ಗಾಜನೂರಿನಲ್ಲಿ ಅಪ್ಪಾಜಿ ಹೊಸ ಮನೆಯನ್ನು ಕಟ್ಟಿಸಿದ್ದರು. ಅಲ್ಲಿ ತೋಟದಲ್ಲಿ ಬೋರ್‌ವೆಲ್ ತೋಡಿಸಿ, ನೀರನ್ನು ಪಡೆದಾಗ ನಾವೆಲ್ಲರೂ ಅಲ್ಲಿಗೆ ಹೋಗಿ ಸಂತೋಷ ಸಂಭ್ರಮವನ್ನು ಹಂಚಿಕೊಂಡಿದ್ದೆವು. ಅಂದು ರಾತ್ರಿ ನಾವೆಲ್ಲಾ ಹೊಸ ಮನೆಯಲ್ಲೇ ಉಳಿದುಕೊಂಡಿದ್ದೆವು.

ಎರಡನೇ ಬಾರಿ ಅಪ್ಪಾಜಿ ಅದೇ ಮನೆಗೆ ಅದೇ ಬೋರ್‌ವೆಲ್ ನೀರು ಕುಡಿಯಲು ಹೋದಾಗ ಎಂತಹ ದುರಂತ ನಡೆದುಹೋಯಿತು ಎಂಬುದು ನಿಮಗೆ ಗೊತ್ತಲ್ಲವೇ? ಆ ದುರಂತದ ಪ್ರತಿ ಕ್ಷಣಗಳನ್ನು ನಿಮ್ಮ ಜೊತೆಗೆ ನಾನು ಹಂಚಿಕೊಳ್ಳುತ್ತೇನೆ ಕೇಳಿ...

(ಮುಂದುವರೆಯುವುದು)


ದೇಸಾಯಿ ದುರಂತ



ಸುನಿಲ್ ಕುಮಾರ್ ದೇಸಾಯಿ ಹೊಸ ಟ್ರೆಂಡ್‌ಗಳಿಗೆ ತಡವಾಗಿ ಎಚ್ಚೆತ್ತುಕೊಂಡಿರುವಚಿತೆ ಕಾಣುತ್ತಿದೆ. ಏಕೆಂದರೆ ಅವರ ಹೊಸ ಚಿತ್ರ 'ಕ್ಷಣ ಕ್ಷಣ'ದ ಕ್ಯಾಸೆಟ್ ಬಿಡುಗಡೆಯನ್ನು ಮುಂದಿನ ವಾರ ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಅದ್ದೂರಿಯಾಗಿ ಆಚರಿಸಲು ರೆಡಿಯಾಗುತ್ತಿದ್ದಾರೆ.

ಈ ಹಿಂದೆ ಅವರು ನಿರ್ದೇಶಿಸಿದ್ದ 'ರಮ್ಯ ಚೈತ್ರ ಕಾಲ' ಚಿತ್ರ ಸಂಗೀತ ಪ್ರಧಾನ ಚಿತ್ರವಾಗಿದ್ದರೂ, ಅದಕ್ಕೆ ಜಯಂತ್ ಕಾಯ್ಕಿಣಿ ಸಂಭಾಷಣೆ ಮತ್ತು ಹಾಡುಗಳನ್ನು ಬರೆದಿದ್ದರೂ ದೇಸಾಯಿ ಮಾತ್ರ ಸರಿಯಾದ ರೀತಿಯಲ್ಲಿ ಅದನ್ನು ಪ್ರೊಜೆಕ್ಟ್ ಮಾಡಿರಲಿಲ್ಲ. ಆದರೆ ಈಗ 'ಕ್ಷಣ ಕ್ಷಣ' ಒಂದು ಸಸ್ಪೆನ್ಸ್ ಚಿತ್ರವಾಗಿದ್ದರೂ ದೇಸಾಯಿ ಅದ್ದೂರಿಯಾಗಿ ಮಾಡಲು ಹೊರಟಿದ್ದಾರೆ. ದೇಸಾಯಿಯಂತಹ ಕ್ರಿಯಾಶೀಲ ನಿರ್ದೇಶಕರು ಎಲ್ಲಿ, ಹೇಗೆ, ಏನು ಮಾಡಬೇಕೆಂಬುದನ್ನೇ ತಿಳಿಯದಿರುವುದು ದುರಂತವೇ ಸರಿ.

'ಶಿವಾಜಿ'ಯ ದಾಖಲೆ



ಇಡೀ ಭಾರತೀಯ ಚಿತ್ರರಂಗ ಏಪ್ರಿಲ್ 12 ನೇ ತಾರೀಖಿಗೋಸ್ಕರ ಕಾತುರದಿಂದ ಕಾದು ಕುಳಿತಿದೆ. ಏಕೆಂದರೆ ಬಿಡುಗಡೆಯ ಮುನ್ನವೇ ಎಲ್ಲ ದಾಖಲೆ ಗಳನ್ನು ಮುರಿದಿರುವ, ಬಿಡುಗಡೆ ನಂತರ ಮತ್ತಷ್ಟು ದಾಖಲೆಗಳನ್ನು ಸ್ಥಾಪಿಸಲಿರುವ ಸೂಪರ್ ಸ್ಟಾರ್ ರಜನೀಕಾಂತ್ ಅಭಿನಯದ 'ಶಿವಾಜಿ' ಸಿನಿಮಾದ ಬಿಡುಗಡೆಯ ದಿನವದು.

ಕಳೆದ ವರ್ಷ ಬಿಡುಗಡೆಗೊಂಡಿದ್ದ ಹೃತಿಕ್ ರೋಷನ್ ನಟಿಸಿದ್ದ ಹಿಂದಿ ಚಿತ್ರ 'ಕ್ರಿಶ್' 14 ದೇಶಗಳ 1200 ಚಿತ್ರಮಂದಿರಗಳಲ್ಲಿ ಬಿಡುಗಡೆಗೊಂಡು ಭಾರತೀಯ ಸಿನಿಮಾ ಇತಿಹಾಸದಲ್ಲೆ ದಾಖಲೆ ಸ್ಥಾಪಿಸಿತ್ತು, ಆದರೆ ಆ ದಾಖಲೆಯನ್ನು 'ಶಿವಾಜಿ' ಸಲೀಸಾಗಿ ಮುರಿದಿದೆ.

ಇದೇ ವಾರ ಬಿಡುಗಡೆಯಾಗಲಿರುವ 'ಶಿವಾಜಿ' 27 ದೇಶಗಳ 2900 ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ. ಇಲ್ಲಿರುವ ಪಟ್ಟಿಯನ್ನು ನೋಡಿದರೆ 'ಶಿವಾಜಿ' ಎಬ್ಬಿಸಿರುವ ಹವಾ ಎಂತಹದ್ದು ಎಂಬುದರ ಅರಿವಾಗುತ್ತದೆ.

ಭಾರತದ 2200 ಚಿತ್ರಮಂದಿರಗಳು, ಚೈನಾ-211, ಜಪಾನ್-130, ಸಿಂಗಪೂರ್, ಮಲೇಶಿಯಾ ಮತ್ತು ಹಾಂಕಾಂಗ್‌ಗಳಲ್ಲಿ 100, ಸೌದಿ ದೇಶಗಳಲ್ಲಿ 100, ಅಮೆರಿಕದಲ್ಲಿ 80 ಹಾಗೂ ಇಂಗ್ಲೆಂಡಿನಲ್ಲಿ 70 ಕೇಂದ್ರಗಳಲ್ಲಿ ಬಿಡುಗಡೆಗೊಳ್ಳುತ್ತಿದೆ.

ಇನ್ನು ರಜನೀಕಾಂತ್ ಈ ಚಿತ್ರಕ್ಕೆ ಪಡೆದ ಸಂಭಾವನೆ ಎಷ್ಟು ಗೊತ್ತಾ? ಬಾಲಿವುಡ್ಡಿನ ದಿಗ್ಗಜರುಗಳಾದ ಅಮಿತಾಬ್, ಶಾರುಖ್, ಅಭಿಷೇಕ್, ಹೃತಿಕ್ ರೋಷನ್ ಎಲ್ಲರೂ ಸೇರಿ ಪಡೆಯುವ ಸಂಭಾವನೆಯ ದುಪ್ಪಟ್ಟು! ಈ ಹಿಂದೆ 'ಬಾಬಾ' ಚಿತ್ರದಲ್ಲಿ ನಟಿಸಿದ್ದಕ್ಕೆ ರಜನೀಕಾತ್ ಪಡೆದ ಸಂಭಾವನೆ ಕೇವಲ 15 ಕೋಟಿ! ಆನಂತರ 'ಚಂದ್ರಮುಖಿ'ಗಾಗಿ ಪಡೆದದ್ದು 25 ಕೋಟಿಗಿಂತಲೂ ಹೆಚ್ಚು!! ಈಗ 'ಶಿವಾಜಿ' ಯಲ್ಲಿ ನಟಿಸಿದ್ದಕ್ಕೆ ರಜನೀಕಾಂತ್ ಪಡೆದಿರುವುದು ಬರೋಬ್ಬರಿ 40 ಕೋಟಿ ರೂಪಾಯಿಗಳನ್ನು!!!

ಜಾಕಿಚಾನ್‌ನ ನಂತರ ಅತಿಹೆಚ್ಚು ಜನಪ್ರಿಯತೆಯನ್ನು ಗಳಿಸಿದ ಎರಡನೇ ನಟನೆಂದರೆ ಅದು ರಜನೀಕಾಂತ್ ಮಾತ್ರ. ಇವತ್ತು ಭಾರತದ ಸಿನಿಮಾಗಳಿಗೆ ವಿದೇಶಗಳಲ್ಲೂ ಬೇಡಿಕೆ ಹೆಚ್ಚಾಗಿದ್ದರೆ ಅದಕ್ಕೆ ಬುನಾದಿ ಹಾಕಿದ್ದೇ ರಜನೀಕಾಂತ್. ಈಗ ಆ ಬುನಾದಿಯ ಮೇಲೆ ಅವರು ಯಶಸ್ಸಿನ ಅರಮನೆಯನ್ನು ಕಟ್ಟಲು ಹೊರಟಿದ್ದಾರೆ.

ಕನ್ನಡದ ಕುವರ ಶಿವಾಜಿ ಅಲಿಯಾಸ್ ರಜನೀಕಾಂತ್ ತಮ್ಮ ಸ್ವಂತ ಹೆಸರಿನ 'ಶಿವಾಜಿ' ಸಿನಿಮಾದ ಮೂಲಕವೇ ಈ ಸಾಧನೆ ಮಾಡುತ್ತಿರುವುದನ್ನು ಮೆಚ್ಚಲೇಬೇಕಲ್ಲವೇ?!

R.B.P. LANKESH, Kannada Weekly Price Rs. 10/- 18-4-2007 RNI No. KARKAN2005/14648 Regd.No.KA/BG(S)/2036/2005-07

ಮಕ್ಕಳ ಚಿತ್ರಗಳಿಗೆ ತಿಕ್ಕಲ್‌ಗಳ ಕಾಟ

ಮಕ್ಕಳ ಚಿತ್ರಗಳನ್ನು ಪ್ರೋತ್ಸಾಹಿಸಲು ರಾಜ್ಯ ಸರಕಾರ ನೀಡಲಾರಂಭಿಸಿದ್ದ ಸಬ್ಸಿಡಿಯೇ ಈಗ ಒಂದು ದೊಡ್ಡ ಗಲಾಟೆಗೆ ಕಾರಣವಾಗಿದೆ. ವಿಷಯವಿಷ್ಟೇ: ಸರಕಾರ ಕೊಡುವ ತಲಾ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಈಗ ನಾಲ್ವರು ನಿರ್ಮಾಪಕರು ಜಿದ್ದಾಜಿದ್ದಿಗೆ ಬಿದ್ದಿದ್ದಾರೆ.



ರಾಮದಾಸ್ ನಾಯ್ಡು ಎಂಬ ಸೋಕಾಲ್ಡ್ ಬುದ್ಧಿಜೀವಿ ನಿರ್ದೇಶಕ ತಮ್ಮ ಯಥಾಪ್ರಕಾರದ ಶೈಲಿಯಲ್ಲಿ ತಮ್ಮ ಮಕ್ಕಳನ್ನು ಮತ್ತು ಸ್ನೇಹಿತರ ಮಕ್ಕಳನ್ನು ಹಾಕಿಕೊಂಡು 'ಮೊಗ್ಗಿನ ಜಡೆ' ಎಂಬ ಚಿತ್ರವನ್ನು ಯಾವ ಸದ್ದು ಇಲ್ಲದೆ ತಯಾರಿಸಿದರು. ಇದೇ ಹೊತ್ತಿನಲ್ಲಿ 'ಮಸಣದ ಮಕ್ಕಳು' ಎಂಬ ಇನ್ನೊಂದು ಮಕ್ಕಳ ಚಿತ್ರ ಗುಪ್ತವಾಗಿ ಸಿದ್ಧವಾಗಿದೆ. ಇದಾದ ನಂತರ ಬಿ.ಆರ್. ಕೇಶವ ಎಂಬ ಸಂತೆ ಹೊತ್ತಿಗೆ ಮೊಳ ಅಳೆಯುವ ಮತ್ತೊಬ್ಬ ನಿರ್ದೇಶಕ 'ಚೈತ್ರ' ಎಂಬ ಚಿತ್ರವನ್ನು ಸುತ್ತಲಾರಂಭಿಸಿ ಸೆನ್ಸಾರ್ ಮಂಡಳಿಗೆ ಕಳುಹಿಸಿದರು. ಈ ಮಧ್ಯೆ 'ಮೊಗ್ಗಿನ ಜಡೆ' ಮತ್ತು 'ಮಸಣದ ಮಕ್ಕಳು' ಎಂಬ ಸಿನಿಮಾಗಳು ಮಕ್ಕಳ ಚಿತ್ರಗಳೇ ಅಲ್ಲ ಎಂದು ಸೆನ್ಸಾರ್‌ನವರು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ನೋಡಿ "ಇಪ್ಪತ್ತೈದು ಲಕ್ಷ ನನಗೇ ಗ್ಯಾರಂಟಿ" ಎಂದು ಕೇಶವ್ ಬೀಗುತ್ತಿರುವಾಗಲೇ ಸೆನ್ಸಾರ್‌ನವರು ವಿವಿಧ ಕಾರಣಗಳಿಂದಾಗಿ ಅವರ ಚಿತ್ರವನ್ನು ಸೆನ್ಸಾರ್ ಮಾಡದೇ ಉಳಿದಿದ್ದರಿಂದ ಈ ಸಾಲಿನ 25 ಲಕ್ಷ ರೂಪಾಯಿಗಳು ಮುಂದಿನ ವರ್ಷದ ಲೆಕ್ಕಕ್ಕೆ ಸೇರುತ್ತದೆ. "ಇದು ಅನ್ಯಾಯ, ಆ ಹಣವನ್ನು ಈ ವರ್ಷದ ಲೆಕ್ಕಕ್ಕೇ ತೆಗೆದುಕೊಳ್ಳ ಬೇಕು" ಎಂದು ಕೇಶವ್ ಧರಣಿ ಕುಳಿತುಕೊಳ್ಳಲು ಹೊರಟಿದ್ದಾರೆ. ಈ ಎಲ್ಲ ಗೊಂದಲಗಳ ನಡುವೆ 'ಕೇರಾಫ್ ಫುಟ್‌ಪಾತ್' ಚಿತ್ರ ನಿರ್ದೇಶಿಸಿದ ಮಾಸ್ಟರ್ ಕಿಶನ್ ಇಪ್ಪತ್ತೈದು ಲಕ್ಷ ತನಗೆ ಗ್ಯಾರಂಟಿ ಎಂದು ಹೇಳಿಕೊಳ್ಳುತ್ತಿದ್ದಾನೆ. "ಆ ಚಿತ್ರವನ್ನು ಕಿಶನ್ ನಿರ್ದೇಶಿಸಿರಬಹುದು. ಆ ಕಾರಣಕ್ಕೇ ಅದು ಮಕ್ಕಳ ಚಿತ್ರವಾಗಲು ಸಾಧ್ಯವಿಲ್ಲ" ಎಂಬುದು ಗಾಂಧಿನಗರದವರ ವಾದ.



ಹೀಗೆ ಮಕ್ಕಳ ಚಿತ್ರದ ಇಪ್ಪತ್ತೈದು ಲಕ್ಷ ಸಬ್ಸಿಡಿಗಾಗಿ ಗಾಂಧಿನಗರದಲ್ಲಿ ಬೀದಿ ಜಗಳ ಶುರುವಾಗಿದೆ. ಈ ಗಲಾಟೆಯಲ್ಲಿ ಜನರ ಐವತ್ತು ಲಕ್ಷ ರೂಪಾಯಿಗಳು ಖಜಾನೆಯಲ್ಲೇ ಉಳಿಯುತ್ತದೆ ಎಂಬುದೇ ಸಮಾಧಾನದ ವಿಷಯ.



ಆಂಧ್ರದಲ್ಲೂ ಮುಂಗಾರು ಮಳೆ?

ಕಳೆದ ಡಿಸೆಂಬರ್‌ನಿಂದ ಹಿಡಿದು ಇಂದಿನವರೆಗೂ ಕನ್ನಡ ಚಿತ್ರರಂಗದಲ್ಲಿ ಮಳೆಯ ಪ್ರವಾಹವನ್ನೇ ಹರಿಸಿರುವ 'ಮುಂಗಾರು ಮಳೆ' ಪಕ್ಕದ ಆಂಧ್ರದಲ್ಲೂ ಹರಿಯಲಿದೆಯೇ?

ಹೌದು ಎನ್ನುತ್ತಿದೆ ಗಾಂಧಿನಗರದ ಒಂದು ಮೂಲ. 'ಮುಂಗಾರು ಮಳೆ'ಯ ಯಶಸ್ಸಿನಿಂದ ಪುಳಕಿತರಾಗಿರುವ ನಿರ್ದೇಶಕ ಯೋಗರಾಜ್ ಭಟ್ ತೆಲುಗಿನಲ್ಲೂ ಈ ಚಿತ್ರವನ್ನು ರೀಮೇಕಿಸಲು ಎಲ್ಲ ತಯಾರಿಯನ್ನು ಮಾಡಿಕೊಂಡಿದ್ದಾರಂತೆ. ಇಲ್ಲಿ ಗಣೇಶ್ ನಿರ್ವಹಿಸಿದ ಪಾತ್ರವನ್ನು ಅಲ್ಲಿ ನಾಗಾರ್ಜುನ್ ನಿರ್ವಹಿಸಲಿದ್ದಾರಂತೆ. ಈ ಚಿತ್ರ ಹಿಟ್ ಆಗಲು ಪ್ರಮುಖ ಕಾರಣರಾದ ಛಾಯಾಗ್ರಾಹಕ ಕೃಷ್ಣರನ್ನೂ ತೆಲುಗಿಗೆ ಕರೆದುಕೊಂಡು ಹೋಗುವುದು ಭಟ್ಟರ ಇರಾದೆ. ನಿರ್ಮಾಪಕರ್‍ಯಾರು ಎಂಬುದು ಮಾತ್ರ ಇನ್ನೂ ನಿಗೂಢವಾಗಿದೆ.

ಕರ್ನಾಟಕದಲ್ಲಿ ತಂಪೆರೆದ 'ಮುಂಗಾರು ಮಳೆ' ಆಂಧ್ರದಲ್ಲಿ ಏನು ಮಾಡುತ್ತದೋ ಕಾದುನೋಡಬೇಕು.





ಜೆನ್ನಿಫರ್ ಕೊತ್ವಾಲ್
'ಸತ್ಯವಾನ್ ಸಾವಿತ್ರಿ'




ಈ ಚಿತ್ರ ಒಂಥರಾ..

ಎರಡು ತಿಂಗಳ ಹಿಂದೆ ನಟಿ ಮಾನ್ಯಾಳ ಬಿಕಿನಿ ಪುರಾಣದಿಂದ ಪತ್ರಿಕೆಗಳ ಮುಖಪುಟ ಸುದ್ದಿಯಾಗಿದ್ದ, ಪ್ರಾರಂಭದಿಂದಲೂ ತರಹೇವಾರಿ ಸುದ್ದಿಗೆ ಆಹಾರವಾಗಿದ್ದ 'ಈ ಪ್ರೀತಿ ಒಂಥರಾ' ಚಿತ್ರ ಮುಂದಿನ ವಾರ ಬಿಡುಗಡೆಗೊಳ್ಳುತ್ತಿದೆ.

ಈ ಚಿತ್ರದ ಒಂದು ಹಾಡಿನಲ್ಲಿ ಕರ್ನಾಟಕದ ರಣಜಿ ಆಟಗಾರರಾದ ಸುನಿಲ್ ಜೋಷಿ, ವಿಜಯಭಾರದ್ವಾಜ್ ಮತ್ತು ನಟಿ ಪ್ರೇಮಾಳ ಸಹೋದರ ಅಯ್ಯಪ್ಪ ಹೆಜ್ಜೆ ಹಾಕಿದ್ದಾರಂತೆ. ಕರ್ನಾಟಕದ ಈ ಮೂವರು ಕ್ರಿಕೆಟಿಗರು ಒಂದು ಹಾಡಿನಲ್ಲಿ ಕುಣಿದದ್ದೇ ತಡ ಇದು ಇನ್ನೊಂದು 'ಲಗಾನ್' ಆಗಿಬಿಡುತ್ತದೆಂದು ಹೇಳಿಕೊಳ್ಳುತ್ತಿದ್ದಾರೆ ನಿರ್ಮಾಪಕ ಪೈ.

ಅಂದಹಾಗೆ 'ಎನ್‌ಕೌಂಟರ್ ದಯಾನಾಯಕ್' ಚಿತ್ರದ ನಾಯಕನಾಗಿದ್ದ ಸಚಿನ್‌ನ ಎರಡನೇ ಚಿತ್ರವಿದು. 'ದಯಾನಾಯಕ್' ಎಂದೆಂದಿಗೂ ನೆನೆಸಿಕೊಳ್ಳುವಂತೆ ಮುಗ್ಗರಿಸಿತ್ತು. 'ಈ ಪ್ರೀತಿ ಒಂಥರಾ' ಚಿತ್ರವೂ ಸಚಿನ್ ಒಬ್ಬ ಲತ್ತೆ ನಾಯಕನೆಂಬ ಹಣೆಪಟ್ಟಿಯನ್ನು ಗ್ಯಾರಂಟಿ ಮಾಡಲಿದೆ ಎಂಬುದು ಗಾಂಧಿನಗರದಿಂದ ಕೇಳಿಬರುತ್ತಿರುವ ಮಾತು.







ತಿಮ್ಮಂದಿರ ಪ್ರಚಾರದ ತೆವಲುಗಳು

"ಈ ಪ್ರೀತಿ ಏಕೆ ಭೂಮಿ ಮೇಲಿದೆ" ಎಂಬ ಪ್ರಶ್ನೆಗೆ ನಟ-ನಿರ್ದೇಶಕ ಪ್ರೇಮ್ ಇನ್ನೂ ಉತ್ತರ ಕೊಡದಿದ್ದರೂ, 'ಮೆಂಟಲ್ ಮಂಜ' ಚಿತ್ರದ ಖ್ಯಾತಿಯ ಸಾಯಿಸಾಗರ್ ಉತ್ತರ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಮೊನ್ನೆ ಬಿಡುಗಡೆಮಾಡಿರುವ 'ತಿಮ್ಮ' ಎಂಬ ತಮ್ಮ ಹೊಸ ಚಿತ್ರದಲ್ಲಿ ಅದರ ಉತ್ತರವನ್ನು ಹೇಳಿದ್ದಾರಂತೆ. ಅದನ್ನೇ ಚಿತ್ರದ ಪೋಸ್ಟರ್‌ಗಳ ಮೇಲೂ ಬರೆಸಿದ್ದಾರೆ ಕೂಡ.

ಗಾಂಧಿನಗರದವರ ಬುದ್ಧಿ ಎಂತಹದ್ದು ನೋಡಿ. ಒಂದೆಡೆ ತಮ್ಮ ಚಿತ್ರದ ಪ್ರಚಾರಕ್ಕಾಗಿ ಪ್ರೇಮ್ ಇನ್ನಿಲ್ಲದ ಪ್ರಯತ್ನಗಳನ್ನೆಲ್ಲ ಮಾಡುತ್ತಿದ್ದರೆ, ಇನ್ನೊಂದೆಡೆ 'ತಿಮ್ಮ'ನ ತಂಡ ಪ್ರೇಮ್‌ನ ಪ್ರಚಾರದ ಲಾಭವನ್ನೆಲ್ಲ ಹೈಜಾಕ್ ಮಾಡಲು ಹೊರಟಿದೆ!

ಎಂತಹದ್ದೇ ಪ್ರಚಾರ ತಂತ್ರಗಳನ್ನು, ಗಿಮಿಕ್‌ಗಳನ್ನು ಮಾಡಿದರೂ ಪ್ರೇಕ್ಷಕ ಪ್ರಭುವಂತೂ ಯಾಮಾರುವುದಿಲ್ಲವೆಂಬುದು ಈ ಜನಕ್ಕೆ ತಿಳಿದಂತಿಲ್ಲ. ನೆಟ್ಟಗೆ ಸಿನಿಮಾ ಮಾಡುವುದನ್ನು ಬಿಟ್ಟು ಬರೀ ಪ್ರಚಾರದ ತೆವಲುಗಳಿಗೆ ದಾಸರಾಗಿರುವ ಈ ಕನ್ನಡದ ತಿಮ್ಮಂದಿರಿಗೆ ಏನೆನ್ನಬೇಕು?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44